ಸಂಪುಟ: 05 ಸಂಚಿಕೆ: 213 ಪುಟಗಳು: 08 ಶುಕ್ರವಾರ 17 ಅಕ್ಟೋಬರ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಮನಸ್ಪಟ್ಟು ಕಲಿತ ಅಕ್ಷರ,
ಮೈಬಗ್ಗಿಸಿ ದುಡಿದು ತಿನ್ನುವ ಅನ್ನ,
ಕಷ್ಟಪಟ್ಟು ಗಳಿಸಿದ ಸಂಪಾದನೆ,
ಇಷ್ಟದಿಂದ ಮಾಡುವ ದೈವಭಕ್ತಿ,
ಯಾರನ್ನು ಯಾವತ್ತೂ
ಕೈ ಬಿಡುವುದಿಲ್ಲ.

## ಕಾಳಸಂತೆಯಲ್ಲಿ ಪಡಿತರ ಮಾರಾಟ ಕಂಡುಬಂದಲ್ಲಿ ಕಠಿಣ ಕ್ರಮ

• ಉದಯವಾಹಿನಿ ಬೆಂಗಳೂರು

ಯಾರೂ ಹಸಿವಿನಿಂದ ಮಲಗಬಾರದು ಎನ್ನುವುದು ನಮ್ಮ ಸರ್ಕಾರದ ಬದ್ಧತೆಯಾಗಿದ್ದು, ಅದಕ್ಕಾಗಿಯೇ ಅನ್ನಭಾಗ್ಯ ಯೋಜನೆಯನ್ನು ಜಾರಿಗೆ ತರಲಾಗಿದೆ. ಕಾಳಸಂತೆಯಲ್ಲಿ ಪಡಿತರ ಮಾರಾಟ ಕಂಡುಬಂದಲ್ಲಿ ಅಂತಹವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ವತಿಯಿಂದ ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ವಿಶ್ವ ಆಹಾರ ದಿನ – 2025 ರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿಗಳು, ನಮ್ಮ ಕವಿ ಸರ್ವಜ್ಞ ಅವರು ಹೇಳಿರುವಂತೆ ''ಅನ್ನ ದೇವರ ಮುಂದೆ ಇನ್ನೂ ದೇವರುಂಟೆ, ಅನ್ನವಿರುವ ತನಕ ಪ್ರಾಣವು, ಜಗದೊಳಗೆ ಅನ್ನವೆ ದೈವ ಎಂದು ಹೇಳಿದ್ದಾರೆ. ಹಾಗೆಯೇ ಕವಿ ಬೇಂದ್ರೆಯವರು ರೈತರನ್ನು ಅನ್ನಬ್ರಹ್ಮ ಎಂದು ಕರೆದಿದ್ದಾರೆ



ಜಗದೊಳಗೆ ಅನ್ನವೆ ದೈವ

ಎಂದರು. ಬಹಳ ಜನರಿಗೆ ಅನ್ನದ ಮಹತ್ವವೇ ಗೊತ್ತಿಲ್ಲ, ಈ ಬಗ್ಗೆ ದೇಶದಾದ್ಯಂತ ಹೆಚ್ಚಿನ ಅರಿವು ಮೂಡಿಸಬೇಕು. ಪ್ರತಿನಿತ್ಯ ಜಗತ್ತಿನಲ್ಲಿ 19,700 ಮಂದಿ ಹಸಿವಿನಿಂದ ಸಾವನ್ನಪ್ಪುತ್ತಿದ್ದಾರೆ. ಆದರೆ ಅನ್ನದ ಮಹತ್ವವನ್ನು ಅರಿಯದೇ ಬಹಳಷ್ಟು ಮಂದಿ ಅನ್ನವನ್ನು ವಿನಾಕಾರಣ ವ್ಯರ್ಥ ಮಾಡುತ್ತಿದ್ದಾರೆ. ಬಹಳ ಹಿಂದೆಯೇ ಅನ್ನ ಮತ್ತು ರೈತರ ಬಗ್ಗೆ ವ್ಯಾಖ್ಯಾನ ನಡೆದಿದೆ ಆದ್ದರಿಂದ ಅನ್ನ ವ್ಯರ್ಥ ಮಾಡುವುದು, ಬಿಸಾಡುವುದು ಅನ್ನಬ್ರಹ್ಮನಿಗೆ ಮಾಡುವ ಅವಮಾನ. ನನಗೆ ಹಸಿವಿನ ಸಂಕಟ, ಅನ್ನದ ಮೌಲ್ಯ ಗೊತ್ತಿರುವುದರಿಂದ ಕರ್ನಾಟಕ ರಾಜ್ಯವನ್ನು ಹಸಿವು ಮುಕ್ತ ರಾಜ್ಯವನ್ನಾಗಿ ಮಾಡಲು ರಾಜ್ಯದಲ್ಲಿ ಅನ್ನಭಾಗ್ಯ ಯೋಜನೆ ಜಾರಿಗೆ ತರಲಾಗಿದೆ. ಮೊದಲು 5 ಕೆಜಿ ಅಕ್ಕಿ ನೀಡಲಾಗುತ್ತಿತ್ತು. ಈಗ 10 ಕೆಜಿ ಅಕ್ಕಿ ನೀಡಲಾಗುತ್ತಿದೆ ಎಂದರು.

ಇತ್ತೀಚೆಗೆ ಕಾಳಸಂತೆಯಲ್ಲಿ ಅಕ್ಕಿ ಮಾರಾಟವಾಗುವುದು ಕಂಡು ಬಂದಿರುವುದರಿಂದ ಐದು ಕೆಜಿ ಅಕ್ಕಿ ಜೊತೆಗೆ ಉಳಿದ ಐದು ಕೆಜಿ ಬೇಳೆ ಕಾಳು, ಸಕ್ಕರೆ, ಉಪ್ಪು, ಅಡುಗೆ ಎಣ್ಣೆಯಂತಹ ಪೌಷ್ಠಿಕ ಆಹಾರ ಕೊಡಲು ತೀರ್ಮಾನಿಸಲಾಗಿದೆ. ಅನ್ನಭಾಗ್ಯದ ಅಕ್ಕಿಯನ್ನು ಸಂಗ್ರಹಿಸಿ ಕಾಳ ಸಂತೆಯಲ್ಲಿ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.

ನಾವು ಒಂದು ಕಾಲದಲ್ಲಿ ಅನ್ನಕ್ಕಾಗಿ ಅಮೆರಿಕದ ಮೇಲೆ ಅವಲಂಬಿತರಾಗಿದ್ದೆವು. ಈಗ ವಿದೇಶಗಳಿಗೆ ರಫ್ತು ಮಾಡುವ ಮಟ್ಟಕ್ಕೆ ಪ್ರಗತಿ ಸಾಧಿಸಿದ್ದೇವೆ ಎಂದರು.

## ಬೇಲೆಕೇರಿ ಬಂದರಿನಲ್ಲಿ ಅಕ್ರಮ ಕಬ್ಬಿಣದ ಅದಿರು ರಫ್ತು

• ಉದಯವಾಹಿನಿ, ನವದೆಹಲಿ

ಬೇಲೆಕೇರಿ ಬಂದರಿನ ಮೂಲಕ ಅಕ್ರಮ ಕಬ್ಬಿಣದ ಅದಿರು ರಫ್ತು ಮಾಡಿದ ಪ್ರಕರಣದಲ್ಲಿ ನಡೆದಿದೆ ಎನ್ನಲಾದ ಅಕ್ರಮ ಹಣ ವರ್ಗಾವಣೆ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯ ಕರ್ನಾಟಕ ಮತ್ತು ಹರಿಯಾಣದ ಹಲವು ಸ್ಥಳಗಳಲ್ಲಿ ದಾಳಿ ನಡೆಸಿದೆ. ಹರಿಯಾಣದ ಗುರುಗ್ರಾಮ್‌ನ ಕೆಲವು ಸ್ಥಳಗಳು, ಬೆಂಗಳೂರು ಮತ್ತು ಹೊಸಪೇಟೆ (ವಿಜಯನಗರ ಜಿಲ್ಲೆ)ಯಲ್ಲಿ ಕನಿಷ್ಠ 20 ಸ್ಥಳಗಳ ಮೇಲೆ ಹಣ ವರ್ಗಾವಣೆ ತಡೆ ಕಾಯ್ದೆ ನಿಬಂಧನೆಗಳ ಅಡಿಯಲ್ಲಿ ದಾಳಿ ಮಾಡಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಬೇಲೆಕೇರಿ ಬಂದರಿನಿಂದ ಕಬ್ಬಿಣದ ಅದಿರನ್ನು ಅಕ್ರಮವಾಗಿ ರಫ್ತು ಮಾಡಿದ ಪ್ರಕರಣಗಳನ್ನು ತನಿಖೆ ಮಾಡಲು ಸುಪ್ರೀಂ ಕೋರ್ಟ್ ನಿರ್ದೇಶಿಸಿದ ನಂತರ, ಈ ಪ್ರಕರಣದಲ್ಲಿ ಸಿಬಿಐ ಸಲ್ಲಿಸಿದ ಹಲವಾರು ಎಫ್‌ಐಆರ್‌ಗಳು, ಚಾರ್ಜ್‌ಶೀಟ್‌ಗಳಿಂದ ಹಣ ವರ್ಗಾವಣೆ ತನಿಖೆ ಹುಟ್ಟಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## 2027ರ ಏಪ್ರಿಲ್‌ನಲ್ಲಿ ಬೆಂಗಳೂರಲ್ಲಿ ಜೈಟೆಕ್ಸ್ ಗ್ಲೋಬಲ್ ಸಮ್ಮೇಳನ

• ಉದಯವಾಹಿನಿ ಬೆಂಗಳೂರು

ವಿಶ್ವದ ಅತಿದೊಡ್ಡ ತಂತ್ರಜ್ಞಾನ ಮತ್ತು ಎಐ ಕಾರ್ಯಕ್ರಮಗಳ ಜಾಲವಾದ ಜೈಟೆಕ್ಸ್ ಗ್ಲೋಬಲ್ 2027ರ ಏಪ್ರಿಲ್ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಜೈಟೆಕ್ಸ್ ಎಐ ಇಂಡಿಯಾ ಸಮ್ಮೇಳನದೊಂದಿಗೆ ಭಾರತಕ್ಕೆ ಪದಾರ್ಪಿಸಲಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಈ ಕಾರ್ಯಕ್ರಮವನ್ನು ದುಬೈ ವರ್ಲ್ಡ್ ಟ್ರೇಡ್ ಸೆಂಟರ್, ಇಂಟರ್‌ನ್ಯಾಷನಲ್ ಸಂಸ್ಥೆಗಳೊಂದಿಗೆ ಕರ್ನಾಟಕ ಸರ್ಕಾರದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ಕಾರ್ಯತಂತ್ರದ ಸಹಭಾಗಿತ್ವದಲ್ಲಿ ಆಯೋಜಿಸಲಾಗುವುದು ಎಂದು ಸಚಿವರು ಮಾಹಿತಿ ನೀಡಿದ್ದಾರೆ. ದುಬೈನಲ್ಲಿ ನಡೆದ ಜೈಟೆಕ್ಸ್ ಗ್ಲೋಬಲ್–2025 ಸಮ್ಮೇಳನದಲ್ಲಿ ಈ ಘೋಷಣೆ ಮಾಡಲಾಯಿತು.

ಈ ಸಭೆಯಲ್ಲಿ ಭಾರತೀಯ ತಂತ್ರಜ್ಞಾನ ಸಮುದಾಯ ಅಧಿಕ ಪ್ರಮಾಣದಲ್ಲಿ ಭಾಗವಹಿಸಿದ್ದು, ಇದು ಭಾರತೀಯ ನಾವೀನ್ಯಕಾರರು ಮತ್ತು ಜೈಟೆಕ್ಸ್ ಪರಿಸರ ವ್ಯವಸ್ಥೆಯ ನಡುವಿನ ಬಲವಾದ ಮತ್ತು ದೀರ್ಘಕಾಲೀನ ಸಂಬಂಧಗಳನ್ನು ಪ್ರತಿಬಿಂಬಿಸುತ್ತದೆ ಎಂದೂ ಸಚಿವರು ಹೇಳಿದ್ದಾರೆ.

## ರಾಜ್ಯ ಮಾಹಿತಿ ಆಯುಕ್ತರಾಗಿ ಪ್ರಮಾಣ ವಚನ ಸ್ವೀಕಾರ

• ಉದಯವಾಹಿನಿ ಬೆಂಗಳೂರು

ನೂತನವಾಗಿ ಕರ್ನಾಟಕ ರಾಜ್ಯ ಮಾಹಿತಿ ಆಯುಕ್ತರಾಗಿ ನೇಮಕವಾಗಿರುವ ಡಾ. ರಿಚರ್ಡ್ ವಿನ್ಸೆಂಟ್ ಡಿಸೋಜ, ಬಿ. ವೆಂಕಟ್ ಸಿಂಗ್ ಹಾಗೂ ಡಾ. ಮಹೇಶ್ ವಾಳ್ವೇಕರ್ ಅವರು ಅಧಿಕಾರ ಪ್ರಮಾಣ ವಚನ ಸ್ವೀಕರಿಸಿದರು. ಗುರುವಾರ ರಾಜಭವನದ ಬ್ಯಾಂಕ್ವೇಟ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ಸರಳ ಸಮಾರಂಭದಲ್ಲಿ ಗೌರವಾನ್ವಿತ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ನೂತನವಾಗಿ ನೇಮಕವಾಗಿರುವ ಗೌರವಾನ್ವಿತ ರಾಜ್ಯ ಮಾಹಿತಿ ಆಯುಕ್ತರುಗಳಿಗೆ ಅಧಿಕಾರ ಪ್ರಮಾಣ ವಚನ ಬೋಧಿಸಿದರು.

ಬೆಂಗಳೂರು ಪೀಠಕ್ಕೆ ನೂತನವಾಗಿ ನೇಮಕವಾಗಿರುವ ರಾಜ್ಯ ಮಾಹಿತಿ ಅಯುಕ್ತರುಗಳಾದ ಡಾ. ರಿಚರ್ಡ್ ವಿನ್ಸೆಂಟ್ ಡಿಸೋಜ ಹಾಗೂ ಡಾ. ಮಹೇಶ್ ವಾಳ್ವೇಕರ್ ಅವರು ದೇವರ ಹೆಸರಿನಲ್ಲಿ ಅಧಿಕಾರ ಪ್ರಮಾಣ ವಚನ ಸ್ವೀಕರಿಸಿದರೆ, ಕಲಬುರಗಿ ಪೀಠಕ್ಕೆ ನೇಮಕವಾಗಿರುವ ಬಿ. ವೆಂಕಟ್ ಸಿಂಗ್ ಅವರು ದೇವರು ಮತ್ತು ಸಂವಿಧಾನದ ಹೆಸರಿನಲ್ಲಿ ಅಧಿಕಾರ ಪ್ರಮಾಣ ವಚನ ಸ್ವೀಕರಿಸಿದರು.

## ವೈಫಲ್ಯ ಮುಚ್ಚಿಕೊಳ್ಳಲು ಆರ್‌ಎಸ್‌ಎಸ್ ಹೆಸರು ಬಳಕೆ

• ಉದಯವಾಹಿನಿ ಬೆಂಗಳೂರು

ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ತನ್ನ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹೆಸರು ಬಳಸಿಕೊಂಡು ಜನರ ದಿಕ್ಕು ತಪ್ಪಿಸುತ್ತಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ದೂರಿದ್ದಾರೆ. 'ಪಾಕಿಸ್ತಾನ್ ಜಿಂದಾಬಾದ್ ಎಂದು ಕೂಗುವವರ ಮೇಲೆ ಯಾವ ಕ್ರಮಗಳನ್ನೂ ಜರುಗಿಸಲಿಲ್ಲ. ಪಿಎಫ್‌ಐ, ಕೆಎಫ್‌ಡಿಯಂತಹ ದೇಶವಿರೋಧಿ ಸಂಘಟನೆಗಳನ್ನು ನಿಷೇಧಿಸಿಲ್ಲ. ಅವರ ಚಟುವಟಿಕೆಗಳ ಮೇಲೆ ಕನಿಷ್ಠ ನಿಯಂತ್ರಣ ಸಾಧಿಸುವ ನಿರ್ಧಾರವನ್ನು ಕೈಗೊಳ್ಳಲಿಲ್ಲ' ಎಂದು ದೂರಿದ್ದಾರೆ. ಸ್ವಾತಂತ್ರ್ಯಾ ನಂತರ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಮರ್ಪಣಾ ಸೇವೆ ಹಾಗೂ ರಾಷ್ಟ್ರಭಕ್ತಿ ಮೂಡಿಸುವ ಚಟುವಟಿಕೆಗಳು ನಿರಂತರವಾಗಿ ಸಾಗುತ್ತಾ ಬಂದಿವೆ. ಇದನ್ನು ಹತ್ತಿಕ್ಕಲು ಅಂದಿನಿಂದಲೂ ಇಂತಹ ಹಲವು ಪ್ರಯತ್ನಗಳು ನಡೆಯುತ್ತಲೇ ಇವೆ.

# ನಕ್ಸಲ್ ವಿರುದ್ಧ ಶಾ ಸವಾಲ್

## ಕೆಂಪು ಉಗ್ರರ ಕೋಟೆ ಛಿದ್ರ



**ಛತ್ತೀಸ್‌ಗಢದಲ್ಲಿ 170 ನಕ್ಸಲರ ಶರಣಾಗತಿ**

1 ಛತ್ತೀಸ್‌ಗಢದ 170 ಮಾವೋವಾದಿಗಳು ಮುಖ್ಯವಾಹಿನಿಗೆ

2 ಶಸ್ತ್ರಾಸ್ತ್ರ ತ್ಯಜಿಸದವರಿಗೆ ಮರಣದಂಡನೆ ಫಿಕ್ಸ್: ಗೃಹ ಸಚಿವ

3 ದೇಶದಿಂದ ನಕ್ಸಲಿಸಂ ಅನ್ನು ಬೇರುಸಹಿತ ಕಿತ್ತು ಹಾಕಲು ನಾವು ಬದ್ಧ

• ಉದಯವಾಹಿನಿ, ನವದೆಹಲಿ

ಛತ್ತೀಸ್‌ಗಢದ ಅಬುಜ್‌ಮರ್ ಗುಡ್ಡಗಾಡು ಅರಣ್ಯ ಪ್ರದೇಶ ಮತ್ತು ಉತ್ತರ ಬಸ್ತಾರ್‌ನಲ್ಲಿ 170 ಮಾವೋವಾದಿಗಳು ಶರಣಾದ ನಂತರ ಈ ಪ್ರದೇಶಗಳನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ನಕ್ಸಲ್ ಮುಕ್ತ ಎಂದು ಘೋಷಿಸಿದ್ದಾರೆ. ಎಡಪಂಥೀಯ ಉಗ್ರವಾದದ ವಿರುದ್ಧದ ಹೋರಾಟದಲ್ಲಿ ಇದನ್ನು ಮಹತ್ವದ ದಿನ ಎಂದು ಕರೆದ ಅಮಿತ್ ಶಾ, ಛತ್ತೀಸ್‌ಗಢದಲ್ಲಿ 170 ನಕ್ಸಲರು ಶರಣಾಗಿದ್ದಾರೆ. ರಾಜ್ಯದಲ್ಲಿ 27 ಜನರು ತಮ್ಮ ಶಸ್ತ್ರಾಸ್ತ್ರಗಳನ್ನು ತ್ಯಜಿಸಿದ್ದರು. ಮಹಾರಾಷ್ಟ್ರದಲ್ಲಿ 61 ಜನರು ಮುಖ್ಯವಾಹಿನಿಗೆ ಮರಳಿದರು. ಒಟ್ಟಾರೆಯಾಗಿ, ಕಳೆದ 2 ದಿನಗಳಲ್ಲಿ 258 ಎಡಪಂಥೀಯ ಉಗ್ರಗಾಮಿಗಳು ಹಿಂಸಾಚಾರವನ್ನು ತ್ಯಜಿಸಿದ್ದಾರೆ ಎಂದು ಹೇಳಿದ್ದಾರೆ. ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯಲ್ಲಿ 10 ಮಹಿಳೆಯರು ಸೇರಿದಂತೆ 27 ಮಾವೋವಾದಿಗಳು ಭದ್ರತಾ ಪಡೆಗಳಿಗೆ ಶರಣಾಗಿದ್ದಾರೆ. ಈ ಗುಂಪಿನಲ್ಲಿ ದಂಗೆಕೋರ ಜಾಲದ ಅತ್ಯಂತ ಅಪಾಯಕಾರಿ ಘಟಕಗಳಲ್ಲಿ ಒಂದಾದ ಪೀಪಲ್ಸ್ ಲಿಬರೇಶನ್ ಗೆರಿಲ್ಲಾ ಆರ್ಮಿ (ಪಿಎಲ್‌ಜಿಎ) ಬೆಟಾಲಿಯನ್ -1ರ ಇಬ್ಬರು ಹಾರ್ಡ್‌ಕೋರ್ ಕಾರ್ಯಕರ್ತರು ಸೇರಿದ್ದಾರೆ. ಮುಖ್ಯವಾಹಿನಿಗೆ ಸೇರಿದ ಶರಣಾಗುತ್ತಿರುವ ಮಾವೋವಾದಿಗಳನ್ನು ಸ್ವಾಗತಿಸಿದ ಅಮಿತ್ ಶಾ, ಹಿಂಸಾಚಾರವನ್ನು ತ್ಯಜಿಸುವ ಮತ್ತು ಭಾರತದ ಸಂವಿಧಾನದಲ್ಲಿ ನಂಬಿಕೆ ಇಡುವ ಅವರ ನಿರ್ಧಾರವನ್ನು ಶ್ಲಾಘಿಸಿದರು. ಭಾರತದ ಸಂವಿಧಾನದ ಮೇಲಿನ ನಂಬಿಕೆಯನ್ನು ವ್ಯಕ್ತಪಡಿಸಿ, ಹಿಂಸಾಚಾರವನ್ನು ತ್ಯಜಿಸುವ ಅವರ ನಿರ್ಧಾರವನ್ನು ನಾನು ಶ್ಲಾಘಿಸುತ್ತೇನೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಈ ಪಿಡುಗನ್ನು ಕೊನೆಗೊಳಿಸಲು ನಿರಂತರ ಪ್ರಯತ್ನಗಳನ್ನು ಮಾಡುತ್ತಿದೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ ಎಂದಿದ್ದಾರೆ. ಛತ್ತೀಸ್‌ಗಢದ ಅಬುಜ್‌ಮರ್ ಮತ್ತು ಉತ್ತರ ಬಸ್ತರ್ ಅನ್ನು ನಕ್ಸಲ್ ಭಯೋತ್ಪಾದನೆಯಿಂದ ಮುಕ್ತಗೊಳಿಸಲಾಗಿದೆ ಎಂದು ಅಮಿತ್ ಶಾ ಘೋಷಿಸಿದ್ದಾರೆ. ಒಂದು ಕಾಲದಲ್ಲಿ ಭಯೋತ್ಪಾದಕ ನೆಲೆಗಳಾಗಿದ್ದ ಛತ್ತೀಸ್‌ಗಢದ ಅಬುಜ್‌ಮರ್ ಮತ್ತು ಉತ್ತರ ಬಸ್ತರ್ ಅನ್ನು ಇಂದು ನಕ್ಸಲ್ ಭಯೋತ್ಪಾದನೆಯಿಂದ ಮುಕ್ತಗೊಳಿಸಲಾಗಿದೆ ಎಂಬುದು ಸಂತೋಷದ ವಿಷಯ ಎಂದು ಅವರು ಹೇಳಿದ್ದಾರೆ.

**ಶರಣಾಗಿ ಇಲ್ಲವೇ ಭದ್ರತಾ ಪಡೆಗಳ ಕೋಪ ಎದುರಿಸಿ:** ನಮ್ಮ ನೀತಿ ಸ್ಪಷ್ಟ. ನಾವು ಶರಣಾಗಲು ಬಯಸುವವರನ್ನು ಸ್ವಾಗತಿಸುತ್ತೇವೆ. ಬಂದೂಕು ಹಿಡಿಯುವುದನ್ನೇ ಮುಂದುವರಿಸುವವರು ನಮ್ಮ ಪಡೆಗಳ ಕೋಪಕ್ಕೆ ಗುರಿಯಾಗಬೇಕಾಗುತ್ತದೆ ಎಂದು ಇದೇ ವೇಳೆ ಎಚ್ಚರಿಕೆ ನೀಡಿದ್ದಾರೆ.ನಕ್ಸಲಿಸಂನ ಹಾದಿಯಲ್ಲಿರುವವರು ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಮುಖ್ಯವಾಹಿನಿಗೆ ಬರಬೇಕೆಂದು ನಾನು ಮತ್ತೊಮ್ಮೆ ಮನವಿ ಮಾಡುತ್ತೇನೆ ಎಂದು ಶಾ ತಿಳಿಸಿದರು.ಇದೇ ವೇಳೆ, ಶರಣಾದವರನ್ನು ಉಲ್ಲೇಖಿಸುತ್ತಾ, ದೇಶದ ಸಂವಿಧಾನದ ಮೇಲಿನ ನಂಬಿಕೆ ಇಟ್ಟು ಹಿಂಸೆ ತ್ಯಜಿಸುವ ಅವರ ನಿರ್ಧಾರವನ್ನು ನಾನು ಮೆಚ್ಚುತ್ತೇನೆ ಎಂದು ತಿಳಿಸಿದ್ದಾರೆ.

2026ರ ಮಾರ್ಚ್ 31ಕ್ಕೆ ಮೊದಲು ದೇಶದಿಂದ ನಕ್ಸಲಿಸಂ ಅನ್ನು ಬೇರುಸಹಿತ ಕಿತ್ತು ಹಾಕಲು ನಾವು ಬದ್ಧ ಎಂದು ಶಾ ಪುನರುಚ್ಚರಿಸಿದ್ದಾರೆ.

**ನಕ್ಸಲ್ ಮುಕ್ತ**

ಒಂದು ಕಾಲದಲ್ಲಿ ನಕ್ಸಲರ ನೆಲೆಗಳಾಗಿದ್ದ ಛತ್ತೀಸ್‌ಗಢದ ಅಬುಜ್‌ಮರ್ ಮತ್ತು ಉತ್ತರ ಬಸ್ತಾರ್ ಪ್ರದೇಶಗಳನ್ನು ಇಂದು ನಕ್ಸಲ್ ಹಿಂಸಾಚಾರದಿಂದ ಮುಕ್ತ ಎಂದು ಘೋಷಿಸಲಾಗಿದೆ ಎಂಬುದು ಬಹಳ ಸಂತೋಷದ ವಿಷಯ. ದಕ್ಷಿಣ ಬಸ್ತಾರ್‌ನಲ್ಲಿ ನಕ್ಸಲ್‌ವಾದದ ಕುರುಹುಗಳ ಇನ್ನೂ ಇವೆ. ಅವುಗಳನ್ನು ನಮ್ಮ ಭದ್ರತಾ ಪಡೆಗಳು ಶೀಘ್ರದಲ್ಲೇ ಅಳಿಸಿಹಾಕುತ್ತವೆ ಎಂದು ಅಮಿತ್ ಶಾ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ತಿಳಿಸಿದ್ದಾರೆ.

**2,100 ನಕ್ಸಲರ ಶರಣಾಗತಿ**

ಛತ್ತೀಸ್‌ಗಢದಲ್ಲಿ ಬಿಜೆಪಿ ಸರ್ಕಾರ ರಚನೆಯಾದ ನಂತರ ಅಂದರೆ 2024ರ ಜನವರಿಯಿಂದ ಈವರೆಗೆ 2,100 ನಕ್ಸಲರು ಶರಣಾಗಿದ್ದಾರೆ. 1,785 ಜನರನ್ನು ಬಂಧಿಸಲಾಗಿದೆ. ಸುಮಾರು 477 ಜನರನ್ನು ಹತ್ಯೆ ಮಾಡಲಾಗಿದೆ ಎಂದು ಶಾ ಮಾಹಿತಿ ನೀಡಿದ್ದಾರೆ. ಕಳೆದ ತಿಂಗಳು, ಜಾರ್ಖಂಡ್‌ನ ಹಜಾರಿಬಾಗ್‌ನಲ್ಲಿ ಭದ್ರತಾ ಪಡೆಗಳು ಮೂವರು ಪ್ರಮುಖ ನಕ್ಸಲ್ ನಾಯಕರನ್ನು ಹೊಡೆದುರುಳಿಸಿದ್ದರು. ಈ ಪೈಕಿ ಕುಖ್ಯಾತ ನಕ್ಸಲ್ ನಾಯಕ ರಘುನಾಥ್ ಸಾವನ್ನಪ್ಪಿದ್ದ. ಸಿಪಿಐ (ಮಾವೋವಾದಿ) ಸಂಘಟನೆಯ ವಿಶೇಷ ಪ್ರದೇಶ ಸಮಿತಿ ಸದಸ್ಯನಾಗಿದ್ದ ಕಾನಾ ಅಲಿಯಾಸ್ ಶಿಬು ಮಾಂಝಿ ಅಲಿಯಾಸ್ ರಘುನಾಥ್ ಹೆಂಬ್ರಾಮ್ ಎಂಬಾತ ರಾಜ್ಯದ ಒಂದು ತುದಿಯಿಂದ ಇನ್ನೊಂದು ತುದಿಯವರೆಗೂ ನಕ್ಸಲ್ ವಾದವನ್ನು ಹರಡಿದ್ದ ಎಂದು ಅಧಿಕಾರಿಗಳು ಹೇಳಿದ್ದರು. ಅಷ್ಟು ಮಾತ್ರ ಅಲ್ಲದೇ, ನಿರ್ಮಲ್ ಬಿರ್ಸೆನ್, ಶಿಬು ಮತ್ತು ಚಂಚಲ್ ಎಂಬ ಬೇರೆ ಬೇರೆ ಹೆಸರುಗಳಿಂದ ಕರೆಯಿಸಿಕೊಳ್ಳುತ್ತಿದ್ದ ಈತನ ವಿರುದ್ಧ ಠಾಣೆಗಳಲ್ಲಿ 39ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದವು.



**ಮೂರು ದಿನ ಗೃಹ ಸಚಿವ ಶಾ ಪ್ರವಾಸ**

ವಿಧಾನಸಭಾ ಚುನಾವಣೆಗೆ ಸಜ್ಜಾಗಿರುವ ಬಿಹಾರದಲ್ಲಿ ಮೂರು ದಿನಗಳ ಕಾಲ ಕೇಂದ್ರ ಗೃಹ ಸಚಿವ ಶಾ ಪ್ರವಾಸ ಕೈಗೊಳ್ಳಲಿದ್ದಾರೆ. ಈ ಭೇಟಿಯಲ್ಲಿ ಅವರು ಸಂಘಟನಾತ್ಮಕ ಸಭೆ, ಮೈತ್ರಿ ಪಕ್ಷದ ನಾಯಕರೊಂದಿಗೆ ಸಭೆ ನಡೆಸಲಿದ್ದು, ಸಾರ್ವಜನಿಕ ಸಭೆಯಲ್ಲೂ ಚುನಾವಣಾ ಪ್ರಚಾರ ನಡೆಸಲಿದ್ದಾರೆ. ಬಿಜೆಪಿ ತಮ್ಮ ಹಂಚಿಕೆಯ 101 ಸ್ಥಾನಗಳಿಗೂ ಅಭ್ಯರ್ಥಿಗಳನ್ನು ಘೋಷಣೆ ಮಾಡಿದ್ದು. ಈ ಪ್ರವಾಸದ ವೇಳೆ ಕೆಲವು ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ ವೇಳೆ ಅಮಿತ್ ಶಾ ಕೂಡ ಹಾಜರಿರುವ ಸಾಧ್ಯತೆಯಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

**ಬಿಜೆಪಿ ನಾಯಕರು ರಾಜ್ಯಕ್ಕೆ ಭೇಟಿ**

ಬಿಜೆಪಿಯ ಹಿರಿಯ ನಾಯಕ, ಎನ್‌ಡಿಎ ಮೈತ್ರಿಯ ಎಲ್ಲಾ ಘಟಕಗಳಿಗೆ ಅಭ್ಯರ್ಥಿಗಳನ್ನು ಘೋಷಣೆ ಮಾಡಲಾಗಿದೆ. ಮುಂದಿನ ನಾಲ್ಕು ದಿನದಲ್ಲಿ ಎಲ್ಲಾ 243 ಸ್ಥಾನಗಳಲ್ಲಿ ನಾಮಪತ್ರ ಸಲ್ಲಿಕೆ ನಡೆಯಲಿದೆ. ಎನ್‌ಡಿಎ ಪಾಲುದಾರರಲ್ಲಿ ಉತ್ತಮ ಸಮನ್ವಯ ಖಚಿತಪಡಿಸಿಕೊಳ್ಳಲು ಪಕ್ಷದ ಎಲ್ಲಾ ನಾಯಕರಿಗೆ ಶಾ ಸೂಚನೆಗಳನ್ನು ನೀಡಲಿದ್ದಾರೆ ಎಂದು ತಿಳಿಸಿದ್ದಾರೆ.ಅಕ್ಟೋಬರ್ 20ರವರೆಗೆ ನಡೆಯಲಿರುವ ಎರಡೂ ಹಂತಗಳ ಚುನಾವಣೆಗೆ ನಾಮಪತ್ರ ಸಲ್ಲಿಕೆಯ ಸಮಯದಲ್ಲಿ ಅಭ್ಯರ್ಥಿಗಳ ಬೆಂಬಲವಾಗಿ ಹಲವು ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಕೇಂದ್ರ ಸಚಿವರು ಸೇರಿದಂತೆ ಉನ್ನತ ಬಿಜೆಪಿ ನಾಯಕರು ರಾಜ್ಯಕ್ಕೆ ಭೇಟಿ ನೀಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.



# ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ಸಿಎಂ ಸಿದ್ದರಾಮಯ್ಯ ಬ್ರೇಕ್!

● ಸಚಿವ ಸಂಪುಟದಲ್ಲಿ ಮಹತ್ವದ ತೀರ್ಮಾನ ● ಸರ್ಕಾರಿ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಕಾರ್ಯಕ್ರಮಗಳೆಲ್ಲ ರದ್ದು

• ಉದಯವಾಹಿನಿ ಬೆಂಗಳೂರು

ಸರ್ಕಾರಿ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ನಿರ್ಬಂಧ ಹಾಕುವಂತೆ ಸಚಿವ ಪ್ರಿಯಾಂಕ್ ಖರ್ಗೆ ಬರೆದಿದ್ದ ಪತ್ರಕ್ಕೆ ಸರ್ಕಾರ ಸ್ಪಂದಿಸಿದ್ದು, ಖಾಸಗಿ ಸಘ ಸಂಸ್ಥೆಗಳು ಸಂಘಟನೆಗಳು ಸಾರ್ವಜನಿಕ ಸ್ಥಳಗಳಲ್ಲಿ ಚಟುವಟಿಕೆಗಳನ್ನು ಕಾನೂನು ಬದ್ದವಾಗಿ ನಡೆಸಲು ಪೂರ್ವ ಅನುಮತಿ ಕಡ್ಡಾಯಗೊಳಿಸಲಾಗಿದೆ. ಈ ಬಗ್ಗೆ ಸಿಎಂ ಸಿದ್ದರಾಮಯ್ಯನವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟದಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಈ ಮೂಲಕ ಆರ್‌ಎಸ್‌ಎಸ್ ಹೆಸರು ಉಲ್ಲೇಖ ಮಾಡದೆ ಅದರ ಕಾರ್ಯ ಚಟುವಿಟಕೆಗಳಿಗೆ ಕಡಿವಾಣ ಹಾಕಲು ಮುಂದಾಗಿದೆ.

**ತಮಿಳುನಾಡು ಮಾದರಿಯಲ್ಲೇ ಕ್ರಮ:** 2013 ರ ಬಿಜೆಪಿ ಸರ್ಕಾರದ ಆದೇಶವನ್ನೇ ಮುಂದಿಟ್ಟು ಸಿದ್ದರಾಮಯ್ಯ ಸರ್ಕಾರ, ತಮಿಳುನಾಡು ಸರ್ಕಾರ ಕೈಗೊಂಡಿರುವ ನಿರ್ಧಾರದಂತೆ ಖಾಸಗಿ ಸಂಸ್ಥೆಗಳು, ಸಂಘಟನೆಗಳು ಚಟುವಟಿಕೆಗಳನ್ನ ನಡೆಸಲು ಪೂರ್ವಾನುಮತಿ ಕಡ್ಡಾಯ ಮಾಡಿ ಹೊಸ ನಿಯಮ ತರಲು ಮುಂದಾಗಿದ್ದು, ತನ್ನ ತೀರ್ಮಾನದಲ್ಲಿ ಎಲ್ಲಿಯೂ ಆರ್‌ಎಸ್‌ಎಸ್ ಪದ ಬಳಕೆ ಮಾಡದೇ ಸರ್ಕಾರ ಖಾಸಗಿ ಸಂಸ್ಥೆಗಳು ಎಂದು ಉಲ್ಲೇಖಿಸಿ ಜಾಣ್ಮೆ ನಡೆ ಅನುಸರಿಸಿದೆ. ಈ ನಿಯಮ ಜಾರಿಯಾದರೆ ಆರ್‌ಎಸ್‌ಎಸ್ ಮಾತ್ರವಲ್ಲ ಖಾಸಗಿ ಸಂಘ ಸಂಸ್ಥೆಗಳು / ಸಂಘಟನೆಗಳು ಸರ್ಕಾರಿ ಸ್ಥಳಗಳಲ್ಲಿ ಚಟುವಟಿಕೆಗಳನ್ನು ನಡೆಸುವುದಕ್ಕೆ ಕಡಿವಾಣ ಬೀಳಲಿದೆ. ಯಾರೇ ಯಾವುದೇ ಕಾರ್ಯಕ್ರಮ ಮಾಡುವುದಾದರೂ ಅನುಮತಿ



ಪಡೆಯಬೇಕಾಗುತ್ತದೆ.

**ಕ್ಯಾಬಿನೆಟ್ ಸಭೆ ಬಳಿಕ ಪ್ರಿಯಾಂಕ್ ಖರ್ಗೆ ಹೇಳಿದ್ದಿಷ್ಟು:** ಇನ್ನು ಕ್ಯಾಬಿನೆಟ್ ಸಭೆ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸಚಿವ ಪ್ರಿಯಾಂಕ್ ಖರ್ಗೆ, ಸರ್ಕಾರಿ ಸ್ಥಳಗಳಲ್ಲಿ ಖಾಸಗಿ ಕಾರ್ಯಕ್ರಮಗಳನ್ನ ಮಾಡಲು ಅನುಮತಿ ಪಡೆಯಬೇಕು .ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚೆಯಾಗಿದೆ. ಯಾವುದೇ ಸಂಘಟನೆಗಳು ,ಧರ್ಮದವರು ಅನುಮತಿ ಪಡೆಯಲೇಬೇಕು. ಈ ಸಂಬಂಧ ಸಂಬಂಧ ಹೊಸ ನಿಯಮಗಳನ್ನು ಕಾನೂನಾತ್ಮಕವಾಗಿ ಜಾರಿ ತರಲಾಗುವುದು. ಕಾನೂನು ನಮಗೂ, ನಿಮಗೂ, ಎಲ್ಲರಿಗೂ ಒಂದೇ. ಅನುಮತಿ ಪಡೆದು ಕಾರ್ಯಕ್ರಮ ಮಾಡಲು ಏನು ತೊಂದರೆ. ಯಾವುದೇ ತೊಂದರೆ ಆಗೋದಿಲ್ಲ ಎಂದರೆ ಕಾರ್ಯಕ್ರಮಕ್ಕೆ ಪೊಲೀಸರು ಅನುಮತಿ ಕೊಡುತ್ತಾರೆ ಎಂದರು.

ಶಾಲೆ, ಸರ್ಕಾರಿ ಜಾಗ, ಅನುದಾನಿತ ಶಿಕ್ಷಣ ಸಂಸ್ಥೆಗಳು ಯಾವುದೇ ಚಟುವಟಿಕೆಗೆ ಅವಕಾಶ ಇಲ್ಲ. ಹಿಂದೆ ಕೆಲವು ಅದೇಶಗಳನ್ನ ಕ್ರೂಢೀಕರಿಸಿ ಹೊಸ ಕಾನೂನು ಜಾರಿಗೆ ತರುತ್ತೇವೆ. ಸಂಘ ಸಂಸ್ಥೆಗಳ ನಿಯಂತ್ರಣ ಮಾಡುವುದು ಸಾಧ್ಯವಿಲ್ಲ.

ಆದರೆ ಸರ್ಕಾರದ ಜಾಗದಲ್ಲಿ ಕಾರ್ಯಕ್ರಮ ಮಾಡಲು ಸಾಧ್ಯವಿಲ್ಲ. ಅನುಮತಿ ಪಡೆದು ಕಾರ್ಯಕ್ರಮ ಮಾಡಬೇಕು. ಲಾಠಿ ಬೀಸುವುದು, ಪಥ ಸಂಚಲನ ಹೋಗುವುದು ಸಾಧ್ಯವಿಲ್ಲ ಎಂದು ಹೇಳಿದರು.



**ಈಶ್ವರ್ ಖಂಡ್ರೆ ಹೇಳಿದ್ದೇನು**

ಅನಧಿಕೃತ ಕಾರ್ಯಕ್ರಮ ಕೋಮು ಸಂಘರ್ಷಕ್ಕೆ ಕಾರಣವಾಗುತ್ತದೆ. ಪ್ರಿಯಾಂಕ್ ಬಗ್ಗೆ ಆರ್‌ಎಸ್‌ಎಸ್‌ನವರು ತುಂಬಾ ಲಘುವಾಗಿ ಮಾತನಾಡಿದ್ದಾರೆ. ಪ್ರಾಯೋಜಿತ ಆರ್‌ಎಸ್‌ಎಸ್‌ನ ನಿಜ ಬಣ್ಣ ಬಯಲಾಗಿದೆ. ಅಂತಹವರ ವಿರುದ್ಧ ಕಾನೂನು ರೀತಿಯ ಕ್ರಮ ಜರುಗಿಸಬೇಕು . ಇತರ ಸರ್ಕಾರದ ಜಾಗದಲ್ಲಿ ಅನಧಿಕೃತ ಕಾರ್ಯಕ್ರಮ ಮಾಡುವುದು ಕೋಮು ಸಂಘರ್ಷಕ್ಕೆ ಕಾರಣವಾಗುತ್ತದೆ. ಇದರ ಬಗ್ಗೆ ಕಾನೂನು ಸಚಿವರು ಸುದೀರ್ಘವಾಗಿ ಮಾತನಾಡ್ತಾರೆ ಎಂದರು.



**ಮನವಿಗೆ ಸ್ಪಂದಿಸಿದ ಸರ್ಕಾರ**

ಸಚಿವ ಪ್ರಿಯಾಂಕ್ ಖರ್ಗೆ ಅವರು ಈ ಸಂಬಂಧ ಸಿಎಂ ಸಿದ್ದರಾಮಯ್ಯನವರಿಗೆ ಪತ್ರ ಬರೆದ್ದರು. ಸರ್ಕಾರಿ ಸ್ಥಳಗಳಲ್ಲಿ ಆರ್ ಎಸ್‌ಎಸ್ ಕಾರ್ಯಚಟುವಟಿಕೆಗಳನ್ನು ರದ್ದುಗೊಳಿಸಬೇಕೆಂದು ಪತ್ರದ ಮೂಲಕ ಮನವಿ ಮಾಡಿದ್ದರು. ಪ್ರಿಯಾಂಕ್ ಖರ್ಗೆ ಪತ್ರ ಬರೆದ ಬೆನ್ನಲ್ಲೇ ಭಾರೀ ವಿವಾದ ಸೃಷ್ಟಿಸಿದ್ದು, ಹಿಂದೂ ಸಂಘಟನೆಗಳು ಹಾಗೂ ಬಿಜೆಪಿ ಪ್ರಿಯಾಂಕ್ ಖರ್ಗೆ ನಡೆಯನ್ನು ಕಟುವಾಗಿ ಖಂಡಿಸಿದೆ. ಅಲ್ಲದೇ ಖರ್ಗೆಗೆ ವಿರುದ್ಧ ವ್ಯಾಪಕ ಟೀಕೆಗಳು ವ್ಯಕ್ತವಾಗುತ್ತಿವೆ.ಇದರ ನಡುವೆಯೂ ಸಹ ಇದೀಗ ಸಿದ್ದರಾಮಯ್ಯ ಸರ್ಕಾರ ಖರ್ಗೆ ಮನವಿಗೆ ಸ್ಪಂದಿಸಿದ್ದು, ಈ ಸಂಬಂಧ ಇಂದಿನ ಸಚಿವ ಸಂಪುಟದಲ್ಲಿ ಚರ್ಚೆ ನಡೆಸಿ ಮಹತ್ವದ ತೀರ್ಮಾನ ಕೈಗೊಂಡಿದೆ.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹12,944/Gram24ct ₹11,865/Gram22ct ಬೆಳ್ಳಿ: ₹194.00/Gram

# ಸಂವಿಧಾನಕ್ಕಿಂತ ಆರ್‌ಎಸ್‌ಎಸ್ ಸಂಸ್ಥೆ ದೊಡ್ಡದಲ್ಲ: ಯತೀಂದ್ರ

## ■ ಪ್ರಿಯಾಂಕ್ ಪತ್ರ ಸರಿಯಿದೆ, ಆರ್‌ಎಸ್‌ಎಸ್ ನವ್ರು ಕಾನೂನು ಪಾಲನೆ ಮಾಡಿ ಕಾರ್ಯಕ್ರಮ ಮಾಡ್ಲಿ


• **ಉದಯವಾಹಿನಿ, ಮೈಸೂರು**

ಆರ್‌ಎಸ್‌ಎಸ್ ಸಂಘಟನೆ ತನ್ನ ಚಟುವಟಿಕೆಗಳಿಗೆ ಸರ್ಕಾರಿ ಸ್ಥಳಗಳನ್ನು ಬಳಸಿಕೊಳ್ಳುತ್ತಿದೆ. ತಮಿಳುನಾಡು ರಾಜ್ಯದಲ್ಲಿ ಇದನ್ನು ನಿರ್ಬಂಧಿಸಿದಂತೆ ರಾಜ್ಯದಲ್ಲಿಯೂ ನಿರ್ಬಂಧಿಸಬೇಕು ಎಂದು ಸಚಿವರಾದ ಪ್ರಿಯಾಂಕ್ ಖರ್ಗೆ ಕೆಲ ದಿನದ ಹಿಂದೆ ಪತ್ರ ಬರೆದಿದ್ದರು.

**ಪ್ರತ್ಯೇಕ ಕಾನೂನು ಇರೋದು ಯಾಕೆ**

ಆ ಬೆನ್ನಲ್ಲೇ ಅವರಿಗೆ ಬೆದರಿಕೆ ಕರೆಗಳು ಬರಲು ಶುರುವಾಗಿತ್ತು. ಈ ಬಗ್ಗೆ ಅವರು ಎಕ್ಸ್‌ನಲ್ಲಿ ಮಾಹಿತಿಯೂ ಹಂಚಿಕೊಂಡಿದ್ರು. ಈ ಬಗ್ಗೆ ಮೈಸೂರಿನಲ್ಲಿ ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಮಾತನಾಡಿದ್ದಾರೆ.

**ಪ್ರಿಯಾಂಕ್ ವಾದ ಸರಿ ಇದೆ:** ಪ್ರಿಯಾಂಕ ಖರ್ಗೆ ಬರೆದ ಪತ್ರ ಸರಿಯಾಗಿದೆ. ಬೇರೆ ಸಂಸ್ಥೆಗಳಿಗೆ ಅನುಮತಿ ಪಡೆಯದೆ ಕಾರ್ಯಕ್ರಮ ಮಾಡಲು ನಾವು ಅವಕಾಶ ಕೊಡುತ್ತಿದ್ದೀವಾ? ಪಾರ್ಕ್ ಗಳಲ್ಲಿ ಪಥಸಂಚಲನ ಮಾಡಲು ಅವಕಾಶ ಕೊಡಲು ಸಾಧ್ಯ ಇದೆಯಾ. ಇಡೀ ದೇಶಕ್ಕೆ ಒಂದು ಕಾನೂನು, ಆರ್‌ಎಸ್‌ಎಸ್ ಗೆ ಒಂದು ಕಾನೂನು ಯಾಕೆ. ಕಾನೂನಿನ ಅಡಿಯಲ್ಲಿ ಎಲ್ಲರೂ ಒಂದೆ ಎಂದು ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಹೇಳಿದರು.



> ಆರ್‌ಎಸ್‌ಎಸ್ ಬರೀ ಕಲ್ಚರಲ್ ಸಂಸ್ಥೆ ಅಲ್ಲ. ಅದು ಒಂದು ರಾಜಕೀಯ ಸಂಸ್ಥೆ. ನಿರ್ದಿಷ್ಟವಾದ ಸಿದ್ಧಾಂತವನ್ನು ಇಟ್ಟುಕೊಂಡು ಆರ್‌ಎಸ್‌ಎಸ್ ಎಲ್ಲರಲ್ಲೂ ಹರಡಲು ಪ್ರಯತ್ನ ಮಾಡುತ್ತಿದೆ. ಶಾಲಾ ಕಾಲೇಜುಗಳಲ್ಲಿ ಒಂದು ಅಜೆಂಡಾ ಇಟ್ಟುಕೊಂಡು ಕೆಲಸ ಮಾಡಲು ಅವಕಾಶ ಮಾಡಿ ಕೊಡಬಾರದು. ಆರ್‌ಎಸ್‌ಎಸ್ ಸಂವಿಧಾನದಕ್ಕಿಂತ ಮೇಲಲ್ಲ. ಎಲ್ಲರಿಗೆ ಹೇಗೆ ಕಾನೂನು ಅಪ್ಲೈ ಆಗುತ್ತೋ ಅದೇ ರೀತಿ ಆರ್‌ಎಸ್‌ಎಸ್‌ಗೂ ಅಪ್ಲೈ ಆಗಬೇಕು.
>
> – ಡಾ. ಯತೀಂದ್ರ, ವಿಧಾನ ಪರಿಷತ್ ಸದಸ್ಯ

**ಸರ್ಕಾರಕ್ಕೆ ಮತ್ತೊಂದು ಪತ್ರ**

ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ನೌಕರರುಗಳಿಗೆ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು, 2021 ಅಡಿ ನಿಯಮ 5(1) ಪ್ರಕಾರ ಈ ಕೆಳಕಂಡ ನಿಯಮವು ಈಗಾಗಲೇ ಜಾರಿಯಲ್ಲಿರುತ್ತದೆ. ಯಾರೇ ಸರ್ಕಾರಿ ನೌಕರನು, ಯಾವುದೇ ರಾಜಕೀಯ ಪಕ್ಷದ ಅಥವಾ ರಾಜಕಾರಣದಲ್ಲಿ ಭಾಗವಹಿಸುವಂಥ ಯಾವುದೇ ಸಂಘ ಸಂಸ್ಥೆಯ ಸದಸ್ಯ, ಯಾವುದೇ ಸಂಬಂಧ ಹೊಂದಿರತಕ್ಕದ್ದಲ್ಲ, ಯಾವುದೇ ರಾಜಕೀಯ ಚಳುವಳಿ ಅಥವಾ ಚಟುವಟಿಕೆಯಲ್ಲಿ ಭಾಗವಹಿಸತಕ್ಕದ್ದಲ್ಲ ಎಂದು ಸ್ಪಷ್ಟವಾಗಿ ನಿರ್ದೇಶನ ನೀಡಲಾಗಿದ್ದರೂ ಸಹ ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಹಾಗೂ ಇತರೆ ಸಂಘ ಸಂಸ್ಥೆಗಳು ಹಮ್ಮಿಕೊಳ್ಳುವ ಕಾರ್ಯಕ್ರಮಗಳು ಹಾಗೂ ಚಟುವಟಿಕೆಗಳಲ್ಲಿ ಸರ್ಕಾರಿ ಅಧಿಕಾರಿಗಳು ಹಾಗೂ ನೌಕರರು ಭಾಗವಹಿಸುತ್ತಿರುವುದನ್ನು ಗಮನಿಸಲಾಗಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

**ನಿಯಮ ಪಾಲಿಸಿ ಕಾರ್ಯಕ್ರಮ ಮಾಡಲಿ:** ತಮಿಳುನಾಡಿನಲ್ಲಿರುವ ನಿಯಮಗಳನ್ನು ಕರ್ನಾಟಕದಲ್ಲೂ ಜಾರಿಗೆ ತರುವ ವಿಚಾರದ ಬಗ್ಗೆಯೂ ಮಾತನಾಡಿ, ಈಗಾಗಲೇ ತಮಿಳುನಾಡಿನಲ್ಲಿ ಆರ್‌ಎಸ್‌ಎಸ್ ಕಾರ್ಯಕ್ರಮ ನಡೆಸಲು ನಿಯಮಗಳು ಜಾರಿಯಲ್ಲಿವೆ. ನಾವು ಯಾರ ಹಕ್ಕುಗಳನ್ನು ಕಿತ್ತುಕೊಂಡಿಲ್ಲ. ನಿಯಮಗಳನ್ನು ಪಾಲನೆ ಮಾಡಿ, ಕಾರ್ಯಕ್ರಮ ಮಾಡಲಿ. ತಮಿಳುನಾಡಿನಲ್ಲಿರುವ ನಿಯಮಗಳನ್ನು ಕರ್ನಾಟಕದಲ್ಲೂ ಜಾರಿಗೆ ತರುತ್ತೇವೆ ಎಂದು ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಮೈಸೂರಿನಲ್ಲಿ ಹೇಳಿದರು.

**ಪ್ರಿಯಾಂಕ್ ಖರ್ಗೆ ಬೆದರಿಕೆ ಕರೆ ಒಬ್ಬನ ಬಂಧನ:** ಸಚಿವ ಪ್ರಿಯಾಂಕ್ ಖರ್ಗೆಗೆ ಕರೆ ಮಾಡಿ ಅವಾಚ್ಯ ಶಬ್ಧ, ಬೆದರಿಕೆ ಹಾಕಿದ್ದ ಸೋಲಾಪುರ ಮೂಲದ ದಿನೇಶ್ ನರೋಣಿ ಎಂಬುವವನನ್ನು ಬೆಂಗಳೂರು ಹಾಗೂ ಕಲಬುರಗಿ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಮಹಾರಾಷ್ಟ್ರದ ಲಾತೂರ್‌ನಲ್ಲಿ ಬಂಧಿಸಿದ್ದಾರೆ ಎನ್ನಲಾಗಿದೆ.

# ಹೆಚ್ಚುವರಿ ಬಸ್ ಓಡಿಸಲು ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಸೂಚನೆ

• **ಉದಯವಾಹಿನಿ, ರಾಮನಗರ**

ಶಕ್ತಿ ಯೋಜನೆಯಡಿ ಹಾರೋಹಳ್ಳಿ, ಸಾತನೂರಿನಿಂದ, ಬೆಂಗಳೂರು, ಮಾಗಡಿಯಿಂದ ಕುಣಿಗಲ್‌ಗೆ ಬೆಳಿಗ್ಗೆ 7.30ರಿಂದ 10ರವರೆಗೆ ಹಾಗೂ ಸಂಜೆ ಹೆಚ್ಚುವರಿ ಬಸ್ಸುಗಳನ್ನು ಓಡಿಸಿ ಪ್ರಯಾಣಿಕರ ದಟ್ಟಣೆಯನ್ನು ತಗ್ಗಿಸಬೇಕು ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ. ರಾಜು ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯಿತಿಯ ಮಿನಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಈ ಮಾರ್ಗಗಳಲ್ಲಿ ಬೆಳಗ್ಗೆ 7.30ರಿಂದ 10 ಗಂಟೆಯವರೆಗೆ ಹೆಚ್ಚಿನ ಸಂಖ್ಯೆಯ ಪ್ರಯಾಣಿಕರು ಸಂಚರಿಸುತ್ತಾರೆ. ಹಾಗಾಗಿ, ಬಸ್



ಉದಯವಾಹಿನಿ ಚಿತ್ರ

ಸಿಗದೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದರು.

ಗೃಹಲಕ್ಷ್ಮಿ ಯೋಜನೆಯಡಿ ಜುಲೈ ತಿಂಗಳ ಸಹಾಯಧನವನ್ನು ಈಗಾಗಲೇ ಜಿಲ್ಲೆಯ ಅರ್ಹ ಫಲಾನುಭವಿಗಳ ಖಾತೆಗೆ ವರ್ಗಾವಣೆ ಮಾಡಲಾಗಿದೆ. ಉಳಿದೆರಡು ತಿಂಗಳ ಮೊತ್ತವನ್ನು ಕೂಡಲೇ ಪಾವತಿಸಲು ಕ್ರಮ ವಹಿಸಲಾಗಿದೆ. ಗೃಹಜ್ಯೋತಿ ಯೋಜನೆಯಡಿ ಜಿಲ್ಲೆಯಲ್ಲಿ 3.29 ಲಕ್ಷ ಮನೆಗಳಿಗೆ ಉಚಿತವಾಗಿ ವಿದ್ಯುತ್ ನೀಡಲಾಗುತ್ತಿದೆ. ಸೆಪ್ಟೆಂಬರ್ ಅಂತ್ಯಕ್ಕೆ 13.87 ಕೋಟಿ ಮೊತ್ತ ಪಾವತಿಸಲಾಗಿದೆ ಎಂದು ಹೇಳಿದರು. ಪಡಿತರ ಅಕ್ಕಿಯನ್ನು ಕಳ್ಳ ಸಾಗಣೆ ಮಾಡುವುದು ಕಂಡುಬಂದರೆ ಲಾರಿ, ಸಂಬಂಧಿಸಿದ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲಿಸಬೇಕು. ಬೆಂಬಲ ಬೆಲೆಯಡಿ ರಾಗಿ ಖರೀದಿಗೆ ಸಂಬಂಧಿಸಿದಂತೆ ಮುಂದಿನ ಪ್ರಗತಿ ಪರಿಶೀಲನ ಸಭೆಯಲ್ಲಿ ಆಹಾರ, ನಾಗರಿಕ ಸರಬರಾಜು, ಗ್ರಾಹಕ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರು ಮಾಹಿತಿ ನೀಡಬೇಕು ಎಂದು ನಿರ್ದೇಶನ ನೀಡಿದರು.

ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳನ್ನು ಜಿಲ್ಲೆಯಲ್ಲಿ ಸಮರ್ಪಕವಾಗಿ ಅನುಷ್ಠಾನ ಮಾಡಲು ಜಿಲ್ಲೆಯ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು, ಇಲಾಖೆಗಳು ಶ್ರಮಿಸಬೇಕು. ಯೋಜನೆಗೆ ಅರ್ಹರಿರುವ ಯಾವುದೇ ಫಲಾನುಭವಿಯು ಗ್ಯಾರಂಟಿ ಯೋಜನೆಯಿಂದ ಹೊರಗುಳಿಯಬಾರದು ಎಂದರು.

# ರೈತರಿಗೆ ಸಿಗದ ಭೂ ಪರಿಹಾರ: ಎಸಿ ಕಚೇರಿ ಜಪ್ತಿ

• **ಉದಯವಾಹಿನಿ, ಪಾಂಡವಪುರ**

ಭೂಸ್ವಾಧೀನಪಡಿಸಿಕೊಂಡಿದ್ದ ರೈತರ ಜಮೀನಿಗೆ ಪರಿಹಾರ ನೀಡದ ಕಾರಣ ಪಟ್ಟಣದ ಉಪವಿಭಾಗಾಧಿಕಾರಿ ಕಚೇರಿಯ ಪೀಠೋಪಕರಣಗಳನ್ನು ನ್ಯಾಯಾಲಯದ ಸಿಬ್ಬಂದಿ ಗುರುವಾರ ಜಪ್ತಿ ಮಾಡಿದರು.

ಮೈಸೂರು–ಬೆಂಗಳೂರು ಜೋಡಿ ರೈಲು ಮಾರ್ಗ ನಿರ್ಮಾಣ ಹಾಗೂ ಮೈಸೂರು–ಬೆಂಗಳೂರು ಚತುಷ್ಪಥ ಹೆದ್ದಾರಿ ರಸ್ತೆ ನಿರ್ಮಾಣ ಸಂಬಂಧ ರೈತರಿಂದ ಭೂಮಿ ಸ್ವಾಧೀನ ಮಾಡಿಕೊಂಡ ಸರ್ಕಾರವು ಪರಿಹಾರ ನೀಡಿರಲಿಲ್ಲ. ಶ್ರೀರಂಗಪಟ್ಟಣ ಪ್ರಧಾನ ಸಿವಿಲ್ ನ್ಯಾಯಾಲಯದ ನ್ಯಾಯಧೀಶರ ಆದೇಶದ ಮೇರೆಗೆ ನ್ಯಾಯಾಲಯದ ಸಿಬ್ಬಂದಿ ಉಪ ವಿಭಾಗಾಧಿಕಾರಿಗಳ ಕಚೇರಿಯಲ್ಲಿದ್ದ ಕಂಪ್ಯೂಟರ್, ಟೇಬಲ್, ಚೇರ್‌ಗಳು ಸೇರಿದಂತೆ ಇತರ ಸಾಮಗ್ರಿಗಳನ್ನು ಜಪ್ತಿ ಮಾಡಿ, ಪಾಂಡವಪುರ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಸಾಗಿಸಿದರು.

ಶ್ರೀರಂಗಪಟ್ಟಣ ತಾಲ್ಲೂಕಿನ ಕಿರಂಗೂರು, ಮಾಕಕೊಪ್ಪಲು ರೈತರಾದ ಬಾಲಕೃಷ್ಣ, ಚಂದ್ರಶೇಖರ್ ಅವರಿಗೆ ಸೇರಿದ ಗ್ರಾಮದ ಸರ್ವೆ ನಂ.55, 836ಕ್ಕೆ ಸೇರಿದ 12 ಗುಂಟೆ ಜಮೀನನ್ನು 2013ರಲ್ಲಿ ರೈಲ್ವೆ ಇಲಾಖೆಗೆ ಪಾಂಡವಪುರ ಉಪ ವಿಭಾಗಾಧಿಕಾರಿ ಸ್ವಾಧೀನಕ್ಕೆ ಪಡೆದಿದ್ದರು.


ಆದರೆ ಈ ರೈತರಿಗೆ 1.37 ಕೋಟಿ ಭೂ ಪರಿಹಾರವನ್ನು ನೀಡಿರಲಿಲ್ಲ. ಜಪ್ತಿ ವೇಳೆ ಉಪವಿಭಾಗಾಧಿಕಾರಿಗಳು ಕಚೇರಿಯಲ್ಲಿ ಇರಲಿಲ್ಲ. ಭೂಪರಿಹಾರ ಸಂಬಂಧ ಕಳೆದ ಎರಡು ವರ್ಷಗಳಿಂದ ವಿವಿಧ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ 4 ಬಾರಿ ಎಸಿ ಕಚೇರಿಯನ್ನು ಜಪ್ತಿ ಮಾಡಲಾಗಿದೆ.

# ಲೋಕಾಯುಕ್ತ ಬಲೆಗೆ ಗ್ರಾ.ಪಂ ಕಾರ್ಯದರ್ಶಿ, ಬಿಲ್‌ಕಲೆಕ್ಟರ್

• **ಉದಯವಾಹಿನಿ, ತೋವಿನಕೆರೆ**

ಮನೆಯ ಖಾತೆ ಬದಲಾವಣೆ ಮಾಡಿಕೊಡಲು ಲಂಚ ತೆಗೆದುಕೊಳ್ಳುತ್ತಿದ್ದ ತೋವಿನಕೆರೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಸುಮ, ಬಿಲ್ ಕಲೆಕ್ಟರ್ ಮಾರುತಿ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾರೆ. ತೋವಿನಕೆರೆ ಗ್ರಾ.ಪಂ ಕಚೇರಿಯಲ್ಲಿ ಗುರುವಾರ ಕಾರ್ಯದರ್ಶಿ ಸುಮ, ಬಿಲ್ ಕಲೆಕ್ಟರ್ ಮಾರುತಿ 8 ಸಾವಿರ ಲಂಚದ ಹಣ ಪಡೆದುಕೊಳ್ಳುತ್ತಿದ್ದಾಗ ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದುಕೊಂಡು, ವಿಚಾರಣೆ ನಂತರ ಬಂಧಿಸಿದ್ದಾರೆ.

ಟಿ.ಕೆ.ಮೊಹಮ್ಮದ್ ಎಂಬುವರು ತೋವಿನಕೆರೆಯಲ್ಲಿ ಮನೆ, ನಿವೇಶನದ ಜಾಗ ಖರೀದಿಸಿದ್ದರು. ಇದೇ ವರ್ಷದ ಆ. 12ರಂದು ಖಾತೆ ಬದಲಾವಣೆ ಮಾಡಿಕೊಡುವಂತೆ ಕೋರಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ಸಲ್ಲಿಸಿ ಎರಡು ತಿಂಗಳಾದರೂ ಖಾತೆ ಬದಲಾವಣೆ ಮಾಡಿಕೊಟ್ಟಿರಲಿಲ್ಲ. ಅ. 9ರಂದು ಕಚೇರಿಗೆ ಭೇಟಿನೀಡಿ ಬಿಲ್ ಕಲೆಕ್ಟರ್ ಮಾರುತಿ ಅವರನ್ನು ಸಂಪರ್ಕಿಸಿದ್ದರು. ಖಾತೆ ವರ್ಗಾವಣೆ ಮಾಡಿಸಿಕೊಡಲು 10,800 ಲಂಚ ನೀಡುವಂತೆ ಬೇಡಿಕೆ ಸಲ್ಲಿಸಿದ್ದರು. ಮತ್ತೆ ಅ. 14ರಂದು ಕಚೇರಿಗೆ ಬೇಟಿನೀಡಿ ಲಂಚದ ಹಣ ಕಡಿಮೆ ಮಾಡುವಂತೆ ಕೇಳಿಕೊಂಡಿದ್ದರು. ಆಗ ಕಾರ್ಯದರ್ಶಿ ಸುಮ, ಬಿಲ್ ಕಲೆಕ್ಟರ್ ಮಾರುತಿ ಚರ್ಚಿಸಿ, ಕೊನೆಗೆ 8 ಸಾವಿರ ನೀಡುವಂತೆ ಹೇಳಿದ್ದರು. ಇದಕ್ಕಿಂತ ಕಡಿಮೆ



ಉದಯವಾಹಿನಿ ಚಿತ್ರ

ಹಣ ಕೊಟ್ಟರೆ ಖಾತೆ ಮಾಡಿಕೊಡುವುದಿಲ್ಲ ಎಂದು ಹೇಳಿದ್ದರು. ಗ್ರಾ.ಪಂ ಅಧಿಕಾರಿ, ಸಿಬ್ಬಂದಿ ಲಂಚಕ್ಕೆ ಒತ್ತಾಯಿಸುತ್ತಿರುವುದರಿಂದ ಬೇಸತ್ತ ಮೊಹಮ್ಮದ್ ಅ. 15ರಂದು ಲೋಕಾಯುಕ್ತ ಕಚೇರಿಗೆ ಭೇಟಿನೀಡಿ ದೂರು ಸಲ್ಲಿಸಿದ್ದರು. ಗುರುವಾರ ಬೆಳಿಗ್ಗೆ ಲೋಕಾಯುಕ್ತ ಇನ್ಸ್‌ಪೆಕ್ಟರ್ ಟಿ.ರಾಜು ನೇತೃತ್ವದಲ್ಲಿ ಬಿ.ಮೊಹಮ್ಮದ್ ಸಲೀಂ, ಕೆ.ಸುರೇಶ್, ಶಿವರುದ್ರಪ್ಪ ಮೇಟಿ ಅವರ ತಂಡ ದಾಳಿ ನಡೆಸಿ ಲಂಚದ ಹಣ ತೆಗೆದುಕೊಳ್ಳುವ ಸಮಯದಲ್ಲಿ ಬಂಧಿಸಿದೆ. ಎಸ್ಪಿ ಎ.ವಿ.ಲಕ್ಷ್ಮಿನಾರಾಯಣ ಮಾರ್ಗದರ್ಶನ ಮಾಡಿದ್ದರು. ಬಿಲ್ ಕಲೆಕ್ಟರ್ ಮಾರುತಿ ಗ್ರಾ.ಪಂ ಕಚೇರಿ ಕೆಲಸವಷ್ಟೇ ಅಲ್ಲದೆ ರಿಯಲ್‌ಎಸ್ಟೇಟ್ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ದಾಳಿಯ ನಂತರ ಮಾರುತಿ ಮನೆ ಮೇಲೂ ದಾಳಿ ನಡೆಸಿ ದಾಖಲೆಗಳನ್ನು ವಶಕ್ಕೆ ಪಡೆದುಕೊಂಡಿದಾರೆ.

# ಅಕ್ರಮ ಕಲ್ಲು ಗಾಣಿಗಾರಿಕೆ; ಎತ್ತಿನಹೊಳೆ ಯೋಜನೆಗೆ ಹಾನಿ

• **ಉದಯವಾಹಿನಿ, ಗೌರಿಬಿದನೂರು**

ತಾಲ್ಲೂಕಿನ ಬೆಳತ್ತೂರು ಗ್ರಾಮದ ಸರ್ವೆ ನಂಬರ್ 72 ಮತ್ತು ಕದಿರನಹಳ್ಳಿ ಗ್ರಾಮದ ಸರ್ವೆ ನಂಬರ್ 98ರಲ್ಲಿ ಗೋಮಾಳ ಮತ್ತು ಸರ್ಕಾರಿ ಜಮೀನಿನಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಎಂದು ಪ್ರಜಾಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಆರ್. ಎನ್. ರಾಜು ಆರೋಪಿಸಿದರು. ನಗರದಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಇದರಿಂದ ಎತ್ತಿನಹೊಳೆ ಕಾಮಗಾರಿಗೆ ತೊಂದರೆಯಾಗುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನವಹಿಸುತ್ತಿಲ್ಲ ಎಂದರು. ತಾಲ್ಲೂಕಿಗೆ ಎತ್ತಿನಹೊಳೆ ಯೋಜನೆಯ ಮುಖ್ಯ ಪೈಪ್‌ಲೈನ್ ಕಾಮಗಾರಿ ಬಹುತೇಕ ಮುಗಿಯುವ ಹಂತದಲ್ಲಿದೆ.

ಬೆಳತ್ತೂರಿನಿಂದ ಮಣಿವಾಲದವರೆಗೂ ಕಾಮಗಾರಿ ಪೂರ್ಣವಾಗಿದೆ. ಈ ಸ್ಥಳಗಳಿಗೆ ಹೊಂದಿಕೊಂಡಂತೆ ಕಲ್ಲು ಗಣಿಗಾರಿಕೆ ನಡೆಯುತ್ತಿದೆ. ಈ ಬಗ್ಗೆ ಎತ್ತಿನ ಹೊಳೆ ಅಧಿಕಾರಿಗಳು ಜಿಲ್ಲಾಧಿಕಾರಿ ಗಮನಕ್ಕೆ ತಂದರೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರು. ಹಾಲಿ, ಮಾಜಿ ಶಾಸಕರ ಗಮನಕ್ಕೆ ಈ ವಿಚಾರ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಈ ಅಕ್ರಮ



ಉದಯವಾಹಿನಿ ಚಿತ್ರ

ಕಲ್ಲು ಗಣಿಗಾರಿಕೆಯಿಂದ ಪ್ರಕೃತಿ ನಾಶವಾಗುತ್ತಿದೆ. ತಾಲ್ಲೂಕಿನ ಸಂಪತ್ತನ್ನು ಲೂಟಿ ಮಾಡಲಾಗುತ್ತಿದೆ ಎಂದರು. ಕದಿರದೇವರಹಳ್ಳಿ ಗ್ರಾಮದ ಸರ್ವೆ ನಂ 98ರ ಜಮೀನಿನಲ್ಲಿ ಎತ್ತಿನಹೊಳೆ ಪೈಪ್‌ಲೈನ್ ಅಳವಡಿಸಿ, ಏರ್‌ವಾಲ್ ಚೇಂಬರ್ ನಿರ್ಮಿಸಲಾಗಿದೆ.

ಈ ಪೈಪ್ ಲೈನ್ ಚೇಂಬರ್ ಮೇಲೆ ಭಾರಿ ವಾಹನಗಳು ಸಂಚರಿಸುತ್ತಿವೆ. ಈ ಪೈಪ್‌ಲೈನ್‌ಗೆ ಧಕ್ಕೆಯಾದರೆ ಎತ್ತಿನಹೊಳೆ ಯೋಜನೆ ಮೇಲೆ ಪರಿಣಾಮ ಬೀರುತ್ತದೆ ಎಂದರು. ರೈತ ಸಂಘ ಮತ್ತು ಹಸಿರು ಸೇನೆ ಜಿಲ್ಲಾ ಅಧ್ಯಕ್ಷ ಎಂ.ಆರ್ ಲಕ್ಷ್ಮಿನಾರಾಯಣ ಮಾತನಾಡಿ, ಜಿಲ್ಲೆಯಲ್ಲಿ ಹಲವು ಕಡೆ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದೆ. ಅರ್ಕುಂದ ಬಳಿ ನೂರು ಅಡಿ ಆಳ ಮತ್ತು ನೂರು ಅಡಿ ಅಗಲವಿರುವ ಗುಂಡಿಯನ್ನು ಯಾವುದೇ ಅಧಿಕಾರಿ ಈವರೆಗೆ ಮುಚ್ಚಲು ಸಾಧ್ಯವಾಗಿಲ್ಲ. ಮಂಚೇನಹಳ್ಳಿ ಬಳಿ ಸಹ ಇದೇ ವಿಚಾರಕ್ಕೆ ಶೂಟ್‌ಔಟ್ ಸಹ ನಡೆದಿತ್ತು ಎಂದರು. ಈ ಬಗ್ಗೆ ಯಾವುದೇ ಅಧಿಕಾರಿಗಳು ಗಮನ ವಹಿಸುತ್ತಿಲ್ಲ. ಇದೇ ಧೋರಣೆ ಮುಂದುವರಿದರೆ ಹೋರಾಟ ನಡೆಸಲಾಗುವುದು. ಸರ್ಕಾರ ಜಾನುವಾರುಗಳಿಗೆ ಮೀಸಲಿಟ್ಟ ಜಾಗವನ್ನು ಹಣದ ಆಸೆಗಾಗಿ ಅಧಿಕಾರಿಗಳು ಈ ರೀತಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ರೈತ ಸಂಘದ ತಾಲ್ಲೂಕು ಅಧ್ಯಕ್ಷ ಲೋಕೇಶ್ ಗೌಡ, ಜನ ಸ್ಪಂದನ ಕಾರ್ಯಕ್ರಮದಲ್ಲಿ ಈ ಬಗ್ಗೆ ಧ್ವನಿ ಎತ್ತಿದಾಗ ಅಕ್ರಮವಾಗಿ ಗಣಿಗಾರಿಕೆ ನಡೆಸುವುದನ್ನು ನಿಲ್ಲಿಸಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದ್ದರು. ಆದರೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರು.

# ಎ ಖಾತಾ ಹೆಸರಿನಲ್ಲಿ ರಾಜ್ಯ ಸರ್ಕಾರದಿಂದ ಸುಲಿಗೆ: ಎಚ್‌ಡಿಕೆ

• **ಉದಯವಾಹಿನಿ, ಮಂಡ್ಯ**

ದೀಪಾವಳಿ ಕೊಡುಗೆ ಕೊಡುತ್ತಿದ್ದೇವೆ ಎಂದು ಹೇಳಿ ರಾಜ್ಯ ಸರ್ಕಾರ ಬೆಂಗಳೂರು ಜನರ ಕಿಸೆಗೆ ಕೈ ಹಾಕಿದೆ. ಎ ಖಾತಾ ಸೋಗಿನಲ್ಲಿ 15 ಸಾವಿರ ಕೋಟಿ ಸುಲಿಗೆ ಮಾಡುತ್ತಿದೆ' ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದರು. ನಗರದಲ್ಲಿ ಗುರುವಾರ ಆಟೊ ನಿಲ್ದಾಣ ಮತ್ತು ಜಯಚಾಮರಾಜೇಂದ್ರ ಮಾರುಕಟ್ಟೆಯನ್ನು ಉದ್ಘಾಟಿಸಿದ ಸಂದರ್ಭಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

'ಬಿ' ಖಾತಾದಿಂದ 'ಎ' ಖಾತಾಗೆ ಪರಿವರ್ತನೆ ಮಾಡುವ ಅರ್ಜಿಗೆ 500 ಶುಲ್ಕ ತುಂಬಬೇಕು. ಆ ಶುಲ್ಕದ ಹೆಸರಿನಲ್ಲಿಯೇ ನೂರಾರು ಕೋಟಿ ರೂಪಾಯಿ ಸುಲಿಗೆ ಮಾಡುತ್ತಿದೆ ಈ ಸರ್ಕಾರ. 30X40 ನಿವೇಶನಕ್ಕೆ 4ರಿಂದ 8 ಲಕ್ಷ ರೂಪಾಯಿವರೆಗೂ ಕಿತ್ತುಕೊಳ್ಳುತ್ತಿದ್ದಾರೆ. ಮೊದಲು 10 ಸಾವಿರದಿಂದ 13 ಸಾವಿರ ರೂಪಾಯಿ ಅಷ್ಟನ್ನೇ ಕಟ್ಟಬೇಕಿದ್ದ ಬೆಂಗಳೂರು ಜನರು ಇನ್ನು ಮುಂದೆ ಲಕ್ಷಗಳಲ್ಲಿ ಹಣ ತೆರಬೇಕಿದೆ' ಎಂದು ಹೇಳಿದರು. ಈ ಸರ್ಕಾರದಲ್ಲಿ ಹಣ ಇಲ್ಲ. ಅದಕ್ಕೆ ಕಂಡ ಕಂಡ ಕಡೆ ಹಣಕ್ಕೆ ಕೈ ಹಾಕುತ್ತಿದೆ. ಬೆಂಗಳೂರಿನ ಗುಂಡಿ ಮುಚ್ಚೋದು ಇರಲಿ. ರಾಜ್ಯದಲ್ಲಿರುವ ಗುಂಡಿಗಳನ್ನೂ ಮುಚ್ಚೋಕೆ ಇವರಿಂದ ಆಗುತ್ತಿಲ್ಲ' ಎಂದರು.

**ದಾಖಲೆ ಕೊಡಲಿ:** ಜೆಡಿಎಸ್ ಕೊಡುಗೆ ಏನು? ಎಂದು ಹಾಸನದಲ್ಲಿ ಸಿಎಂ ಪ್ರಶ್ನೆ ಮಾಡಿದ್ದಾರೆ. ನನ್ನ ಆರೋಗ್ಯ ವಿಚಾರಿಸಲು ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರೊಬ್ಬರು ದೆಹಲಿಗೆ ಬಂದಿದ್ದರು. 2018ರಲ್ಲಿ ನೀವು ಕೊಟ್ಟ 500 ಕೋಟಿ ರೂಪಾಯಿ ಅನುದಾನದಲ್ಲಿಯೇ ಇನ್ನೂ ಕೆಲಸ ನಡೆಯುತ್ತಿದೆ ಎಂದು ಅವರೇ ಹೇಳುತ್ತಾರೆ. ಅನುದಾನದ ಬಗ್ಗೆ ಮಾತನಾಡುವ ಮುಖ್ಯಮಂತ್ರಿಗಳು, ನಾನು ಅಧಿಕಾರದಲ್ಲಿ ಇದ್ದಾಗ ಎಷ್ಟು ಕೊಟ್ಟಿದ್ದೇನೆ, ಅವರು ಎಷ್ಟು ಕೊಟ್ಟಿದ್ದಾರೆ ಎಂಬ ಬಗ್ಗೆ ಜನರ ಮುಂದೆ ದಾಖಲೆ ಇಡಲಿ ಎಂದು ಸವಾಲು ಹಾಕಿದರು.



ಉದಯವಾಹಿನಿ ಚಿತ್ರ

**ಎಚ್‌ಎಂಟಿ, ವಿಐಎಸ್‌ಎಲ್ ಕಾರ್ಖಾನೆಗೆ ಮರುಜೀವ**

ಪ್ರತಿಷ್ಠಿತ ಎಚ್‌ಎಂಟಿ ಕಾರ್ಖಾನೆಗೆ ಮರುಜೀವ ನೀಡಲು ಸಮಗ್ರ ಯೋಜನಾ ವರದಿ ತಯಾರು ಮಾಡಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಎಚ್‌ಎಂಟಿ ಹಾಗೂ ಭದ್ರಾವತಿಯ ಸರ್ ಎಂ. ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯನ್ನು ಪುನರುಜ್ಜೀವನ ಮಾಡುವ ಪ್ರಯತ್ನ ನಡೆಸಲಾಗಿದೆ. ಈಗಾಗಲೇ ಹಲವು ಸುತ್ತಿನ ಮಾತುಕತೆ ನಡೆದಿದೆ, ನೀತಿ ಆಯೋಗದ ಸದಸ್ಯರು ಆಗಿರುವ ವಿ.ಕೆ. ಸಾರಸ್ವತ ಅವರು ಹೆಚ್ ಎಂಟಿ ಕಾರ್ಖಾನೆಯ ಪುನಶ್ಚೇತನದ ಬಗ್ಗೆ ಮಹತ್ವದ ವರದಿ ನೀಡಿದ್ದಾರೆ. ಜಪಾನ್ ದೇಶದಿಂದ ತಾಂತ್ರಿಕ ಸಹಕಾರ ಪಡೆಯುವ ಬಗ್ಗೆ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರ ನೇತೃತ್ವದ ತಂಡವನ್ನು ಆ ದೇಶಕ್ಕೆ ಕಳಿಸಿದ್ದೆ ಎಂದರು.

# ಕೆಲವೇ ತಾಸುಗಳಲ್ಲಿ ರಾಶಿಗಟ್ಟಲೆ ಕಸ ಸಂಗ್ರಹ

• **ಉದಯವಾಹಿನಿ, ಮಡಿಕೇರಿ**

ಐದು ಬೆರಳು ಕೂಡಿ ಒಂದು ಮುಷ್ಟಿಯು ಹಲವು ಮಂದಿ ಸೇರಿ ಈ ಸಮಷ್ಟಿಯು ಎಂಬ ದೇಶಭಕ್ತಿಗೀತೆಯೊಂದರ ಸಾಲಿನಂತೆ ಕೊಡಗು ಜಿಲ್ಲೆಯಾದ್ಯಂತ ನಡೆದ ಸ್ವಚ್ಛ ಕೊಡಗು – ಸುಂದರ ಕೊಡಗು ಅಭಿಯಾನಕ್ಕೆ ಸಾವಿರಾರು ಕೈಗಳು ಸೇರಿದವು. ಕೆಲವೇ ತಾಸಿನಲ್ಲಿ ಸುರಿಸಿದ ಬೆವರಿಗೆ ರಾಶಿಗಟ್ಟಲೆ ಕಸ ಸಂಗ್ರಹವಾಗಿ, ಹಲವು ಪ್ರದೇಶಗಳು ಸ್ವಚ್ಛತೆಯಿಂದ ಕಂಗೊಳಿಸಿದವು. ಕೂರ್ಗ್ ಹೋಟೆಲ್, ರೆಸಾರ್ಟ್ ಅಸೋಸಿಯೇಷನ್ ನೀಡಿದ ಒಂದು ಕರೆಗೆ ಜಿಲ್ಲೆಯ ಎಲ್ಲಾ ಪ್ರಮುಖರು ಕಿವಿಯಾದರು. ಬರೋಬರಿ 320ಕ್ಕೂ ಅಧಿಕ ಸಂಘಟನೆಗಳು, ಸಂಘ, ಸಂಸ್ಥೆಗಳು ಸ್ವಚ್ಛತಾ ಅಭಿಯಾನದಲ್ಲಿ ಜೊತೆಯಾದವು. ಎಲ್ಲೆಲ್ಲೂ ಕಸ ತೆಗೆಯುವ ದೃಶ್ಯಗಳು ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನದವರೆಗೆ ಕಂಡು ಬಂದವು. ದಕ್ಷಿಣ ಕೊಡಗಿನ ಗಡಿಭಾಗ ಕುಟ್ಟದಿಂದ ಹಿಡಿದು ಉತ್ತರ ಕೊಡಗಿನ ಗಡಿಭಾಗ ಕೊಡ್ಲಿಪೇಟೆಯವರೆಗೂ ಜನರು ಅಭಿಯಾನದಲ್ಲಿ ಭಾಗಿಯಾಗುವ ಮೂಲಕ ಸ್ವಚ್ಛತೆಯ ಸಂದೇಶ ಸಾರಿದರು. ಇವರಲ್ಲಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು, ಸ್ಕೌಟ್ಸ್ ಮತ್ತು ಗೈಡ್ಸ್, ಎನ್‌ಸಿಸಿ, ಎನ್‌ಎಸ್‌ಎಸ್ ಕಾರ್ಯಕರ್ತರು, ವಿವಿಧ ಸಂಘ, ಸಂಸ್ಥೆಗಳ ಕಾರ್ಯಕರ್ತರು, ಉಪನ್ಯಾಸಕರು, ಶಿಕ್ಷಕರು, ಸಾರ್ವಜನಿಕರೂ ಇದ್ದರು. ಇಂತಹದ್ದೊಂದು ಅಪರೂಪದ ದೃಶ್ಯಕ್ಕೆ ಕೊಡಗು ಸಾಕ್ಷಿಯಾಯಿತು. ಇಲ್ಲಿನ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಶಾಸಕ ಡಾ.ಮಂತರ್‌ಗೌಡ ಮತ್ತು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ಕಸ ತೆಗೆಯುವ ಮೂಲಕ ಈ ಅಭಿಯಾನಕ್ಕೆ ಚಾಲನೆ ನೀಡುತ್ತಿದ್ದಂತೆ ಸುಮಾರು 145ಕ್ಕೂ ಹೆಚ್ಚು ಪ್ರದೇಶಗಳಲ್ಲಿ ಸ್ವಚ್ಛತಾ ಅಬಿಯಾನ ಶುರುವಾಯಿತು.

**ನೀರಿನ ಬಾಟಲಿಗಿಂತ ಮದ್ಯದ ಬಾಟಲಿಗಳೇ ಅಧಿಕ:** ಕಸ ಸಂಗ್ರಹದಲ್ಲಿ ನೀರಿನ ಬಾಟಲಿಗಿಂತ ಹೆಚ್ಚಾಗಿ ಮದ್ಯದ ಬಾಟಲಿಗಳೇ ಕಂಡು ಬಂದವು ಎಂದು ಕಸ ಸಂಗ್ರಹದಲ್ಲಿ ತೊಡಗಿದ್ದ ಕೆಲವರು ತಿಳಿಸಿದರು. ವಿಶೇಷವಾಗಿ ಹೊರಗಿನಿಂದ ಬಂದು ಇಲ್ಲಿ ವಾಹನದಲ್ಲಿ ಕುಳಿತು ಮದ್ಯ ಸೇವಿಸಿ ಬಾಟಲಿಗಳನ್ನು ರಸ್ತೆ ಬದಿಯಲ್ಲಿ ಹೆದ್ದಾರಿ ಬದಿಗಳಲ್ಲಿ ಎಸೆದು ಹೋಗಿರುವುದು ಕಂಡು ಬಂದಿದೆ ಎಂದು ಅವರು ಹೇಳಿದರು.



ಉದಯವಾಹಿನಿ ಚಿತ್ರ

> ಸ್ವಚ್ಛ ಮತ್ತು ಸುಂದರ ಕೊಡಗು ನಿರ್ಮಾಣದ ಜವಾಬ್ದಾರಿ ಜಿಲ್ಲೆಯ ಪ್ರತಿಯೊಬ್ಬರ ಮೇಲಿದೆ. ಇಲ್ಲಿನ ಪ್ರಕೃತಿ ಕಾಪಾಡದಿದ್ದರೆ ಭವಿಷ್ಯದಲ್ಲಿ ತೊಂದರೆಯಾಗುತ್ತದೆ.
>
> –ಡಾ.ಮಂತರ್‌ಗೌಡ ಶಾಸಕ.

> ಅಭಿಯಾನದಲ್ಲಿ ಜಿಲ್ಲೆಯಾದ್ಯಂತ ಸಂಗ್ರಹವಾಗುವ ಕಸವನ್ನು ಮೈಸೂರಿನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಕಳುಹಿಸಲಾಗುವುದು. ಕೊಡಗಿಗೆ ಅಗತ್ಯವಾಗಿದ್ದ ಅಭಿಯಾನ ಇದಾಗಿದ್ದು ಅಸಾಧ್ಯ ಯಾವುದು ಇಲ್ಲ ಎಂಬುದನ್ನು ಸಾಬೀತುಪಡಿಸಿದೆ.
>
> –ವೆಂಕಟ್ ರಾಜಾ ಜಿಲ್ಲಾಧಿಕಾರಿ.

# ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ವಿರುದ್ಧ ಕ್ರಮಕ್ಕೆ ಆಗ್ರಹ

## ● ಬಾಲ ಗರ್ಭಿಣಿ ಕುಟುಂಬದವರಿಗೆ ಬೆದರಿಕೆ ಹಾಕಿ ಹಣಕ್ಕೆ ಬೇಡಿಕೆ ಇಟ್ಟಿರುವ ಪ್ರಕರಣದಲ್ಲಿ ಕಲ್ಯಾಣ್‌ಕುಮಾರ್ ಬಂಧನ

• **ಉದಯವಾಹಿನಿ, ಕೆಜಿಎಫ್**

ಬಾಲ್ಯ ವಿವಾಹ, ಪೋಕ್ಸೊ, ಮಕ್ಕಳ ದತ್ತು ನೀಡುವ ಪ್ರಕ್ರಿಯೆಯಲ್ಲಿ ಅಕ್ರಮವಾಗಿ ಹಣ ವಸೂಲಿ ಮಾಡಿದ ಆರೋಪ ಎದುರಿಸುತ್ತಿರುವ ಅಧಿಕಾರಿಗಳ ವಿರುದ್ಧ ವಸ್ತುನಿಷ್ಠವಾಗಿ ತನಿಖೆ ನಡೆಸಬೇಕು. ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದಲಿತ ರೈತಸೇನೆ ರಾಜ್ಯ ಘಟಕದ ಅಧ್ಯಕ್ಷ ಹುಣಸನಹಳ್ಳಿ ಎನ್. ವೆಂಕಟೇಶ್ ಒತ್ತಾಯಿಸಿದರು. ಈ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರಿಗೆ ಮನವಿ ಸಲ್ಲಿಸಲಾಯಿತು.

ಬಳಿಕ ಮಾತನಾಡಿದ ಹುಣಸನಹಳ್ಳಿ ಎನ್. ವೆಂಕಟೇಶ್, ಬಾಲ ಗರ್ಭಿಣಿ ಕುಟುಂಬದವರಿಗೆ ಬೆದರಿಕೆ ಹಾಕಿ ಹಣಕ್ಕೆ ಬೇಡಿಕೆ ಇಟ್ಟಿರುವ ಪ್ರಕರಣದಲ್ಲಿ ಜಿಲ್ಲಾ ಮಕ್ಕಳ ಸಹಾಯವಾಣಿ ಸಂಯೋಜಕ ಕಲ್ಯಾಣ್‌ಕುಮಾರ್ ಅವರನ್ನು ಬಂಧಿಸಲಾಗಿದೆ. ಈ ಕುರಿತು ಕೂಲಂಕಷವಾಗಿ ತನಿಖೆ ಕೈಗೊಂಡು, ಕುಮಾರ್ ಅವರ ಹಿಂದೆ ಇರುವ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯನ್ನು ಬಂಧಿಸಿ, ವಿಚಾರಣೆ ಮಾಡಬೇಕು ಎಂದು ಆಗ್ರಹಿಸಿದರು. ಈ ಹಿಂದೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಡಿ ಕಾರ್ಯ ನಿರ್ವಹಿಸುತ್ತಿದ್ದ ಸರ್ಕಾರಿ ವಿಶೇಷ ದತ್ತು ಸಂಸ್ಥೆಯಲ್ಲಿ ಮಗು ಮರಣದ ಪ್ರಕರಣದಲ್ಲಿ ದೂರು ದಾಖಲಾಗಿತ್ತು. ಈ ಸಂಬಂಧ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಯನ್ನು ವಜಾಗೊಳಿಸಲು ಪ್ರಧಾನ ಕಚೇರಿಯಿಂದ ಸುತ್ತೋಲೆ

**ಅಕ್ರಮವಾಗಿ ಹಣ ವಸೂಲಿ**



ಉದಯವಾಹಿನಿ ಚಿತ್ರ

ಹೊರಡಿಸಲಾಗಿತ್ತು. ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಸರ್ಕಾರಿ ವಿಶೇಷ ದತ್ತು ಸಂಸ್ಥೆಯನ್ನು ಕೆಜಿಎಫ್ ನಗರದಲ್ಲಿರುವ ಬಾಲ ಮಂದಿರಗಳಿಗೆ ಸ್ಥಳಾಂತರ ಮಾಡಲು ಆದೇಶ ಮಾಡಲಾಗಿತ್ತು. ಜಿಲ್ಲಾ ರಕ್ಷಣಾಧಿಕಾರಿಯಾಗಿದ್ದ ನಾಗರತ್ನ ಅವರು ನಿರ್ದೇಶಕರ ಆದೇಶ ಉಲ್ಲಂಘಿಸಿ ಕಲ್ಯಾಣ ಕುಮಾರ್ ಅವರನ್ನು ಆಪ್ತ ಸಮಾಲೋಚಕರಾಗಿ ನೇಮಿಸಲಾಗಿತ್ತು. ಅವರ ಮೂಲಕ ಅಕ್ರಮವಾಗಿ ಹಣ ಮಾಡುವ ಆಲೋಚನೆಯಿಂದ ಮಕ್ಕಳ ಸಹಾಯವಾಣಿ ಸಂಯೋಜಕ ಹುದ್ದೆಗೆ ನೇಮಕ ಪ್ರಕ್ರಿಯೆ ಉಲ್ಲಂಘಿಸಿ, ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಳ್ಳಲಾಗಿದೆ ಎಂದು ದೂರಿದರು. ಮಿಷನ್ ವಾತ್ಸಲ್ಯ ಯೋಜನೆ ಅಡಿ ಬಿಡುಗಡೆಯಾಗುತ್ತಿರುವ ಕೋಟ್ಯಾಂತರ ರೂಪಾಯಿಗಳನ್ನು ಮಕ್ಕಳ ಹಿತದೃಷ್ಟಿಗೆ ಬಳಸದೆ, ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ.

ಬಾಲ ಮಂದಿರಗಳಲ್ಲಿನ ಮಕ್ಕಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಲ್ಲ. ಖರೀದಿಗಳಲ್ಲಿ ಪಾರದರ್ಶಕತೆ ಕಾಪಾಡಿಕೊಂಡಿಲ್ಲ. ಬಾಲ ಮಂದಿರಗಳ ಕಟ್ಟಡದ ದುರಸ್ತಿಗೆ ಮಂಜೂರು ಆಗಿರುವ ಅನುದಾನವನ್ನು ಕ್ರಿಯಾಯೋಜನೆಯಂತೆ ಕಾಮಗಾರಿ ಮಾಡದೆ, ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಕಾಮಗಾರಿಗಳನ್ನು ಅರ್ಧಂಬರ್ಧ ಮಾಡಿ, ಹಣ ಕಬಳಿಸಲಾಗಿದೆ ಎಂದು ಆರೋಪಿಸಿದರು.

ಬಾಲ ಗರ್ಭಿಣಿ ಪ್ರಕರಣದಲ್ಲಿ ಹಣಕ್ಕೆ ಬೇಡಿಕೆ ಇಟ್ಟಿರುವ ಕುರಿತು ಕ್ಯಾಸಂಬಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಈ ಪ್ರಕರಣದಲ್ಲಿ ಸಂಯೋಜಕ ಕಲ್ಯಾಣ ಕುಮಾರ್ ಜೊತೆಗೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ನಾಗರತ್ನ ಅವರೂ ಭಾಗಿಯಾದ ಸಾಧ್ಯತೆ ಇದೆ. ಅವರನ್ನೂ ಬಂಧಿಸಿ, ವಿಚಾರಣೆ ನಡೆಸಬೇಕು ಎಂದು ಒತ್ತಾಯಿಸಿದರು.

**ಬಾಲ ಗರ್ಭಿಣಿಯ ಕುಟುಂಬದವರಿಗೆ ಬೆದರಿಕೆಯನ್ನು ಹಾಕಿ ಹಣಕ್ಕೆ ಬೇಡಿಕೆ**

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಶ್ರೀಮತಿ ನಾಗರತ್ನ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಮಕ್ಕಳ ಸಹಾಯವಾಣಿ ಸಂಯೋಜಕ ಕಲ್ಯಾಣ್ ಕುಮಾರ್ ಸೇರಿ ಬಾಲ್ಯ ವಿವಾಹ, ಪೋಕೋ ಹಾಗೂ ಮಕ್ಕಳನ್ನು ದತ್ತು ನೀಡುವ ಪ್ರಕ್ರಿಯೆಯಲ್ಲಿ ಅಕ್ರಮವಾಗಿ ಹಣ ವಸೂಲಿ ಮಾಡುತ್ತಿರುವ ಕುರಿತು ಕಾನೂನು ಕ್ರಮ ಕೈಗೊಳ್ಳುವಂತೆ ಕರ್ನಾಟಕ ದಲಿತ ರೈತಸೇನೆ ರಾಜ್ಯಾಧ್ಯಕ್ಷ ಹುಣಸನಹಳ್ಳಿ ಎನ್.ವೆಂಕಟೇಶ್ ಆಗ್ರಹಿಸಿದ್ದಾರೆ. ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಮನವಿ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದರು, ಬಾಲ ಗರ್ಭಿಣಿಯ ಕುಟುಂಬದವರಿಗೆ ಬೆದರಿಕೆಯನ್ನು ಹಾಕಿ ಹಣಕ್ಕೆ ಬೇಡಿಕೆ ಇಟ್ಟಿರುವ ಪ್ರಕರಣದಲ್ಲಿ ಜಿಲ್ಲಾ ಮಕ್ಕಳ ಸಹಾಯವಾಣಿಯ ಸಂಯೋಜಕ ಕಲ್ಯಾಣ್ ಕುಮಾರ್ ರವರನ್ನು ಬಂಧಿಸಿದ್ದು, ಕೂಲಂಕುಷವಾಗಿ ತನಿಖೆ ಮಾಡಿ ಕಲ್ಯಾಣ ಕುಮಾರ್ ರವರ ಹಿಂದೆ ಇರುವಂತಹ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯನ್ನು ಬಂಧಿಸಿ ವಿಚಾರಣೆ ಮಾಡಬೇಕು.

## ಮಿನಿ ನ್ಯೂಸ್

### ಕರ್ನಾಟಕ ರಾಜ್ಯೋತ್ಸವ ಪೂರ್ವಭಾವಿ ಸಭೆ

• **ಉದಯವಾಹಿನಿ, ಕನಕಪುರ**

ತಾಲ್ಲೂಕು ಕಚೇರಿಯ ನ್ಯಾಯಾಲಯ ಸಭಾಂಗಣದಲ್ಲಿ ಕರ್ನಾಟಕ ರಾಜ್ಯೋತ್ಸವ ಪೂರ್ವಭಾವಿ ಸಭೆ ನಡೆಯಿತು. ಸ್ವಕರವೇ ವೇದಿಕೆ ಜಿಲ್ಲಾ ಘಟಕದ ಅಧ್ಯಕ್ಷ ಕನ್ನಡ ಭಾಸ್ಕರ್, ಜಯ ಕರ್ನಾಟಕ ಸಂಘಟನೆಯ ವೀರೇಶ್ ಮಾತನಾಡಿ, ಪ್ರತಿವರ್ಷದಂತೆ ಕನ್ನಡಾಂಬೆ ಭಾವಚಿತ್ರವನ್ನು ಬೆಳ್ಳಿ ರಥದಲ್ಲಿ ಜಾನಪದ ಕಲಾತಂಡ ಮತ್ತು ಆಶಾ ಅಂಗನವಾಡಿ ಕಾರ್ಯಕರ್ತೆಯರ ಪೂರ್ಣಕುಂಭ ಕಳಸದೊಂದಿಗೆ ಅಯ್ಯಪ್ಪ ಸ್ವಾಮಿ ದೇವಾಲಯದಿಂದ ಅಂಬೇಡ್ಕರ್ ಭವನದವರೆಗೂ ಅದ್ದೂರಿ ಮೆರವಣಿಗೆ ಮಾಡಬೇಕು ಎಂದು ತಿಳಿಸಿದರು. ಸರ್ಕಾರಿ ಕಚೇರಿ, ಮೆರವಣಿಗೆ ಸಾಗುವ ರಸ್ತೆಯಲ್ಲಿ ವಾಣಿಜ್ಯ ಮಳಿಗೆಗಳ ಮೇಲೆ ಕನ್ನಡ ಬಾವುಟ ಹಾರಿಸಲು ಕ್ರಮ ಕೈಗೊಳ್ಳಬೇಕು. ಮೆರವಣಿಗೆಯಲ್ಲಿ ಸಾಗುವ ಕನ್ನಡಾಂಬೆ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವಂತೆ ನಗರಸಭೆ ಕಾರ್ಯಕ್ರಮ ರೂಪಿಸಬೇಕು ಎಂದರು.

ಬಹುಜನ ಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ನೀಲಿ ರಮೇಶ್, ಕನ್ನಡ ಸೇನೆ ತಾಲ್ಲೂಕು ಅಧ್ಯಕ್ಷ ಜಯಸಿಂಹ ಮಾತನಾಡಿ, ರಾಜ್ಯೋತ್ಸವದಲ್ಲಿ ನಾಡು–ನುಡಿ, ನೆಲ ಜಲ ಸೇರಿದಂತೆ ನಿರಂತರವಾಗಿ ಕನ್ನಡಪರ ಹೋರಾಟ ಮಾಡಿಕೊಂಡು ಬಂದಿರುವ ಹೋರಾಟಗಾರನ್ನು ಸತ್ಕರಿಸಲಾಗುವುದು ಎಂದರು. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಅವಿನಾಶ್ ಮಾತನಾಡಿ, ತಹಶೀಲ್ದಾರ್ ಬಳಿ ಚರ್ಚಿಸಿ ಅದ್ದೂರಿ, ಅರ್ಥಪೂರ್ಣ ರಾಜ್ಯೋತ್ಸವ ಆಚರಿಸಲು ಕ್ರಮವಹಿಸಲಾಗುವುದು ಎಂದರು.

### ಸಮೀಕ್ಷೆದಾರರ ಪದೇಪದೇ ಭೇಟಿ: ಗ್ರಾಮಸ್ಥರ ಅಸಮಾಧಾನ

• **ಉದಯವಾಹಿನಿ, ಶಿಡ್ಲಘಟ್ಟ**

ನಗರ, ತಾಲ್ಲೂಕು ಪ್ರದೇಶಗಳಲ್ಲಿ ನಡೆಯುತ್ತಿರುವ ಸಮೀಕ್ಷಾ ಕಾರ್ಯಕ್ಕೆ ಅಧಿಕಾರಿಗಳು ಒಂದೇ ಮನೆಗೆ 4–5 ಬಾರಿ ಭೇಟಿ ನೀಡಿ ಮಾಹಿತಿ ಸಂಗ್ರಹಿಸುತ್ತಿರುವುದು ನಾಗರಿಕರಲ್ಲಿ ಅಸಮಾಧಾನ, ಅನುಮಾನಕ್ಕೆ ಕಾರಣವಾಗಿದೆ. ಜನರ ಮಾಹಿತಿ ಸಂಗ್ರಹಿಸಲು ನೇಮಿಸಲಾದ ಗಣತಿದಾರರು, ಅಧಿಕಾರಿಗಳು ನಿಗದಿತ ಸಮಯವಲ್ಲದೆ ಸಂಜೆ, ರಾತ್ರಿ ವೇಳೆಯೂ ಮನೆ ಮನೆಗೆ ತೆರಳುತ್ತಿದ್ದಾರೆ. ಕೆಲವರು ಗಣತಿದಾರರು ಎಂದು ಹೇಳಿಕೊಂಡು ಹಾಳೆ, ಪುಸ್ತಕ ಹಿಡಿದು ಬಂದು ಮಾಹಿತಿ ಪಡೆಯುವುದು, ಕೆಲವೊಮ್ಮೆ ರಾತ್ರಿ ವೇಳೆ ಗಣತಿದಾರರೆಂದು ಬಂದು, ಹಿಂದೆ ಮಾಡಿದವರು ಗಣತಿ ಸರಿಯಾಗಿ ಮಾಡಿಲ್ಲ, ಮತ್ತೆ ಗಣತಿ ಮಾಡಬೇಕೆಂದು ಕೇಳುತ್ತಿದ್ದಾರೆ.

ಗುರುತಿನ ಚೀಟಿ ಕೇಳಿದರೆ ಕೆಲವರು ತೋರಿಸದೆ ಇರುವುದು ಅನುಮಾನಕ್ಕೆ ಕಾರಣ ಎಂದು ನಾಗರಿಕರು ಹೇಳುತ್ತಾರೆ. ಈಗಾಗಲೇ ಸಮೀಕ್ಷಾ ಕಾರ್ಯ ಬಹುತೇಕ ಪೂರ್ಣಗೊಂಡಿದೆ. ಉಳಿದ ಮನೆಗಳನ್ನು ಶೀಘ್ರದಲ್ಲೇ ಪೂರ್ಣಗೊಳಿಸಲಾಗುವುದು ಎಂದು ತಹಶೀಲ್ದಾರ್ ಗಗನ ಸಿಂಧು ಮಾಹಿತಿ ನೀಡಿದ್ದಾರೆ. ಈ ಮಧ್ಯೆ, ಶಿಡ್ಲಘಟ್ಟ ನಗರ ಭಾಗದಲ್ಲಿ, ನಗರಸಭೆಯಿಂದ ಇನ್ನೊಂದು ಗಣತಿ ನಡೆಯುತ್ತಿದೆ ಎಂದು ಯಾವುದೇ ಪೂರ್ವ ಮಾಹಿತಿ ನೀಡದೆ ಅಧಿಕಾರಿಗಳು ಮನೆ, ಮನೆಗೆ ಭೇಟಿ ಕೊಡುತ್ತಿರುವುದು ಮತ್ತಷ್ಟು ಗೊಂದಲಗಳಿಗೆ ಕಾರಣವಾಗಿದೆ. ಒಮ್ಮೆಲೇ ಸಂಪೂರ್ಣ ಮಾಹಿತಿ ತೆಗೆದುಕೊಂಡು ದಾಖಲೆ ಮಾಡಬಹುದಿತ್ತು. ಕೆಲಸಕ್ಕೆ ಅಥವಾ ಹೊರಗೆ ಹೋದಾಗ ಮನೆಯಲ್ಲಿ ಹೆಂಗಸರು ಒಂಟಿಯಾಗಿ ಇರುತ್ತಾರೆ.

ಈಗಾಗಲೇ 3–4 ಬಾರಿ ಮಾಹಿತಿ ನೀಡಿದ್ದರೂ ನಗರಸಭೆಯಿಂದ ಎಂದು ಹೇಳಿಕೊಂಡು ಮತ್ತೆ ವಿವರ ಸಂಗ್ರಹಿಸುತ್ತಿರುವುದು ಯಾಕೆ? ಎಷ್ಟು ಗಣತಿ ಕಾರ್ಯ ನಡೆಯುತ್ತಿವೆ ಎಂದು ನಗರದ ನಿವಾಸಿಗಳು ಪ್ರಶ್ನಿಸುತ್ತಿದ್ದಾರೆ.

### ಹಾಲು ಉತ್ಪಾದನೆ: ತುಮಲ್‌ಗೆ ಅಗ್ರಸ್ಥಾನ

• **ಉದಯವಾಹಿನಿ, ಹುಳಿಯಾರು**

ಹಾಲು ಉತ್ಪಾದನೆಯಲ್ಲಿ ತುಮಕೂರು ಹಾಲು ಒಕ್ಕೂಟ ಪ್ರಥಮ ಸ್ಥಾನದಲ್ಲಿದ್ದು, ಗುಣಮಟ್ಟದ ಹಾಲು ಉತ್ಪಾದನೆಗೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ ಎಂದು ತುಮುಲ್ ಅಧ್ಯಕ್ಷ ಎಚ್.ವಿ.ವೆಂಕಟೇಶ್ ತಿಳಿಸಿದರು. ಬೊಮ್ಮೇನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಬಿಎಂಸಿ ಘಟಕ ಉದ್ಘಾಟಿಸಿ ಮಾತನಾಡಿದರು. ಹಾಲು ಉತ್ಪಾದನೆ ಈ ಹಿಂದೆ ಹೆಚ್ಚಳವಾದಾಗ ತುಮುಲ್ ವಾರದಲ್ಲಿ ಎರಡು ದಿನ ಹಾಲು ಖರೀದಿ ಮಾಡಲಾಗದೆ ಹೈನುಗಾರರಿಗೆ ನಷ್ಟವಾಗುತ್ತಿತ್ತು. ಆದರೆ ಪ್ರಸ್ತುತ ದಿನಗಳಲ್ಲಿ ಹಾಲಿನ ಸಿಹಿ ಉತ್ಪನ್ನಗಳ ತಯಾರಿಕೆ ಸೇರಿದಂತೆ ಬೇರೆ ಬೇರೆ ರಾಜ್ಯಗಳಿಗೆ ಕಳುಹಿಸಲಾಗುತ್ತಿದ್ದು, ಎಷ್ಟು ಉತ್ಪಾದನೆ ಆದರೂ ಖರೀದಿ ನಿಲ್ಲುವುದಿಲ್ಲ. ಚಿಕ್ಕನಾಯಕನಹಳ್ಳಿ ಹಾಗೂ ಪಾವಗಡ ಬರದ ತಾಲ್ಲೂಕುಗಳಾಗಿದ್ದು ನೀರಿನ ಲಭ್ಯತೆ ಕಡಿಮೆಯಿದೆ.


ಆದರೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ತುಮಕೂರು ಹಾಲು ಒಕ್ಕೂಟದಲ್ಲಿ ಹಾಲು ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿದೆ. ಪಾವಗಡ ತಾಲ್ಲೂಕಿನಲ್ಲಿ ಉತ್ಪಾದನೆ ಕಡಿಮೆಯಿದ್ದು, ಈಗಾಗಲೇ ಜಿಲ್ಲಾ ಸಹಕಾರ ಬ್ಯಾಂಕ್ ನೆರವು ಪಡೆದು ಹಸುಗಳನ್ನು ಕೊಳ್ಳಲು ಸಾಲ ನೀಡಲಾಗುತ್ತಿದೆ.

ಮುಂದಿನ ದಿನಗಳಲ್ಲಿ ಪಾವಗಡದಲ್ಲೂ ಹೆಚ್ಚು ಹಾಲು ಉತ್ಪಾದನೆಗೆ ಶ್ರಮ ವಹಿಸಲಾಗುವುದು ಎಂದರು. ತುಮಕೂರು ಹಾಲು ಒಕ್ಕೂಟದ ನಿರ್ದೇಶಕ ಬುಳ್ಳೇನಹಳ್ಳಿ ಶಿವಪ್ರಕಾಶ್ ಮಾತನಾಡಿ, ಬಿಎಂಸಿ ಘಟಕಗಳ ಸ್ಥಾಪನೆಯಿಂದ ಹಾಲು ಶೇಖರಣೆಗೆ ಅನುಕೂಲವಾಗಿದೆ. ಎಲ್ಲಾ ಹಾಲನ್ನು ಒಂದೇ ಬಾರಿ ಒಕ್ಕೂಟಕ್ಕೆ ಸಾಗಿಸಲು ಕಷ್ಟಸಾಧ್ಯ. ಘಟಕಗಳಲ್ಲಿ ಶೇಖರಣೆ ಮಾಡಿ ನಂತರ ಸಾಗಾಣೆ ಮಾಡಲಾಗುತ್ತಿದ್ದು ಇದರಿಂದ ಸಾಗಣೆ ವೆಚ್ಚವೂ ಕಡಿಮೆಯಾಗುತ್ತಿದೆ ಎಂದರು.

ಅಂತರಾಳದಿಂದ..
EDITORIAL

# ತ್ಯಾಜ್ಯ ವಿಲೇವಾರಿಯಲ್ಲಿ ಅಸಡ್ಡೆ: ನಗರದ ಆರೋಗ್ಯಕ್ಕೆ ಅಪಾಯಕಾರಿ

ಬೆಂಗಳೂರು ಮಹಾನಗರದಲ್ಲಿ, ಅಪಾಯಕಾರಿ ತ್ಯಾಜ್ಯಗಳ ಅಸಮರ್ಪಕ ವಿಂಗಡಣೆ ಕಸ ಸಂಗ್ರಹಕಾರರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟುಮಾಡುತ್ತಿದೆ. ಬೆಂಗಳೂರು ನಗರದಲ್ಲಿ ಪ್ರತಿದಿನ ಸುಮಾರು ಒಂಬತ್ತು ಲಕ್ಷ ಸ್ಯಾನಿಟರಿ ಪ್ಯಾಡ್‌ಗಳನ್ನು ಬಳಸಿ ಎಸೆಯಲಾಗುತ್ತಿದೆ. ಈ ಪ್ಯಾಡ್‌ಗಳ ಪೈಕಿ ಹೆಚ್ಚಿನವು ಒಣ ತ್ಯಾಜ್ಯದ ಜೊತೆ ಸೇರುತ್ತವೆ. ಅಪಾಯಕಾರಿ ತ್ಯಾಜ್ಯ ಎಂದು ಪರಿಗಣಿಸಿ, ಪ್ರತ್ಯೇಕವಾಗಿ ಹಾಗೂ ಜಾಗರೂಕತೆಯಿಂದ ವಿಲೇವಾರಿ ಮಾಡಬೇಕಿದ್ದ ಸ್ಯಾನಿಟರಿ ಪ್ಯಾಡ್‌ಗಳನ್ನು ಬೇಜವಾಬ್ದಾರಿಯಿಂದ ಕಸದ ಬುಟ್ಟಿಗೆ ಎಸೆಯಲಾಗುತ್ತಿದೆ. ಇದರಿಂದಾಗಿ ನಗರದ ಪೌರಕಾರ್ಮಿಕರು ಹಾಗೂ ತ್ಯಾಜ್ಯವನ್ನು ಆಯುವ 22 ಸಾವಿರಕ್ಕೂ ಹೆಚ್ಚು ಮಂದಿ ವಿವಿಧ ಸೋಂಕುಗಳಿಗೆ ತುತ್ತಾಗುವ ಅಪಾಯ ಎದುರಿಸುತ್ತಿದ್ದಾರೆ. ಈ ಹಿಂದೆ ಅಸ್ತಿತ್ವದಲ್ಲಿ ಇದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಸ್ಯಾನಿಟರಿ ಪ್ಯಾಡ್, ಡೈಪರ್‌ಗಳು ಮತ್ತು ವೈದ್ಯಕೀಯ ತ್ಯಾಜ್ಯವನ್ನು ಪ್ರತ್ಯೇಕಿಸುವಂತೆ ಮೊದಲ ಬಾರಿಗೆ ಮನವಿ ಮಾಡಿದ್ದು 2016ರಲ್ಲಿ. ಆದರೆ, ತ್ಯಾಜ್ಯವನ್ನು ಪ್ರತ್ಯೇಕಿಸುವ ಕೆಲಸವು ಈಗಲೂ ತೃಪ್ತಿಕರ ಮಟ್ಟದಲ್ಲಿ ಆಗುತ್ತಿಲ್ಲ. ನಗರದ ನಿವಾಸಿಗಳು ವೈದ್ಯಕೀಯ ತ್ಯಾಜ್ಯವನ್ನು ಮನೆಯ ಇತರ ತ್ಯಾಜ್ಯಗಳ ಜೊತೆಯೇ ಇರಿಸುತ್ತಿದ್ದಾರೆ ಅಥವಾ ಅಂತಹ ತ್ಯಾಜ್ಯವನ್ನು ಖಾಲಿ ನಿವೇಶನಗಳಲ್ಲಿ ಸುರಿಯುತ್ತಿದ್ದಾರೆ. ನಗರದ ಅಸಂಘಟಿತ ವಲಯದಲ್ಲಿ ಕೆಲಸ ಮಾಡುವ ತ್ಯಾಜ್ಯ ಆಯುವವರು ಈ ಬಗೆಯ ತ್ಯಾಜ್ಯವನ್ನು ಬರಿಗೈಯಲ್ಲಿ ಹೆಕ್ಕುತ್ತಿದ್ದಾರೆ. ಬಹುತೇಕ ಸಂದರ್ಭಗಳಲ್ಲಿ ಅವರಿಗೆ ಕೈಗವಸು, ಮುಖಗವಸು ಇರುವುದಿಲ್ಲ. ಬಳಸಿ ಬಿಸಾಡಿದ ಪ್ಯಾಡ್‌ಗಳು, ಗಾಜಿನ ಚೂರುಗಳು, ಚುಚ್ಚುಮದ್ದಿನಲ್ಲಿ ಬಳಸಿದ ಸೂಜಿಗಳು ಕೂಡ ಇರುವ ತ್ಯಾಜ್ಯದ ಗುಪ್ಪೆಯಿಂದ ಅವರು ಪುನರ್ಬಳಕೆಗೆ ಬರುವ ತ್ಯಾಜ್ಯವನ್ನು ಆಯಲು ಮುಂದಾಗುತ್ತಾರೆ.




ಈ ಕೆಲಸದಲ್ಲಿ ಅವರು ಗಾಯಗಳಿಗೆ, ಸೋಂಕುಗಳಿಗೆ, ವಿವಿಧ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಅವರು ಮಾಡಿದ ಕೆಲಸವು ಯಾರ ಕಣ್ಣಿಗೂ ಬೀಳುವುದಿಲ್ಲ, ಆ ಕೆಲಸಕ್ಕೆ ಬೆಲೆಕಟ್ಟುವ ಕಾರ್ಯವೂ ಆಗುವುದಿಲ್ಲ. ನಾಗರಿಕರು ಸ್ಯಾನಿಟರಿ ಪ್ಯಾಡ್‌ಗಳನ್ನು ಹಾಗೂ ಬಳಸಿದ ಸೂಜಿಗಳನ್ನು ತೆಳುವಾದ ಪ್ಲಾಸ್ಟಿಕ್ ಪೊಟ್ಟಣಗಳಲ್ಲಿ ಅಥವಾ ಕಾಗದದ ಪೊಟ್ಟಣಗಳಲ್ಲಿ ಸುತ್ತಿ ಎಸೆಯುತ್ತಿದ್ದರೆ, ಅವರು ನಗರವನ್ನು ಸ್ವಚ್ಛವಾಗಿ ಇರಿಸಲು ಯತ್ನಿಸುತ್ತಿರುವ ಪೌರ ಕಾರ್ಮಿಕರ ಆರೋಗ್ಯದ ಬಗ್ಗೆ ಕಾಳಜಿವಹಿಸುತ್ತಿಲ್ಲ ಎಂದೇ ಅರ್ಥ. ಪ್ರತ್ಯೇಕಿಸದ ವೈದ್ಯಕೀಯ ತ್ಯಾಜ್ಯವು ರಕ್ತದ ಮೂಲಕ ಹರಡುವ ಕಾಯಿಲೆಗಳನ್ನು ಒಬ್ಬರಿಂದ ಇನ್ನೊಬ್ಬರಿಗೆ ಅಂಟಿಸುವ ಅಪಾಯ ಇರುತ್ತದೆ. ಅದರ ಜೊತೆಯಲ್ಲೇ ಅಂತಹ ತ್ಯಾಜ್ಯವು, ಪುನರ್ಬಳಕೆ ಮಾಡಬಹುದಾದ ಇತರ ತ್ಯಾಜ್ಯಗಳನ್ನೂ ಕಲುಷಿತಗೊಳಿಸುತ್ತದೆ. 'ಮಾರ್ಕ್‌ಇಟ್‌ರೆಡ್' ಹೆಸರಿನಲ್ಲಿ ನಡೆದಿರುವ ಅಭಿಯಾನವು, ವೈದ್ಯಕೀಯ ತ್ಯಾಜ್ಯ ಹಾಗೂ ಸ್ಯಾನಿಟರಿ ಪ್ಯಾಡ್‌ಗಳನ್ನು ಕಾಗದದ ಪೊಟ್ಟಣದಲ್ಲಿ ಇರಿಸಿ, ಅದರ ಮೇಲೆ ರೆಡ್ ಕ್ರಾಸ್‌ನ ಗುರುತು ಮಾಡಿ. ನಂತರ ಅದನ್ನು ಪೌರಕಾರ್ಮಿಕರಿಗೆ ಪ್ರತ್ಯೇಕವಾಗಿ ನೀಡಲು ಜನರನ್ನು ಉತ್ತೇಜಿಸುತ್ತಿದೆ. ಈ ಅಭಿಯಾನವು ಜವಾಬ್ದಾರಿಯುತ ನಾಗರಿಕರು ಏನು ಸಾಧಿಸಬಹುದು ಎಂಬುದನ್ನು ತೋರಿಸಿದೆ. ಬೆಂಗಳೂರಿನ ಜೆ.ಪಿ. ನಗರದಲ್ಲಿ ಇಂತಹ ತ್ಯಾಜ್ಯದ ಪೈಕಿ ಸರಿಸುಮಾರು ಶೇ 60ರಷ್ಟನ್ನು ಈಗ ಸರಿಯಾದ ಬಗೆಯಲ್ಲಿ ವಿಲೇವಾರಿ ಮಾಡಲಾಗುತ್ತಿದೆ. ಈ ಬಗೆಯ ಜಾಗೃತಿಯು ರಾಜ್ಯದ ಇತರ ಕಡೆಗಳಲ್ಲಿಯೂ ಮೂಡಬೇಕು.

ದುರದೃಷ್ಟದ ಸಂಗತಿಯೆಂದರೆ, ವೈದ್ಯಕೀಯ ತ್ಯಾಜ್ಯವನ್ನು ವಿಲೇವಾರಿ ಮಾಡುವುದಕ್ಕೆ ಸಂಬಂಧಿಸಿದಂತೆ ನಗರದಾದ್ಯಂತ ಅನ್ವಯವಾಗುವ ಶಿಷ್ಟಾಚಾರವೊಂದನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಇನ್ನಷ್ಟೇ ರೂಪಿಸಬೇಕಿದೆ. ಅಪಾಯಕಾರಿ ಅಗಬಲ್ಲ ತ್ಯಾಜ್ಯಗಳನ್ನು ವಿಲೇವಾರಿ ಮಾಡಲು ಪ್ರತ್ಯೇಕವಾದ ಕಸದಬುಟ್ಟಿಗಳು ಇಲ್ಲ. ಕೆಲವು ಕುಟುಂಬಗಳು ತ್ಯಾಜ್ಯವನ್ನು ವೈಜ್ಞಾನಿಕವಾಗಿ ಪ್ರತ್ಯೇಕಿಸಿದರೂ ಅದನ್ನು ಸಾಗಾಟ ಮಾಡುವಾಗ ಮತ್ತೆ ಒಂದರಲ್ಲಿ ಇನ್ನೊಂದನ್ನು ಸೇರಿಸುವ ಪ್ರವೃತ್ತಿ ಇದೆ. ತ್ಯಾಜ್ಯದ ವಿಲೇವಾರಿ, ಸಾಗಾಟಕ್ಕೆ ಸೂಕ್ತವಾದ ವ್ಯವಸ್ಥೆ ಇಲ್ಲದಿದ್ದರೆ ಪೌರಕಾರ್ಮಿಕರಿಗೇ ಅಪಾಯ ಎದುರಾಗುತ್ತದೆ, ನಾಗರಿಕರ ಪ್ರಯತ್ನಕ್ಕೆ ಬೆಲೆ ಇಲ್ಲದಂತಾಗುತ್ತದೆ. ವೈದ್ಯಕೀಯ ತ್ಯಾಜ್ಯ ಹಾಗೂ ಸ್ಯಾನಿಟರಿ ಪ್ಯಾಡ್‌ಗಳನ್ನು ಸೂಕ್ತವಾಗಿ ವಿಲೇವಾರಿ ಮಾಡುವುದು ನಗರ ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದ ಚರ್ಚೆಯ ಕೇಂದ್ರಬಿಂದುವಿನಂತಿದೆ. ವೈದ್ಯಕೀಯ ತ್ಯಾಜ್ಯವನ್ನು ವಿಲೇವಾರಿ ಮಾಡಲು ಆಡಳಿತ ವ್ಯವಸ್ಥೆಯು ಪ್ರತ್ಯೇಕವಾದ ಕಸದ ಬುಟ್ಟಿಯನ್ನು ಇರಿಸಬೇಕು. ಅವುಗಳನ್ನು ಸರಿಯಾಗಿ ವಿಲೇವಾರಿ ಮಾಡುವ ಬಗ್ಗೆ ಪೌರ ಕಾರ್ಮಿಕರಿಗೆ ಪಾಠ ಹೇಳಬೇಕು. ಅವರಿಗೆ ಅಗತ್ಯ ಉಪಕರಣಗಳನ್ನು ಒದಗಿಸಬೇಕು.

ಆದರೆ, ನಾಗರಿಕರ ಉಪೇಕ್ಷೆಯು ದೊಡ್ಡ ತಲೆನೋವಾಗಿ ಮುಂದುವರಿದಿದೆ. ಜವಾಬ್ದಾರಿಯು ಮನೆಗಳಿಂದಲೇ ಆರಂಭವಾಗುತ್ತದೆ ಎಂಬುದನ್ನು ನಾಗರಿಕರು ಅರ್ಥ ಮಾಡಿಕೊಳ್ಳಬೇಕು. ತ್ಯಾಜ್ಯದ ಮೇಲೆ ಕೆಂಪು ಬಣ್ಣದಿಂದ ಗುರುತುಹಾಕುವುದು ಸಾಂಕೇತಿಕ ಕೆಲಸ ಅಲ್ಲ. ಅದು ನಗರವನ್ನು ಸ್ವಚ್ಛವಾಗಿ ಇರಿಸುವ ಕಾರ್ಮಿಕರಿಗೆ ಗೌರವ ತೋರಬೇಕಾದ ನೈತಿಕ ಅಗತ್ಯವೂ ಹೌದು.

# ರಾಮಾಯಣ



## ಮಾರೀಚನು ರಾವಣನಿಗೆ ಹೇಳಿದ ಬುದ್ಧಿವಾದ

• ಹಿಂದಿನ ಸಂಚಿಕೆಯಿಂದ

### 120 ನೆಯ ಅಧ್ಯಾಯ

ವಿಶ್ವಾಮಿತ್ರನು ನನ್ನ ಬಾಧೆಯನ್ನು ತಾಳಲಾರದೆ ದಶರಥರಾಯನ ಸಮೀಪಕ್ಕೆ ಹೋಗಿ ಆ ರಾಯನನ್ನು ಕುರಿತು ಎಲೈ ದಶರಥರಾಯನೆ, ನಾನು ಈಗ ಯಾಗವನ್ನು ಮಾಡಬೇಕೆಂದು ಯತ್ನ ಮಾಡಿಕೊಂಡಿದ್ದೇನೆ. ದಂಡಕಾರಣ್ಯದಲ್ಲಿ ಮಾರೀಚನೆಂಬ ರಾಕ್ಷಸನು ನನ್ನನ್ನು ಯಜ್ಞಮಾಡಗೊಡದೆ ಬಾಧೆಪಡಿಸುತ್ತಿದ್ದಾನೆ. ಆತನ ಬಾಧೆಯನ್ನು ಪರಿಹರಿಸಿ ನನ್ನ ಯಾಗವನ್ನು ನೆರವೇರಿಸುವಂತೆ ನಿನ್ನ ಮಗನಾದ ಶ್ರೀರಾಮನನ್ನು ನನ್ನ ಯಾಗಕ್ಕೆ ಸಹಾಯವಾಗಿ ಕಳುಹಿಸು ಎಂದನು. ಅದಕ್ಕೆ ದಶರಥರಾಯನು ವಿಶ್ವಾಮಿತ್ರಮುನಿಗಳೆ, ನನ್ನ ಕುಮಾರನಾದ ಶ್ರೀರಾಮನು ಇನ್ನೂ ಹನ್ನೆರಡು ವರ್ಷದ ಬಾಲಕ ಸಾಧನೆಯನ್ನು ಮಾಡಿದವನಲ್ಲ: ಇಂಥವನನ್ನು ರಾಕ್ಷಸರೊಡನೆ ಯುದ್ಧಕ್ಕೆ ಹೇಗೆ ಕಳುಹಿಸಲಿ ನಾನೇ ನನ್ನ ಸಮಸ್ತ ಬಲವನ್ನೂ ಕೂಡಿಕೊಂಡು ನಿಮ್ಮ ಯಾಗರಕ್ಷಣಾರ್ಥವಾಗಿ ಬರುವೆನಲ್ಲದೆ ಶ್ರೀರಾಮನನ್ನು ಕಳುಹಿಸಲಾರೆನು' ಎಂದು ನುಡಿದನು. ಆ ಮಾತನ್ನು ಕೇಳಿ ವಿಶ್ವಾಮಿತ್ರನು ದಶರಥ ಲೋಕದಲ್ಲಿ ಶ್ರೀರಾಮನನ್ನುಳಿದು ಮತ್ತಾರೂ ರಾಕ್ಷಸ ಸಂಹಾರವನ್ನು ಮಾಡುವುದಕ್ಕೆ ಸಮರ್ಥರಲ್ಲ. ನಿನ್ನ ಸೇನೆಯು ನಿನ್ನ ಸಮೀಪದಲ್ಲೇ 'ಇರಲಿ. ನಾನು ತೇಜಸ್ವಿಯಾಗಿ ಮಹಾಬಲವಂತನಾದ ಶ್ರೀರಾಮನೊಬ್ಬನನ್ನೇ ಕರೆದುಕೊಂಡು ನನ್ನ ತಪೋವನಕ್ಕೆ ಹೋಗುತ್ತೇನೆ. ನಿನಗೆ ಅನೇಕ ಶ್ರೇಯಸ್ಸಾಗಲಿ ಎಂದು ಆಶೀರ್ವಾದ ಮಾಡಿ ಶ್ರೀರಾಮನನ್ನು ಕರೆದುಕೊಂಡು ದಂಡಕಾರಣ್ಯದಲ್ಲಿದ್ದ ತನ್ನ ಆಶ್ರಮಕ್ಕೆ ಹೋದನು. ಅಲ್ಲಿ ಯಾಗದೀಕ್ಷೆಯನ್ನು ಕೈಕೊಂಡು ಶ್ರೀರಾಮನನ್ನು ಯಾಗರಕ್ಷಣಾರ್ಥವಾಗಿ ತನ್ನ ಸಮೀಪದಲ್ಲಿಟ್ಟುಕೊಂಡು ಯಾಗದಲ್ಲಿ ತೊಡಗಿದನು. ಬಾಲಕನಾದ ಶ್ರೀರಾಮನು ಒಂದು ವಸ್ತ್ರವನ್ನು ಧರಿಸಿಕೊಂಡು ನೀಲಮೇಘದಂತೆ ತನುಕಾಂತಿಯುಳ್ಳವನಾಗಿ ತನ್ನ ತೇಜಸ್ಸಿನಿಂದ ದಂಡಕಾರಣ್ಯವನ್ನು ಬೆಳಗಿಸುತ್ತ ಉದಯಾಚಲವನ್ನೇರಿದ ಚಂದ್ರನಂತೆ ಸೊಬಗುಳ್ಳವನಾಗಿ ರತ್ನ ಖಚಿತವಾದ ಕುಂಡಲಗಳನ್ನು ಧರಿಸಿಕೊಂಡು ತನ್ನ ಬಿಲ್ಲನ್ನು ವಿಲಾಸಾರ್ಥವಾಗಿ ತಿರುಗಿಸುತ್ತಿದ್ದನು. ಆ ಸಮಯದಲ್ಲಿ ನಾನು ಕಾಲಮೇಘದಂತೆ ತನುಕಾಂತಿಯುಳ್ಳವನಾಗಿ ಕೊಬ್ಬಿದ ಗೂಳಿಯಂತೆ ಪರ್ವತಾಕಾರವಾದ ಶರೀರವುಳ್ಳವನಾಗಿ ವಿಶ್ವಾಮಿತ್ರಮುನೀಶ್ವರನ ಆಶ್ರಮಕ್ಕೆ ಹೋಗಲು ಶ್ರೀರಾಮನು ತನ್ನ ಬಿಲ್ಲಿಗೆ ಹೆದೆಯನ್ನೇರಿಸಿ ನನಗೆದುರಾಗಿ ನಿಂತನು. ನಾನು ಆತನನ್ನು ಬಾಲಕನೆಂದು ತಿಳಿದು ಲೆಕ್ಕಿಸದೆ ವಿಶ್ವಾಮಿತ್ರ ಮುನೀಶ್ವರನ ಹೋಮವೇದಿಕೆಯ ಸಮೀಪಕ್ಕೆ ವೇಗದಿಂದ ಹೋಗುತ್ತಿದ್ದೆನು. ಆಗ ಶ್ರೀರಾಮನು ಸಾಣೆ ಹಿಡಿಯಲ್ಪಟ್ಟು ಅತ್ಯಂತ ಕೂರಲಗುಳ್ಳ ಒಂದು ಬಾಣವನ್ನು ನನ್ನ ಮೇಲೆ ಎಸೆಯಲು ಆ ಬಾಣವು ನನ್ನನ್ನು ನೂರುಗಾವುದ ದೂರ ಎತ್ತಿಕೊಂಡು ಹೋಗಿ ಸಮುದ್ರದಲ್ಲಿ ಹಾಕಿತು

ಮುಂದುವರಿಯುವುದು...


# ಸಂಪಾದಕೀಯ



☛ ವಿಶ್ವಾಸ್.ಡಿ.ಗೌಡ

ಮನಶ್ಶಾಸ್ತ್ರಜ್ಞ ಹಿಡೆಕಿ ವಾಡಾ ದಿ 80-ಇಯರ್ ಓಲ್ಡ್ ವಾಲ್ ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಪುಸ್ತಕ ಬಿಡುಗಡೆಯಾದ ತಕ್ಷಣ, ಅದರ ಮಾರಾಟವು 500,000 ಪ್ರತಿಗಳನ್ನು ಮೀರಿತು, ಇದು ಆ ಸಮಯದಲ್ಲಿ ಹೆಚ್ಚು ಮಾರಾಟವಾದ ಪುಸ್ತಕವಾಯಿತು. ಈ ಮಾರಾಟದ ಪ್ರವೃತ್ತಿ ಮುಂದುವರಿದರೆ, ಪುಸ್ತಕದ ಮಾರಾಟವು 1 ಮಿಲಿಯನ್ ಪ್ರತಿಗಳನ್ನು ಮೀರುತ್ತದೆ ಮತ್ತು ಇದು ಜಪಾನ್‌ನ ವರ್ಷದ ಹೆಚ್ಚು ಮಾರಾಟವಾದ ಪುಸ್ತಕವಾಗಲಿದೆ. 61 ವರ್ಷ ವಯಸ್ಸಿನ ಡಾ. ವಾಡಾ, ವೃದ್ಧರಲ್ಲಿ ಮಾನಸಿಕ ಅಸ್ವಸ್ಥತೆಗಳಲ್ಲಿ ಪರಿಣತಿ ಹೊಂದಿರುವ ವೈದ್ಯರಾಗಿದ್ದಾರೆ.

ಅವರು 80 ವರ್ಷ ವಯಸ್ಸಿನವರಿಗೆ ಅದೃಷ್ಟ ಜೀವನದ




## ಅದೃಷ್ಟ ಜೀವನದ ರಹಸ್ಯಗಳು

ರಹಸ್ಯಗಳನ್ನು 44 ವಾಕ್ಯಗಳಾಗಿ ಸಂಕ್ಷೇಪಿಸಿದ್ದಾರೆ, ಕೆಳಗೆ ಪಟ್ಟಿ ಮಾಡಲಾಗಿದೆ:

1. ನಡೆಯುತ್ತಲೇ ಇರಿ.
2. ಕೋಪಗೊಂಡಾಗ, ಆಳವಾದ ಉಸಿರನ್ನು ತೆಗೆದುಕೊಳ್ಳಿ.
3. ನಿಮ್ಮ ದೇಹವು ಗಟ್ಟಿಯಾಗದಂತೆ ಸಾಕಷ್ಟು ವ್ಯಾಯಾಮ ಮಾಡಿ.
4. ಬೇಸಿಗೆಯಲ್ಲಿ ಹವಾನಿಯಂತ್ರಣವನ್ನು ಬಳಸುವಾಗ ಹೆಚ್ಚು ನೀರು ಕುಡಿಯಿರಿ.
5. ಚಲನಶೀಲತೆಯನ್ನು ಹೆಚ್ಚಿಸಲು ಡೈಪರ್‌ಗಳು ಸಹಾಯಕವಾಗಿವೆ.
6. ನೀವು ಹೆಚ್ಚು ಅಗಿಯುತ್ತೀರಿ, ನಿಮ್ಮ ಮೆದುಳು ಮತ್ತು ದೇಹವು ಹೆಚ್ಚು ಸಕ್ರಿಯವಾಗಿರುತ್ತದೆ.
7. ಸ್ಮರಣಶಕ್ತಿ ಕಡಿಮೆಯಾಗುವುದು ವಯಸ್ಸಿನಿಂದಲ್ಲ, ಬದಲಾಗಿ ಮೆದುಳಿನ ಬಳಕೆಯ ಕೊರತೆಯಿಂದ.
8. ಹೆಚ್ಚು ಔಷಧ ತೆಗೆದುಕೊಳ್ಳುವ ಅಗತ್ಯವಿಲ್ಲ.
9. ಅನಗತ್ಯವಾಗಿ ರಕ್ತದೊತ್ತಡ ಮತ್ತು ಸಕ್ಕರೆಯನ್ನು ಕಡಿಮೆ ಮಾಡುವ ಅಗತ್ಯವಿಲ್ಲ.
10 ಒಂಟಿಯಾಗಿರುವುದು ಒಂಟಿತನವಲ್ಲ ಅದು ಶಾಂತಿಯುತವಾಗಿ ಸಮಯ ಕಳೆಯುವುದು.
11. ಸೋಮಾರಿತನ ನಾಚಿಕೆಪಡುವ ವಿಷಯವಲ್ಲ.
12. ಚಾಲನಾ ಪರವಾನಗಿಗಾಗಿ ಹಣವನ್ನು ಖರ್ಚು ಮಾಡುವ ಅಗತ್ಯವಿಲ್ಲ (ಹಿರಿಯರು ತಮ್ಮ ಪರವಾನಗಿಗಳನ್ನು ಹಿಂದಿರುಗಿಸುವಂತೆ ಜಪಾನ್‌ನಲ್ಲಿ ಅಭಿಯಾನ ನಡೆಯುತ್ತಿದೆ).
13. ನಿಮಗೆ ಇಷ್ಟವಾದದ್ದನ್ನು ಮಾಡಿ; ನಿಮಗೆ ಇಷ್ಟವಿಲ್ಲದ ಕೆಲಸಗಳನ್ನು ಮಾಡಬೇಡಿ.
14. ವೃದ್ಧಾಪ್ಯದಲ್ಲಿಯೂ ಸಹ ನೈಸರ್ಗಿಕ ಆಸೆಗಳು ಉಳಿಯುತ್ತವೆ.
15. ಯಾವುದೇ ಸಂದರ್ಭದಲ್ಲಿ, ಯಾವಾಗಲೂ ಮನೆಯಲ್ಲಿ ಕುಳಿತುಕೊಳ್ಳಬೇಡಿ.
16. ನಿಮಗೆ ಇಷ್ಟವಾದದ್ದನ್ನು ತಿನ್ನಿರಿ; ಸ್ವಲ್ಪ ಬೊಜ್ಜು ಉತ್ತಮ.
17. ಎಲ್ಲವನ್ನೂ ಎಚ್ಚರಿಕೆಯಿಂದ ಮಾಡಿ.
18. ನಿಮಗೆ ಇಷ್ಟವಿಲ್ಲದ ಜನರೊಂದಿಗೆ ಸಹವಾಸ ಮಾಡಬೇಡಿ.
19. ಯಾವಾಗಲೂ ಟಿವಿ ನೋಡಬೇಡಿ.
20. ಅನಾರೋಗ್ಯದ ವಿರುದ್ಧ ಹೋರಾಡುವ ಬದಲು, ಅದರೊಂದಿಗೆ ಬದುಕಲು ಕಲಿಯಿರಿ.
21. ಕಾರು ಪರ್ವತವನ್ನು ತಲುಪಿದಾಗ, ರಸ್ತೆ ಕಾಣಿಸಿಕೊಳ್ಳುತ್ತದೆ – ಇದು ಹಿರಿಯರಿಗೆ ಸಂತೋಷದ ಮಾಂತ್ರಿಕ ನುಡಿಗಟ್ಟು.
22. ತಾಜಾ ಹಣ್ಣುಗಳು ಮತ್ತು ಸಲಾಡ್‌ಗಳನ್ನು ಸೇವಿಸಿ.
23. ಸ್ನಾನದ ಸಮಯ 10 ನಿಮಿಷಗಳನ್ನು ಮೀರಬಾರದು.
24. ನಿಮಗೆ ನಿದ್ರೆ ಬರದಿದ್ದರೆ, ನಿಮ್ಮನ್ನು ನೀವು ಒತ್ತಾಯಿಸಬೇಡಿ.
25. ಸಂತೋಷವನ್ನು ತರುವ ಚಟುವಟಿಕೆಗಳು ಮೆದುಳಿನ ಚಟುವಟಿಕೆಯನ್ನು ಹೆಚ್ಚಿಸುತ್ತವೆ.
26. ನಿಮಗೆ ಅನಿಸಿದ್ದನ್ನು ಹೇಳಿ; ಅತಿಯಾಗಿ ಯೋಚಿಸಬೇಡಿ.
27. ಸಾಧ್ಯವಾದಷ್ಟು ಬೇಗ ಕುಟುಂಬ ವೈದ್ಯರನ್ನು ಹುಡುಕಿ.
28. ಅತಿಯಾಗಿ ತಾಳ್ಮೆಯಿಂದ ಅಥವಾ ಬಲವಂತವಾಗಿ ವರ್ತಿಸಬೇಡಿ; ಧೈರ್ಯಶಾಲಿ ಹಿರಿಯ ವ್ಯಕ್ತಿಯಾಗಿರುವುದು ಕೆಟ್ಟದ್ದಲ್ಲ.
29. ಕೆಲವೊಮ್ಮೆ ನಿಮ್ಮ ಮನಸ್ಸನ್ನು ಬದಲಾಯಿಸುವುದು ಸರಿ.
30. ಜೀವನದ ಅಂತಿಮ ಹಂತದಲ್ಲಿ, ಬುದ್ಧಿಮಾಂದ್ಯತೆ ದೇವರ ಕೊಡುಗೆಯಾಗಿದೆ.
31. ನೀವು ಕಲಿಯುವುದನ್ನು ನಿಲ್ಲಿಸಿದರೆ, ನೀವು ವಯಸ್ಸಾಗುತ್ತೀರಿ.
32. ಖ್ಯಾತಿಯನ್ನು ಬಯಸಬೇಡಿ; ನಿಮ್ಮಲ್ಲಿರುವುದೇ ಸಾಕು.
33. ಮುಗ್ಧತೆ ವೃದ್ಧರಿಗೆ ಸೇರಿದ್ದು.
34. ಒಂದು ವಿಷಯ ಹೆಚ್ಚು ಕಷ್ಟಕರವಾಗಿದ್ದರೆ, ಅದು ಹೆಚ್ಚು ಆಸಕ್ತಿದಾಯಕವಾಗುತ್ತದೆ.
35. ಸೂರ್ಯನ ಸ್ನಾನವು ಸಂತೋಷವನ್ನು ತರುತ್ತದೆ.
36. ಇತರರಿಗೆ ಪ್ರಯೋಜನವಾಗುವ ಕೆಲಸಗಳನ್ನು ಮಾಡಿ.
37. ಇಂದು ನಿಧಾನವಾಗಿ ಕಳೆಯಿರಿ.
38. ಆಸೆಯೇ ದೀರ್ಘಾಯುಷ್ಯದ ಕೀಲಿಕೈ.
39. ಹರ್ಷಚಿತ್ತದಿಂದ ಬದುಕು.
40. ಸುಲಭವಾಗಿ ಉಸಿರಾಡಿ.
41. ಜೀವನದ ತತ್ವಗಳು ನಿಮ್ಮ ಕೈಯಲ್ಲಿವೆ.
42. ಎಲ್ಲವನ್ನೂ ಶಾಂತಿಯುತವಾಗಿ ಸ್ವೀಕರಿಸಿ.
43. ಹರ್ಷಚಿತ್ತದಿಂದ ಇರುವ ಜನರು ಎಲ್ಲರಿಗೂ ಪ್ರಿಯರು.
44. ನಗು ಅದೃಷ್ಟವನ್ನು ತರುತ್ತದೆ.

# ಯುವಜನತೆಯನ್ನು ಸೆಳೆದ ಇಗ್ನೈಟ್ ಮೆರಾಕಿ 2025 ಸಮ್ಮೇಳನ




• ಉದಯವಾಹಿನಿ, ಬೆಂಗಳೂರು

12ನೇ ಆವೃತ್ತಿಯ ಇಗ್ನೈಟ್ ಮೆರಾಕಿ 2025, ಇಗ್ನೈಟ್ ಕರೀರ್ ಫೆಸ್ಟ್ 2025 ಸಮ್ಮೇಳನವನ್ನು ಇಗ್ನೈಟ್ ಮೆರಾಕಿ ಫೌಂಡೇಶನ್ ಸಂಸ್ಥೆಯು ಡಬ್ಲ್ಯೂಟಿಎಫ್ (ವಿಟ್ನೆಸಿಂಗ್ ಟ್ರ್ಯೂ ಫ್ಯಾಷನ್) ಸಹಭಾಗಿತ್ವದಲ್ಲಿ ಬೆಂಗಳೂರಿನ ಕೋರ್ಟ್‌ಯಾರ್ಡ್ ಬೈ ಮ್ಯಾರಿಯಟ್‌ನಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ಕಾರ್ಯಕ್ರಮದಲ್ಲಿ 10,000 ಯುವಕ ಯುವತಿಯರು ನೋಂದಣಿ ಮಾಡಿಕೊಂಡಿದ್ದು, 2,000 ಜನರು ಅಂತಿಮ ಸುತ್ತಿನಲ್ಲಿ ಪಾಲ್ಗೊಂಡಿದ್ದರು. ಅಲ್ಲದೆ, 1,000 ಲೈವ್ ಪ್ರಾಜೆಕ್ಟ್ ಪ್ರೆಸೆಂಟೇಶನ್‌ಗಳೂ ಇದರಲ್ಲಿ ಕಂಡುಬಂದವು.

**ಕ್ರಿಯಾಶೀಲತೆ ಮತ್ತು ವಿಶಿಷ್ಟ ವಿನ್ಯಾಸವನ್ನು ಇಗ್ನೈಟ್ ಮೆರಾಕಿ ಪ್ರೋತ್ಸಾಹಿಸುತ್ತದೆ ಎಂದು ಡಬ್ಲ್ಯೂಟಿಎಫ್ ಸಂಸ್ಥಾಪಕ ಕುಮುದ್ ಸುಮನ್ ಹೇಳಿದ್ದಾರೆ. ಅಲ್ಲದೆ, ಭಾರತದಲ್ಲಿ ಒಂದು ಉತ್ತಮ ವಿನ್ಯಾಸ ಪರಿಸರವನ್ನು ನಿರ್ಮಾಣ ಮಾಡುವುದಕ್ಕೆ ಯುವಜನತೆ ಮತ್ತು ಮಾರ್ಗದರ್ಶಕರ ಬದ್ಧತೆ ಮುಖ್ಯ ಎಂದು ಇಗ್ನೈಟ್ ಇಂಡಿಯಾ ಎಜುಕೇಶನ್‌ನ ಸಹಸಂಸ್ಥಾಪಕ ಮತ್ತು ಸಿಒಒ ಕೃಷ್ಣ ನಂದ್ ಸಿಂಗ್ ಹೇಳಿದ್ದಾರೆ.**

ವಿಶಿಷ್ಟ ವಿನ್ಯಾಸ, ಎಐ ಕ್ರಿಯಾಶೀಲತೆ, ಉತ್ಪನ್ನದ ಅನ್ವೇಷಣೆ ಮತ್ತು ವಿನ್ಯಾಸ ಶಿಕ್ಷಣದಲ್ಲಿ ಭವಿಷ್ಯದ ಅವಕಾಶಗಳ ಬಗ್ಗೆ ಗಣ್ಯರ ಸಂವಾದ, ಕಾರ್ಯಾಗಾರಗಳು ಮತ್ತು ಪೋರ್ಟ್‌ಫೋಲಿಯೋ ವಿಶ್ಲೇಷಣೆಗಳನ್ನು ನಡೆಸಲಾಯಿತು. ಎನ್‌ಐಎಫ್‌ಟಿ ಮತ್ತು ಪರ್ಲ್ ಅಕಾಡೆಮಿಯು ಈ ಕಾರ್ಯಕ್ರಮಕ್ಕೆ ಶಿಕ್ಷಣ ಪಾಲುದಾರರಾಗಿದ್ದು, ಯುನಿಬಿಕ್ ವಿಶೇಷ ಪ್ರಾಯೋಜಕತ್ವವನ್ನು ವಹಿಸಿಕೊಂಡಿತ್ತು.

ಈ ವೇಳೆ, ಇಗ್ನೈಟ್ ಮೆರಾಕಿ ಶರೋದ್ ಸೊಮ್ಮನ್ 2025 ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮವೂ ನಡೆಯಿತು. ಬೆಂಗಳೂರಿನ ವಿಶಿಷ್ಟ ದುರ್ಗಾ ಪೂಜೆ ಪೆಂಡಾಲ್ ಅನ್ನು ಪ್ರತಿಫಲಿಸುವ ರೀತಿಯಲ್ಲಿ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿತ್ತು. ಮೆರಾಕಿ ಫ್ಯಾಷನ್ ಶೋದಲ್ಲಿ ಕ್ರಿಯಾಶೀಲ ಫೋಟೋಗ್ರಫಿ, ಉತ್ಪನ್ನ ವಿನ್ಯಾಸ ಮತ್ತು ಫ್ಯಾಷನ್ ಸ್ಟೈಲಿಂಗ್ ವಿಭಾಗದಲ್ಲಿ ಸ್ಪರ್ಧೆಗಳನ್ನು ನಡೆಸಲಾಯಿತು. ಇದರಲ್ಲಿ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ಈ ಸ್ಪರ್ಧೆಯಲ್ಲಿ ಏಕ್ಯಾ ಐಟಿಪಿಎಲ್‌ಗೆ 1ನೇ ಸ್ಥಾನ, ಎಪಿಎಸ್ ಕಾಮರಾಜ್ ರೋಡ್ ಗೆ 2ನೇ ಸ್ಥಾನ ಮತ್ತು ಡಿಪಿಎಸ್ ಈಸ್ಟ್ ಹಾಗೂ ವಿಬ್‌ಗ್ಯೋರ್ ಹೈ ಸ್ಕೂಲ್ ಜಂಟಿಯಾಗಿ 3ನೇ ಸ್ಥಾನ ಪಡೆದುಕೊಂಡಿತು. ಭಾಗವಹಿಸಿದ ವಿದ್ಯಾರ್ಥಿಗಳಿಗೆ ಉದ್ಯಮದ ಪರಿಣಿತರು ಮಾರ್ಗದರ್ಶನ ನೀಡಿದರು ಹಾಗೂ ಅಮೂಲ್ಯ ಒಳನೋಟಗಳನ್ನು ಹಂಚಿಕೊಂಡರು. ಹಲವು ಸಂಸ್ಥೆಗಳು ಶೈಕ್ಷಣಿಕ ಪರಿಣಿತಿ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದು, ವಿದ್ಯಾರ್ಥಿಗಳ ಬೆಳವಣಿಗೆಗೆ ತಮ್ಮ ಬದ್ಧತೆಯನ್ನು ಪ್ರತಿಫಲಿಸಿವೆ.

# ಜೆಬಿಎ ಅಧಿಕಾರಿ, ನೌಕರರು ಅತಂಕ ಪಡಬೇಡಿ

## ಜೆಬಿಎ ಸಮೀಕ್ಷೆಯಲ್ಲಿ ಅಧಿಕಾರಿ, ನೌಕರರು ಮಾನಸಿಕ ಹಿಂಸೆ, ಕಿರುಕುಳದಿಂದ ಬೆಂದು ಹೋಗಿದ್ದಾರೆ

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರ-ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಹಿಂದುಳಿದ ವರ್ಗಗಳ ಆಯೋಗದಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಹಗಲು-ರಾತ್ರಿ ಎನ್ನದೇ ಸಮೀಕ್ಷೆ ಮಾಡುತ್ತಿರುವ ಅಧಿಕಾರಿ, ನೌಕರರಿಗೆ ವಿನಃಕಾರಣ ನೋಟಿಸ್ ನೀಡಿ ಮಾನಸಿಕ ಹಿಂಸೆ ಮತ್ತು ಕಿರುಕುಳ ನೀಡುತ್ತಿರುವುದು, ಕಂದಾಯ ಮೌಲ್ಯಮಾಪಕರಾದ ಶ್ರೀನಿವಾಸ್ ರವರನ್ನು ಅಮಾನತ್ತು ಮಾಡಿರುವುದನ್ನ ಖಂಡಿಸಿ ಬೃಹತ್ ಸಭೆ ಏರ್ಪಡಿಸಲಾಗಿತ್ತು.

**ಅಮಾನತ್ತು, ನೋಟಿಸ್ ನೀಡಿದರೆ ಭಯ ಪಡಬೇಡಿ**

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಧಿಕಾರಿ ಮತ್ತು ನೌಕರರ ಕ್ಷೇಮಾಭವೃದ್ಧಿ ಸಂಘದ ಅಧ್ಯಕ್ಷರಾದ ಎ.ಅಮೃತ್ ರಾಜ್ ರವರು, ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಸಿ.ಎಸ್.ಷಡಾಕ್ಷರಿರವರು, ಸಚಿವಾಲಯ ನೌಕರರ ಸಂಘದ ಅಧ್ಯಕ್ಷರಾದ ರಮೇಶ್ ಸಂಗಾರವರು, ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಎ.ಅಮೃತ್ ರಾಜ್ ರವರು ಮಾತನಾಡಿ ರಾಜ್ಯ ಸರ್ಕಾರಿ ನೌಕರರುಪಾಲಿಕೆ ನೌಕರರಿಗೆ ಯಾವುದೇ ಸಮಸ್ಯೆಯಾದಲ್ಲಿ ಹೋರಾಟದ ಮೂಲಕ ನ್ಯಾಯ ಪಡೆಯುವ ಹಕ್ಕು ಇದೆ. ಸಿಬ್ಬಂದಿಗಳ ಕೊರತೆಯ ನಡುವೆ ನೌಕರರು ಉತ್ತಮವಾಗಿ ಕೆಲಸ



☛ ಉದಯವಾಹಿನಿ ಚಿತ್ರ

ಮಾಡುತ್ತಿದ್ದಾರೆ ಅವರನ್ನ ಮಾನಸಿಕವಾಗಿ ಕುಗ್ಗಿಸುವ ಕೆಲಸವಾಗಬಾರದು. ಜಿಬಿಎ ಮುಖ್ಯ ಆಯುಕ್ತರು ಮಾತನಾಡಿ ಪ್ರತಿಭಟನೆ, ಹೋರಾಟ ಮಾಡಬೇಡಿ ನಾವು ನಿಮ್ಮ ಜೊತೆಯಲ್ಲಿ ಚರ್ಚಿಸಿ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲಾಗುವುದು ಎಂದು ಭರವಸೆ ನೀಡಿದ್ದಾರೆ. ಸಿ.ಎಸ್. ಷಡಾಕ್ಷರಿ ರವರು ಮಾತನಾಡಿ ಬೆಂಗಳೂರಿನ ಸಮೀಕ್ಷೆ ಕಾರ್ಯದಲ್ಲಿ ಹಲವಾರು ಗೊಂದಲಗಳು ಇವೆ. ಸಮೀಕ್ಷೆಯಿಂದ ಶಾಲೆ, ಕಾಲೇಜು, ಸರ್ಕಾರ, ಬಿಜಿಎ ಕೆಲಸ ಕಾರ್ಯಗಳು ನಡೆಯುತ್ತಿಲ್ಲ. ಇದರ ಕುರಿತು ಮುಖ್ಯ ಕಾರ್ಯದರ್ಶಿಗೆ ದೂರು ನೀಡಲಾಗಿದೆ. ಮೇಲಾಧಿಕಾರಿಗಳ ವಿರುದ್ಧ ಆಕ್ರೋಶದಿಂದ ಮಾತನಾಡಬೇಕಾಗಿ ಬಂದಿದೆ.

ಮೇಲಾಧಿಕಾರಿಗಳ ಸಮೀಕ್ಷೆ ಮಾಡಿ ಅದರ ಕಷ್ಟ ಏನು



ಎಂಬುದು ತಿಳಿಯುತ್ತದೆ. ಲೋಕಸಭಾ, ವಿಧಾನಸಭಾ ಹಲವಾರು ಚುನಾವಣೆಗಳಲ್ಲಿ ಉತ್ತಮವಾಗಿ ಕೆಲಸ ಮಾಡಿದ್ದಾರೆ ನೌಕರರು, ಅದರೆ ಇಂತಹ ಕೆಟ್ಟ ಸಮೀಕ್ಷೆ ವ್ಯವಸ್ಥೆಯಿಂದ ನೌಕರರು ಸಂಕಷ್ಟಕ್ಕೆ ಒಳಗಾಗಿದ್ದಾರೆ.

ಅಮಾನತ್ತು, ನೋಟಿಸ್ ಕೊಟ್ಟರೆ ಭಯಪಡಬೇಡಿ, ಏನು ಮಾಡಲು ಸಾಧ್ಯವಿಲ್ಲ. 18ನೇ ತಾರೀಖಿನವರಗೆ ಸಮೀಕ್ಷೆ ಮಾಡಿ ಮುಗಿಸಿ ಎಂದು ಹೇಳಿದರು.

**ಸಮೀಕ್ಷೆ ಮಾಡುವ ಬಗ್ಗೆ ನಮ್ಮ ವಿರೋಧವಿಲ್ಲ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಧಿಕಾರಿ, ನೌಕರರ ಮೇಲೆ ಕೆಲಸದ ಒತ್ತಡವಿದೆ. ಸಮೀಕ್ಷೆ ಮಾಡುವಾಗ ಸಮಸ್ಯೆಗಳು ಹಲವಾರು ಇದೆ ಶೌಚಾಲಯ ವ್ಯವಸ್ಥೆ ಇಲ್ಲ, ಬೀದಿ ನಾಯಿಗಳ ಕಚ್ಚಿರುವ ಪ್ರಕರಣಗಳು ಇವೆ. ನಮ್ಮ ಸಮಸ್ಯೆ ಹೇಳುತ್ತೇವೆ ಪರಿಹಾರ ಮಾಡಿ ಎಂದು ಸಮೀಕ್ಷೆಗೆ ನಮ್ಮ ವಿರೋಧವಿಲ್ಲ. ಸಮೀಕ್ಷೆ ನಿಯೋಜನೆಯಲ್ಲಿ ಅವೈಜ್ಞಾನಿಕವಾಗಿ ನೇಮಿಸಲಾಗಿದೆ. ಮಹಿಳಾ ನೌಕರರಿಗೆ ಯಾಕೆ ಹಿಂಸೆ ನೀಡುತ್ತಿದ್ದಾರೆ ಎಂಬ ಚಿಂತನೆ ಮಾಡಬೇಕು ಹಿರಿಯ ಅಧಿಕಾರಿಗಳು. ಮುಖ್ಯ ಆಯುಕ್ತರು, ವಿಶೇಷ ಆಯುಕ್ತರು 10ಮನೆ ಸಮೀಕ್ಷೆ ಮಾಡಲಿ ಆಗ ಕಷ್ಟ ಏನು ಎಂಬುದು ಗೊತ್ತಗುತ್ತದೆ. ಮುಖ್ಯ ಕಾರ್ಯದರ್ಶಿಗಳ ಜೊತೆಯಲ್ಲಿ ನೌಕರರ ಸಮಸ್ಯೆಗಳು ಕುರಿತು ತಿಳಿಸಲಾಯಿತು.**

-ರಮೇಶ್ ಸಂಗಾ

# ಇದು ಸರಕಾರದ ಅಧಿಕಾರದ ದುರುಪಯೋಗ, ನಿಷೇಧಾಜ್ಞೆ ಕೂಡಲೇ ಹಿಂಪಡೆಯಿರಿ

• ಉದಯವಾಹಿನಿ, ವಿಜಯಪುರ


ಕರ್ನಾಟಕ ಸರ್ಕಾರವು ಧಾರ್ಮಿಕ ಭಾವನೆ ಮತ್ತು ಕಾನೂನು ಸುವ್ಯವಸ್ಥೆಗೆ ಧಕ್ಕೆ ಕಾರಣವನ್ನು ನೀಡಿ, ವಿಜಯಪುರ ಜಿಲ್ಲೆಗೆ ಪೂಜನೀಯ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿಯವರ ಪ್ರವೇಶವನ್ನು 2 ತಿಂಗಳ ಕಾಲ ನಿಷೇಧಿಸಿರುವ ಕ್ರಮವನ್ನು ಹಿಂದೂ ಜನಜಾಗೃತಿ ಸಮಿತಿಯು ತೀವ್ರವಾಗಿ ಖಂಡಿಸುತ್ತದೆ. ನಮ್ಮ ನಾಡಿನ ಶ್ರೇಷ್ಠರಾದ ಸಮಾಜ ಪರಿವರ್ತನೆಗೆ ಯೋಗದಾನ ನೀಡುತ್ತಿರುವ ಪೂಜ್ಯ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿಯವರು ಕಳೆದ 25 ವರ್ಷಗಳಿಂದ ನಿಸ್ವಾರ್ಥ ಸಮಾಜ ಸೇವೆಯಲ್ಲಿ ತೊಡಗಿಕೊಂಡು ಕೋಟಿ ಜನರ ಹೃದಯದಲ್ಲಿ ಭಕ್ತಿ, ನೈತಿಕತೆ ಮತ್ತು ಸನಾತನ ಸಂಸ್ಕೃತಿಯ ಪ್ರಜ್ವಲಿತ ದೀಪ ಬೆಳಗಿಸಿದ್ದಾರೆ. ಅವರ ಮೇಲಿನ ಈ ನಿಷೇಧವು ಸನಾತನ ಗೌರವಪೂರ್ಣ ಸಂತ ಪರಂಪರೆಗೆ ಮಾಡಿದ ಅಪಮಾನವಾಗಿದೆ. ಇದು ಸರಕಾರದ ಅಧಿಕಾರದ ದುರುಪಯೋಗ ಮತ್ತು ಸಂತರ ವಾಕ್ ಸ್ವಾತಂತ್ರ್ಯದ ಮೇಲಿನ ದಾಳಿಯಾಗಿದೆ. ಒಂದು ಕಡೆ ಸರಕಾರವು ಸರಕಾರಿ ಕಾರ್ಯಕ್ರಮದಲ್ಲಿ ಕುರಾನ್ ಪಠಣವನ್ನು ಮಾಡುತ್ತದೆ ಮತ್ತೊಂದು ಕಡೆ ಕಾನೂನು ಚೌಕಟ್ಟಿನಲ್ಲಿ ಸಮಾಜ ಪರಿವರ್ತನೆಯ ಕಾರ್ಯ ಮಾಡುವ ಸ್ವಾಮೀಜಿಗಳ ಮೇಲೆ ನಿಷೇಧವನ್ನು ಹೇರುತ್ತಿದೆ. ಭಾರತದಲ್ಲಿ ಹಿಂದೂ ಸಂತರು ಒಂದು ಜಿಲ್ಲೆಗೆ ಪ್ರವೇಶಿಸುವುದನ್ನು ನಿಷೇಧ ಹೇರಬಹುದು, ಆದರೆ ಭಾರತದ ಯಾವುದೇ ರಾಜ್ಯ ಅಥವಾ ಜಿಲ್ಲೆಯಲ್ಲಿ ಮತಾಂತರ ಮಾಡುವ ಮಿಷನರಿಗಳಿಗೆ ನಿಷೇಧವಿಲ್ಲ, ಲವ್ ಜಿಹಾದಿ ಕೃತ್ಯಗಳಿಗೆ ನಿಷೇಧವಿಲ್ಲ, ಗಲಭೆ ಸೃಷ್ಟಿಸುವವರ ಮೇಲೆ ನಿಷೇಧವಿಲ್ಲ, ಮೂರ್ತಿಗಳನ್ನು ಒಡೆಯುವವರ ಮೇಲೆ ನಿಷೇಧವಿಲ್ಲ, ಗೋಮಾತೆಯನ್ನು ಖಾಸಾಯಿಕಾನೆಗಳಲ್ಲಿ ಕೊಲ್ಲುವುದರ ಮೇಲೆ ನಿಷೇಧವಿಲ್ಲ, ಆದರೆ ಗೋರಕ್ಷಣೆ, ಸಂಸ್ಕೃತಿ ರಕ್ಷಣೆ, ಧರ್ಮರಕ್ಷಣೆ ಮಾಡುವ ಒಬ್ಬ ಹಿಂದೂ ಸಂತರ ಮೇಲೆ ನಿಷೇಧ ಹೇರಲಾಗುತ್ತದೆ. ನಾವು ಭಾರತದಲ್ಲಿದ್ದೇವೋ ಪಾಕಿಸ್ತಾನದಲ್ಲಿದ್ದೇವೋ ಅಸದುದ್ದೀನ್ ಓವೈಸಿಯಂಥವರು ರಾಜಾರೋಷವಾಗಿ ಪ್ರಚೋದನಕಾರಿ ಭಾಷಣ ನೀಡುವರು, ಆದರೆ ಅವರ ಹೆಸರಿನಲ್ಲಿ ಎಂದೂ ನಿಷೇಧದ ಕೂಗು ಕೇಳಿ ಬರಲಿಲ್ಲ, ಕೇವಲ ಹಿಂದೂ ಸಂತರನ್ನು ಮಾತ್ರ ಗುರಿಯಾಗಿಸಲಾಗುತ್ತಿದೆ.

**ಸ್ವಾಮೀಜಿಯವರ ಕೆಲ ಪ್ರಮುಖ ಸಮಾಜಮುಖಿ ಸೇವಾ ಕಾರ್ಯಗಳು ಇಂತಿವೆ**

- **28 ದೇಶೀಯ ತಳಿಯ 2000 ಗೋವುಗಳನ್ನು ಸಾಕಿ ಗೋ ಸಂರಕ್ಷಣೆಗೆ ಜೀವಮಾನದ ಸೇವೆ ಸಲ್ಲಿಸುತ್ತಿದ್ದಾರೆ.**
- **ಕಳೆದ 8 ವರ್ಷಗಳಿಂದ 400 ಕ್ಕೂ ಹೆಚ್ಚು ಮಕ್ಕಳಿಗೆ "ಊಟ, ವಸತಿ, ಶಿಕ್ಷಣ ಮಾರಾಟಕ್ಕಲ್ಲ ಎಂಬ ಸಂಕಲ್ಪದೊಂದಿಗೆ ಭಾರತೀಯ ಪರಂಪರೆಯ ಗುರುಕುಲ ಶಿಕ್ಷಣ ನೀಡುತ್ತಿದ್ದಾರೆ.**
- **600 ಕ್ಕೂ ಹೆಚ್ಚು ವಯೋವೃದ್ಧರಿಗೆ ಗೌರವಧನ ನೀಡಿ ಸಾಕಿ ಸಲಹುತ್ತಿದ್ದಾರೆ.**
- **ಆಯುರ್ವೇದ ಮತ್ತು ಅಲೋಪೆಥಿಕ್ ಆಸ್ಪತ್ರೆಗಳನ್ನು ನಿರ್ಮಿಸಿ ಲಕ್ಷಾಂತರ ಬಡವರಿಗೆ ಅತಿ ಕಡಿಮೆ ಖರ್ಚಿನಲ್ಲಿ ಚಿಕಿತ್ಸೆ ನೀಡುತ್ತಿದ್ದಾರೆ.**
- **1000 ಕ್ಕೂ ಹೆಚ್ಚು ಅನಾಥ ಮಕ್ಕಳನ್ನು ದತ್ತು ಪಡೆದು ಉಚಿತ ಊಟ, ವಸತಿ, ಶಿಕ್ಷಣ ಮತ್ತು ಉದ್ಯೋಗದ ಅವಕಾಶ ಒದಗಿಸುತ್ತಿದ್ದಾರೆ.**
- **500 ಕ್ಕೂ ಹೆಚ್ಚು ಹಿಂದುಳಿದ ಶಾಲೆಗಳನ್ನು ದತ್ತು ಪಡೆದು ಅಲ್ಲಿ ಶಿಕ್ಷಕರನ್ನು ನೇಮಿಸಿ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದಾರೆ.**
- **100 ಕ್ಕೂ ಹೆಚ್ಚು ಬ್ರಹ್ಮಚಾರಿಗಳನ್ನು ತರಬೇತುಗೊಳಿಸಿ ವೀರ ಸನ್ಯಾಸಿಗಳನ್ನಾಗಿ ರೂಪಿಸುತ್ತಿದ್ದಾರೆ.**
- **ಕಳೆದ 20 ವರ್ಷಗಳಿಂದ 15 ಲಕ್ಷಕ್ಕೂ ಅಧಿಕ ರೈತರಿಗೆ ಸಾವಯವ, ನೈಸರ್ಗಿಕ ಹಾಗೂ ಗೋ ಆಧಾರಿತ ಕೃಷಿಯ ಮಾರ್ಗದರ್ಶನ ನೀಡಿದ್ದಾರೆ. 10000 ಕ್ಕೂ ಹೆಚ್ಚು ದೇಶೀಯ ಬೀಜಗಳನ್ನು ಸಂರಕ್ಷಿಸಿ ದೇಶದಾದ್ಯಂತ ಹಂಚುತ್ತಿದ್ದಾರೆ.**
- **ಭಾರತದಲ್ಲಿ ಮೊದಲ ಬಾರಿಗೆ ಸಾವಯವ ಕೃಷಿ ವಿಜ್ಞಾನ ಕೇಂದ್ರ ಸ್ಥಾಪಿಸಿ ಲಕ್ಷಾಂತರ ರೈತರಿಗೆ ವಿಷಮುಕ್ತ ಕೃಷಿಯ ಜ್ಞಾನ ನೀಡುತ್ತಿದ್ದಾರೆ.**

ಇಂತಹ ಅಪಾರ ಧಾರ್ಮಿಕ, ಸಾಮಾಜಿಕ ಮತ್ತು ರಾಷ್ಟ್ರೀಯ ಸೇವೆ ಮಾಡುತ್ತಿರುವ ಒಬ್ಬ ಸ್ವಾಮೀಜಿಯವರ ಮೇಲೆ ಸರ್ಕಾರ ನಿಷೇಧ ವಿಧಿಸಿರುವುದು ಧರ್ಮ, ಸಂಸ್ಕೃತಿ ಮತ್ತು ಮಾತುಗಳ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂತಹ ದುಃಖಕರ ಅಸಂವಿಧಾನಿಕ ಕ್ರಮವಾಗಿದೆ. ಇದನ್ನು ಹಿಂದೂ ಜನಜಾಗೃತಿ ಸಮಿತಿಯು ತೀವ್ರವಾಗಿ ಖಂಡಿಸುತ್ತದೆ ಮತ್ತು ಈ ಮುಂದಿನ ಬೇಡಿಕೆಯನ್ನು ಇಡುತ್ತದೆ.

ಪೂಜ್ಯ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿಯವರ ಮೇಲಿನ ಈ ಸಂವಿಧಾನ ಬಾಹಿರ ನಿಷೇಧವನ್ನು ತಕ್ಷಣ ಹಿಂತೆಗೆದುಕೊಳ್ಳಬೇಕು. ಸನಾತನ ಧರ್ಮದ ಗೌರವವನ್ನು ಕಾಯುವ ಸತ್ಪುರುಷರ ವಿರುದ್ಧ ರಾಜಕೀಯ ಅಥವಾ ಧಾರ್ಮಿಕ ದ್ವೇಷದಿಂದ ಪ್ರೇರಿತ ಕ್ರಮಗಳನ್ನು ಕೈಗೊಳ್ಳಬಾರದು. ಹಿಂದೂಗಳ ಹೃದಯಗಳಲ್ಲಿ ಗೌರವ ಪಡೆದಿರುವ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿಯವರು ಜನರ ಏಕತೆ, ಧರ್ಮ, ಮತ್ತು ನೈತಿಕತೆಯ ಚೇತನಾಶಕ್ತಿಯಾಗಿದ್ದಾರೆ. ಇಂತಹ ಸ್ವಾಮೀಜಿಯವರ ಧ್ವನಿಯನ್ನು ಅಡಗಿಸಲು ಪ್ರಯತ್ನಿಸುವುದು ಸಮಾಜದ ಹಿತಕ್ಕೆ ವಿರುದ್ಧವಾಗಿದೆ.



## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕ ಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ**: ಸ್ವಯಂ ಸುಧಾರಣೆಯ ಯೋಜನೆಗಳು ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಫಲ ನೀಡುತ್ತವೆ – ನಿಮ್ಮ ಬಗ್ಗೆ ನಿಮಗೇ ಒಳ್ಳೆಯದೆನಿಸುತ್ತದೆ ಮತ್ತು ವಿಶ್ವಾಸ ಮೂಡುತ್ತದೆ. ಆಸ್ತಿ ವ್ಯವಹಾರಗಳು ಅಸಾಧಾರಣ ಲಾಭ ತರುತ್ತವೆ.

**ವೃಷಭ**: ರಾತ್ರಿಯ ವೇಳೆಯಲ್ಲಿ ಇಂದು ನೀವು ಮನೆಯ ಸದಸ್ಯರಿಂದ ದೂರ ಹೋಗಿ ನಿಮ್ಮ ಮನೆಯ ಟೆರೇಸ್ ಅಥವಾ ಯಾವುದೇ ಉದ್ಯಾನದಲ್ಲಿ ಸುತ್ತಲೂ ಇಷ್ಟಪಡುತ್ತೀರಿ.

**ಮಿಥುನ**: ಸಂಬಂಧಿಕರು ಮತ್ತು ಸ್ನೇಹಿತರಿಂದ ಅನಿರೀಕ್ಷಿತ ಉಡುಗೊರೆಗಳು. ಪ್ರೀತಿಯ ಶಕ್ತಿ ನಿಮಗೆ ಪ್ರೀತಿಸಲು ಒಂದು ಕಾರಣ ನೀಡುತ್ತದೆ. ಜಂಟಿ ಯೋಜನೆಗಳು ಮತ್ತು ಪಾಲುದಾರಿಕೆಗಳಿಂದ ದೂರವಿರಿ.

**ಕರ್ಕಾಟಕ**: ನಿಮ್ಮ ಅತಿಯಾದ ಜೀವನಶೈಲಿ ಮನೆಯಲ್ಲಿ ಆತಂಕ ಸೃಷ್ಟಿಸಬಹುದು ಆದ್ದರಿಂದ ತಡರಾತ್ರಿಯನ್ನು ಹಾಗೂ ಇತರರ ಮೇಲೆ ಬಹಳ ಖರ್ಚು ಮಾಡುವುದನ್ನು ತಪ್ಪಿಸಿ.

**ಸಿಂಹ**: ನಿಮ್ಮ ಅತ್ಯಂತ ಪ್ರೀತಿಯ ಕನಸು ನನಸಾಗುತ್ತದೆ. ಆದರೆ ತುಂಬಾ ಸಂತೋಷ ಸ್ವಲ್ಪ ಸಮಸ್ಯೆಗಳನ್ನು ಉಂಟುಮಾಡಬಹುದಾದ್ದರಿಂದ ನಿಮ್ಮ ಉತ್ಸಾಹವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ.

**ಕನ್ಯಾ**: ವಿಶೇಷವಾಗಿ ಬಿಕ್ಕಟ್ಟಿನ ಸಮಯದಲ್ಲಿ ನಿಮ್ಮ ತಾಳ್ಮೆ ಕಳೆದುಕೊಳ್ಳಬೇಡಿ. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ.

**ತುಲಾ**: ನಿಮ್ಮ ಮನದನ್ನೆಯ ವಿಚಿತ್ರ ನಡವಳಿಕೆ ಇಂದು ನಿಮ್ಮ ಪ್ರೇಮವನ್ನು ಘಾಸಿಗೊಳಿಸುತ್ತದೆ. ಹೆಚ್ಚಿನ ಕೆಲಸದ ಹೊರತಾಗಿಯೂ ಇಂದು ಕೆಲಸದ ಸ್ಥಳದಲ್ಲಿ ನಿಮ್ಮಲ್ಲಿ ಶಕ್ತಿಯನ್ನು ನೋಡಬಹುದು.

**ವೃಶ್ಚಿಕ**: ಸಂಗಾತಿಯ ಆರೋಗ್ಯಕ್ಕೆ ಸೂಕ್ತ ರಕ್ಷಣೆ , ಗಮನದ ಅಗತ್ಯವಿದೆ. ಹಣಕಾಸು ಸ್ಥಿತಿ ಅನಿರೀಕ್ಷಿತ ಲಾಭದ ಮೂಲಕ ಸುಧಾರಿಸುತ್ತವೆ. ನಿಮ್ಮ ಅತಿಯಾದ ಜೀವನಶೈಲಿ ಮನೆಯಲ್ಲಿ ಆತಂಕ ಸೃಷ್ಟಿಸಬಹುದು.

**ಧನಸ್ಸು**: ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ನೀವು ಹಣ ಉಳಿಸುವುದು ಕಷ್ಟ ನೀವು ಅತಿಯಾಗಿ ಖರ್ಚು ಮಾಡುವ ಅಥವಾ ನಿಮ್ಮ ಪರ್ಸ್ ಕಳೆದುಕೊಳ್ಳುವ ಸಾಧ್ಯತೆಗಳಿವೆ.

**ಮಕರ**: ನಿಮ್ಮ ಧೃಢತೆ ಮಾನಸಿಕ ಶಕ್ತಿ ವರ್ಧಿಸುವಲ್ಲಿ ಮಹತ್ತರ ಪಾತ್ರವಹಿಸುತ್ತವೆ. ಇದು ನಿಮಗೆ ಯಾವುದೇ ಪರಿಸ್ಥಿತಿಯನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ಉತ್ತೇಜಿಸುವುದರಿಂದ ಇದನ್ನು ಕಾಯ್ದುಕೊಳ್ಳಿ.

**ಕುಂಭ**: ಧ್ಯಾನ ಮತ್ತು ಆತ್ಮ ಸಾಕ್ಷಾತ್ಕಾರ ಪ್ರಯೋಜನಕಾರಿಯಾಗಬಹುದು. ಹಣಕಾಸು ಲಾಭಗಳು ವಿವಿಧ ಮೂಲಗಳಿಂದ ಬರುತ್ತದೆ. ಮಕ್ಕಳಿಂದ ಅನಿರೀಕ್ಷಿತ ಸುದ್ದಿ ಸಂತೋಷದ ಕ್ಷಣಗಳನ್ನು ತರುತ್ತದೆ.

**ಮೀನ**: ಭಾವನಾತ್ಮಕ ಭರವಸೆಗಳನ್ನು ಬಯಸುವವರು ಹಿರಿಯರು ಅವರ ನೆರವಿಗೆ ಬರುವುದನ್ನು ನೋಡಬಹುದು. ಪ್ರಣಯ ನಿಮ್ಮ ಹೃದಯ ಮತ್ತು ಮನಸ್ಸನ್ನು ಆಳುತ್ತದೆ.

### ಈ ತಿಂಗಳ ಕೊನೆಯ ಹಂತದಲ್ಲಿ ವಿದ್ಯುತ್ ಕಾಮಗಾರಿ ಸೇರಿದಂತೆ ಬಾಕಿ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು

# ಡಿಸೆಂಬರ್‌ಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ: ಶರಣ ಪ್ರಕಾಶ್ ಆರ್.ಪಾಟೀಲ

• ಉದಯವಾಹಿನಿ ಬಳ್ಳಾರಿ

ಡಿಸೆಂಬರ್ ತಿಂಗಳಲ್ಲಿ ಬಳ್ಳಾರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನೆಗೊಳಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುವುದು ಎಂದು ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಡಾ.ಶರಣ ಪ್ರಕಾಶ ಆರ್.ಪಾಟೀಲ ಭರವಸೆ ನೀಡಿದರು.

ನಗರದ ಸುಧಾಕ್ರಾಸ್ ಬಳಿಯ ಬಳ್ಳಾರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಭೇಟಿ ನೀಡಿ, ಬಾಕಿ ಕಾಮಗಾರಿಗಳ ಕುರಿತು ವೈದ್ಯಾಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಬಳಿಕ ಮಾತನಾಡಿದರು.

450 ಹಾಸಿಗೆಯುಳ್ಳ ಆಸ್ಪತ್ರೆಯು 2008 ರಲ್ಲಿ ಮಂಜೂರಾಗಿತ್ತು. ವಿವಿಧ ಕಾರಣಗಳಿಂದ ನನೆಗುದಿಗೆ ಬಿದ್ದಿದ್ದ ಆಸ್ಪತ್ರೆಯ ಕಾಮಗಾರಿ ಪೂರ್ಣಗೊಳಿಸಲು 2018ರಲ್ಲಿ ಮರು ಟೆಂಡರ್ ಕರೆಯಲಾಗಿತ್ತು. ಈಗ ನಮ್ಮ ಸರ್ಕಾರಾವಧಿಯಲ್ಲೇ ಪೂರ್ಣಗೊಳಿಸಿ ಡಿಸೆಂಬರ್ ತಿಂಗಳಲ್ಲಿ ಉದ್ಘಾಟನೆ ಮಾಡಲಾಗುತ್ತಿದೆ' ಎಂದು ಹೇಳಿದರು.

112.04 ಕೋಟಿಯ ಮೊದಲ ಹಂತ-1 ದ ಕಾಮಗಾರಿ ಶೇ.97 ರಷ್ಟು ಪೂರ್ಣಗೊಂಡಿದೆ. 24.38 ಕೋಟಿಯ ಎರಡನೇ ಹಂತದ ಕಾಮಗಾರಿಗಳೂ ಶೇ.96 ರಷ್ಟು ಮುಗಿದಿವೆ. ಈ ತಿಂಗಳ ಕೊನೆಯ ಹಂತದಲ್ಲಿ ವಿದ್ಯುತ್ ಕಾಮಗಾರಿ ಸೇರಿದಂತೆ ಬಾಕಿ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು' ಎಂದು ಸಭೆಯಲ್ಲಿ ಗುತ್ತಿಗೆದಾರರಿಗೆ ತಾಕೀತು ಮಾಡಿದರು.


ಉದಯವಾಹಿನಿ ಚಿತ್ರ

**ಕಾಮಗಾರಿಗಳ ಕುರಿತು ಚರ್ಚೆ**

ಕಾರ್ಡಿಯಾಲಜಿ, ಪ್ಲಾಸ್ಟಿಕ್ ಸರ್ಜರಿ, ಡಯಾಲಿಸಿಸ್ ಯಂತ್ರ, ಆರ್‌ಒ ಪ್ಲಾಂಟ್, ಬೆಡ್ ವ್ಯವಸ್ಥೆ ಹಾಗೂ ಇತರೆ ಸಾಮಾಗ್ರಿ ಅಳವಡಿಕೆ ಕಾರ್ಯ ಪೂರ್ಣಗೊಳಿಸಿ ಜನರಿಗೆ ಆರೋಗ್ಯ ಸೇವೆ ನೀಡಲು ಮುಂದಾಗಬೇಕು' ಎಂದು ಸಚಿವರು ನಿರ್ದೇಶನ ನೀಡಿದರು.

ನ್ಯೂರಾಲಜಿ ಸೇರಿದಂತೆ ಆಸ್ಪತ್ರೆಯಲ್ಲಿ ಖಾಲಿಯಿರುವ ವಿವಿಧ ವಿಭಾಗಗಳ ವೈದ್ಯರು ಮತ್ತು ಗ್ರೂಪ್-ಬಿ, ಸಿ ಹುದ್ದೆಗಳನ್ನು ಗುತ್ತಿಗೆ ಆಧಾರದಡಿ ಪಡೆಯಲು ಕೂಡಲೇ ಕ್ರಮವಹಿಸಬೇಕು' ಎಂದು ನಿರ್ದೇಶಕರಿಗೆ ಸೂಚನೆ ನೀಡಿದರು.

ಆಸ್ಪತ್ರೆಗೆ ಅನುದಾನದ ಕೊರತೆಯಾದಲ್ಲಿ ಡಿಎಂಎಫ್, ಕೆಎಂಇಆರ್‌ಸಿ ಹಾಗೂ ಸಿಎಸ್‌ಆರ್ ಅನುದಾನಕ್ಕಾಗಿ ಜಿಲ್ಲಾಧಿಕಾರಿ ಗಮನಕ್ಕೆ ತರಬೇಕು' ಎಂದೂ ಅವರು ಸೂಚಿಸಿದರು.

ಕಳೆದ 2 ತಿಂಗಳುಗಳಿಂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಹೊರರೋಗಿ ವಿಭಾಗ ಕಾರ್ಯನಿರ್ವಹಿಸುತ್ತಿದೆ.

ಇನ್ನೊಂದು ತಿಂಗಳಲ್ಲಿ ಒಳರೋಗಿ ವಿಭಾಗ ಆರಂಭಿಸಲಾಗುವುದು' ಎಂದು ಬಿಎಂಸಿಆರ್‌ಸಿ ನಿರ್ದೇಶಕ ಡಾ.ಗಂಗಾಧರ ಗೌಡ ಅವರು ಸಚಿವರ ಗಮನಕ್ಕೆ ತಂದರು. ಬಿಎಂಸಿಆರ್‌ಸಿ, ಟಿಬಿ ಆಸ್ಪತ್ರೆಗಳಲ್ಲಿ ಕೆಎಂಇಆರ್‌ಸಿ ಅನುದಾನದಲ್ಲಿ ಕೈಗೊಂಡ ವಿವಿಧ ಕಾಮಗಾರಿಗಳ ಕುರಿತು ಸುದೀರ್ಘ ಚರ್ಚೆ ನಡೆಸಿ ಮಾಹಿತಿ ಪಡೆದುಕೊಂಡರು.

**ಯಾರ ಪ್ರಭಾವವೂ ನಡೆಯುವುದಿಲ್ಲ**

**ಬಿಎಂಸಿ-ಆರ್‌ಸಿ ನಿರ್ದೇಶಕ ಗಂಗಾಧರ ಗೌಡ ಅವರ ವಿರುದ್ಧ ಹಲವು ಆರೋಪಗಳಿವೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು 'ಬಿಜೆಪಿಯ ಅಧಿಕಾರವಧಿಯ ಅಂತ್ಯದಲ್ಲಿ ನಿರ್ದೇಶಕರ ನೇಮಕಾತಿ ಆಗಿದೆ. ಅಮಾನತು ಮಾಡಲು ಪ್ರತ್ಯೇಕ ಪ್ರಕ್ರಿಯೆ ಇದೆ. ಹೀಗಾಗಿ ಇರುವವರಿಂದಲೇ ಕೆಲಸ ಮಾಡಿಸಬೇಕಾದ ಅನಿವಾರ್ಯತೆ ಇದೆ. ಯಾರೂ ನನ್ನ ಮೇಲೆ ಪ್ರಭಾವ ಬೀರುವ ಮಾತೇ ಇಲ್ಲ. ಹಾಗೇನಾದರೂ ಮಾಡಿದರೆ ವಜಾ ಮಾಡಲಾಗುವುದು' ಎಂದು ಸ್ಪಷ್ಟಪಡಿಸಿದರು.**

ಇದೇ ವೇಳೆ ಅಗತ್ಯ ಸಲಹೆ ಸೂಚನೆ ನೀಡಿದರು.

**26 ಎಕರೆ ಪ್ರದೇಶದಲ್ಲಿ ಕ್ಯಾನ್ಸರ್ ಆಸ್ಪತ್ರೆ :** ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಆವರಣದಲ್ಲಿ ಗುರುತಿಸಿದ 26 ಎಕರೆ ಪ್ರದೇಶದಲ್ಲಿ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣಕ್ಕೆ ಡಿಪಿಆರ್ ಸಿದ್ಧವಿದ್ದು, ಟೆಂಡರ್ ಕರೆದು ಕಾಮಗಾರಿ ಆರಂಭಿಸಲಾಗುವುದು ಎಂದು ಮಾಧ್ಯಮದವರಿಗೆ ತಿಳಿಸಿದರು. ಬಳಿಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

**ನಿರ್ದೇಶಕರಿಗೆ ತೀವ್ರ ತರಾಟೆ**

**ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆಯ ಕಾಮಗಾರಿಗಳು ಟೆಂಡರ್ ಕೆಲವು ಪ್ರಸ್ತಾವನೆಗಳ ಕುರಿತು ಸಚಿವರಿಗೆ ಮಾಹಿತಿ ನೀಡುವಲ್ಲಿ ಬಿಎಂಸಿ ಆರ್‌ಸಿ ನಿರ್ದೇಶಕ ಗಂಗಾಧರ ಗೌಡ ತಡಬಡಾಯಿಸಿದರು. ಇದರಿಂದ ಆಕ್ರೋಶಗೊಂಡ ಸಚಿವ ಶರಣಪ್ರಕಾಶ ಪಾಟೀಲ ಅಮಾನತು ಮಾಡುವುದಾಗಿ ಎಚ್ಚರಿಸಿದರು.**

ಈ ಸಂದರ್ಭದಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಮುಸೇನ್, ಬೆಂಗಳೂರು ವೈದ್ಯಕೀಯ ನಿರ್ದೇಶನಾಲಯದ ನಿರ್ದೇಶಕಿ ಸುಜಾತ ರಾಠೋಡ್, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ., ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೇರ್ ಸೇರಿದಂತೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥರು, ಪ್ರಾಂಶುಪಾಲರು, ವೈದ್ಯಾಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

## ಬೆಳೆಹಾನಿ ಪರಿಹಾರಕ್ಕೆ ಆಗ್ರಹಿಸಿ ರಸ್ತೆ ತಡೆ: ರೈತರಿಂದ ಸರ್ಕಾರದ ವಿರುದ್ಧ ಆಕ್ರೋಶ

• ಉದಯವಾಹಿನಿ ಮುದ್ದೇಬಿಹಾಳ

ನಿರಂತರ ಮಳೆಯಿಂದ ಹಾನಿಗೀಡಾದ ಬೆಳೆಗಳಿಗೆ ಕೂಡಲೇ ಸೂಕ್ತ ಪರಿಹಾರ ಬಿಡುಗಡೆ ಮಾಡುವಂತೆ ಆಗ್ರಹಿಸಿ ಬಿಜೆಪಿ ರೈತ ಮೋರ್ಚಾ ನೇತೃತ್ವದಲ್ಲಿ ಗುರುವಾರ ಹುಲ್ಲೂರ ಗ್ರಾಮದ ಬಳಿ ಆಲಮಟ್ಟಿ ಮುಖ್ಯ ರಸ್ತೆಯನ್ನು ತಡೆದು ನೂರಾರು ರೈತರು ಪ್ರತಿಭಟನೆ ನಡೆಸಿದರು.

ರೈತ ಮೋರ್ಚಾ ರಾಜ್ಯಾಧ್ಯಕ್ಷ ಎ.ಎಸ್.ಪಾಟೀಲ ನಡಹಳ್ಳಿ ಅವರ ನೇತೃತ್ವದಲ್ಲಿ ಸಾಯಿಬಾಬಾ ದೇವಸ್ಥಾನದಲ್ಲಿ ಸಭೆ ನಡೆಸಿದ ನಂತರ, ರೈತರು ಹಾನಿಗೀಡಾದ ತೊಗರಿ, ಮೆಕ್ಕೆಜೋಳ ಇನ್ನಿತರ ಬೆಳೆಗಳೊಂದಿಗೆ ಮುಖ್ಯ ರಸ್ತೆಗೆ ಇಳಿದರು. ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತ ರಸ್ತೆಯ ಮಧ್ಯೆ ಕುಳಿತು ಆಕ್ರೋಶ ವ್ಯಕ್ತಪಡಿಸಿದರು. ಕಾಂಗ್ರೆಸ್ ಸರ್ಕಾರ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ರೈತವಿರೋಧಿ ನೀತಿ ಅನುಸರಿಸುತ್ತಿದ್ದಾರೆ ಎಂದು ಘೋಷಣೆ ಕೂಗಿ ತಮ್ಮ ಆಕ್ರೋಶ ಹೊರಹಾಕಿದರು.

**ಪ್ರತಿಭಟನಾಕಾರರ ಪ್ರಮುಖ ಬೇಡಿಕೆಗಳು:**

ರೈತರು ಈ ಕುರಿತು ಮುದ್ದೇಬಿಹಾಳ ತಹಶೀಲ್ದಾರ್ ಕಚೇರಿಯ ಶಿರಸ್ತೆದಾರ ಎಂ.ಎ.ಬಾಗೇವಾಡಿ, ಹುಲ್ಲೂರು ಗ್ರಾಪಂ ಪಿಡಿಓ ಅರವಿಂದ ಲೋಣಾರಮಠ ಮತ್ತು ಗ್ರಾಮ ಆಡಳಿತಾಧಿಕಾರಿ ಮನೋಜ ರಾಠೋಡ ಅವರಿಗೆ ಮನವಿ ಪತ್ರ ಸಲ್ಲಿಸಿದರು.

**ಪ್ರಮುಖ ಬೇಡಿಕೆಗಳು ;** ಮೂರು ತಿಂಗಳ ನಿರಂತರ ಮಳೆಯಿಂದ ಜಿಲ್ಲೆಯಾದ್ಯಂತ ಹಾನಿಗೀಡಾದ 7.50 ಲಕ್ಷ ಹೆಕ್ಟೇರ್ ಪ್ರದೇಶದ ಬೆಳೆಹಾನಿಯ ನೈಜ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು.


ಉದಯವಾಹಿನಿ ಚಿತ್ರ

ಸಂಪೂರ್ಣ ಪ್ರದೇಶವನ್ನು ಪ್ರಕೃತಿ ವಿಕೋಪದಿಂದ ಆಗಿರುವ ಹಾನಿ ಎಂದು ಪರಿಗಣಿಸಬೇಕು.

ಪ್ರತಿ ಗ್ರಾಮ ಪಂಚಾಯತಿ, ರೈತ ಸಂಪರ್ಕ ಕೇಂದ್ರಗಳಲ್ಲಿ ಹಾನಿಯಾದ ರೈತರ ವಾಸ್ತವಿಕ ಪಟ್ಟಿಯನ್ನು ಲಗತ್ತಿಸಬೇಕು.

ಈ ಬೇಡಿಕೆಗಳನ್ನು ತಕ್ಷಣವೇ ಈಡೇರಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಪ್ರತಿಭಟನೆಗೆ ಇಳಿಯಬೇಕಾಗುತ್ತದೆ ಎಂದು ರೈತ ಮೋರ್ಚಾ ರಾಜ್ಯಾಧ್ಯಕ್ಷ ಎ.ಎಸ್.ಪಾಟೀಲ ನಡಹಳ್ಳಿ ಎಚ್ಚರಿಕೆ ನೀಡಿದರು. ರೈತ ಮೋರ್ಚಾ ಜಿಲ್ಲಾ ಪದಾಧಿಕಾರಿ ಶಂಕರಗೌಡ ಶಿವಣಗಿ, ತಾಲೂಕಾಧ್ಯಕ್ಷ ಸಂಗಮೇಶ ಹತ್ತಿ, ಬಿಜೆಪಿ ಮುದ್ದೇಬಿಹಾಳ ಮಂಡಲ ಅಧ್ಯಕ್ಷ ಜಗದೀಶ ಪಂಪಣ್ಣವರ್, ಕಾರ್ಯದರ್ಶಿ ಗಿರೀಶಗೌಡ ಪಾಟೀಲ ಹಿರೇಮುರಾಳ ಪ್ರೇಮಸಿಂಗ್ ರಾಠೋಡ,ಅಶೋಕ ರಾಠೋಡ, ಚನಬಸ್ಸು ಚನ್ನಿಗಾವಿ ಶೆಟ್ರು, ನಾಗೇಶ ಕವಡಿಮಟ್ಟಿ, ದಯಾನಂದ ಹಲ್ಯಾವಟಗಿ, ಭೀಮಮಗೌಡ ಕೂಡಗಾನೂರ ,ವೈ ಟಿ ಗೌಡರ, ಬೀಮರಾವ ಹುಲ್ಲೂರ, ಸುಭಾಷ ಕಟ್ಟಿಮನಿ, ಎ ಎಸ್ ದನ್ನೂರ, ಎಸ್ ಎಂ ಅಂಗಡಿ, ಬಸನಗೌಡ ಬಿರಾದಾರ, ಡಿ ಎಸ್ ಬಿರಾದಾರ, ವಿನೋದ ಓಲೇಕಾರ, ಮುತ್ತು ಕೂಡಗಾನೂರ, ಸೇರಿದಂತೆ ಹುಲ್ಲೂರು, ಕಾಳಗಿ, ಕಂದಗನೂರ, ಚಿಚರ್ಚನಕಲ್ ಸೇರಿದಂತೆ ವಿವಿಧ ಗ್ರಾಮಗಳ ನೂರಾರು ರೈತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

**ಕಾಟಾಚಾರದ ಸಮೀಕ್ಷೆಗೆ ಆಕ್ಷೇಪ**

**ಸಮಸ್ಯೆಯ ಗಂಭೀರತೆಗಿಂತ ಹೆಚ್ಚಾಗಿ, ಪ್ರತಿಭಟನಾ ನಿರತ ರೈತರು ಬೆಳೆ ಸಮೀಕ್ಷಾ ತಂಡ ಮತ್ತು ಅಧಿಕಾರಿಗಳ ವಿರುದ್ಧ ಹರಿಹಾಯ್ದರು. ನೈಜ ಸಮೀಕ್ಷೆ ನಡೆಸದೆ ಎಲ್ಲೋ ಕುಳಿತು ಕಾಟಾಚಾರಕ್ಕೆ ಸಮೀಕ್ಷೆ ನಡೆಸಿ ವರದಿ ಸಲ್ಲಿಸಲಾಗಿದೆ ಎಂದು ಆರೋಪಿಸಿದರು. ಹಲಗೆ ಬಾರಿಸುತ್ತ ರಸ್ತೆ ಮಧ್ಯೆ ಕುಳಿತ ಪ್ರತಿಭಟಿಸಿದರು .**

## ಅ.25 ಹಾಗೂ 26 ರಂದು ಕಲಾಪ್ರತಿಭೋತ್ಸವ

• ಉದಯವಾಹಿನಿ ಚಿತ್ರದುರ್ಗ

ಮಕ್ಕಳು ಹಾಗೂ ಯುವಜನರ ಕಲಾ ಪ್ರತಿಭೆಯನ್ನು ಗುರುತಿಸಿ ಉತ್ತೇಜನ ನೀಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಲಾಪ್ರತಿಭೋತ್ಸವ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಅ.18 ಹಾಗೂ 19 ರಂದು ನಡೆಯಬೇಕಿದ್ದ ಕಲಾಪ್ರತಿಭೋತ್ಸವನ್ನು ಮುಂದೂಡಿ ಅ.25 ಹಾಗೂ 26 ರಂದು ಆಯೋಜಿಸಲು ನಿರ್ಧರಿಸಲಾಗಿದೆ.

ಆಸಕ್ತರು ಅ.18ರವರೆಗೆ ತಮ್ಮ ಸ್ವವಿವರಗಳ ಅರ್ಜಿಯನ್ನು ತ.ರಾ.ಸು ರಂಗಮಂದಿರ ಹಿಂಭಾಗದಲ್ಲಿ ಕಚೇರಿ ಸಲ್ಲಿಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08194-224496 ಕರೆ ಮಾಡುವಂತೆ ಸಹಾಯಕ ನಿರ್ದೇಶಕ ಡಾ.ಬಿ.ಎಂ.ಗುರುನಾಥ್ ತಿಳಿಸಿದ್ದಾರೆ.

## ದಿನೇಶ್ ಗುಂಡೂರಾವ್ ಪ್ರವಾಸ ಕಾರ್ಯಕ್ರಮ

• ಉದಯವಾಹಿನಿ ಚಿತ್ರದುರ್ಗ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅವರು ಅ. 17 ರಂದು ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಸಚಿವರು ಅಂದು ಬೆಳಿಗ್ಗೆ ಬೆಂಗಳೂರಿನಿಂದ ಹೊರಟು, ಮೊಳಕಾಲ್ಮೂರು ತಾಲ್ಲೂಕು ಹಾನಗಲ್‌ಗೆ ಆಗಮಿಸಿ, ಇಲ್ಲಿನ ನಿರೀಕ್ಷಣ ಮಂದಿರಕ್ಕೆ ತೆರಳುವರು. ಬಳಿಕ ಮೊಳಕಾಲ್ಮೂರಿಗೆ ತೆರಳಿ, ತಾಲ್ಲೂಕು ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸುವರು. ನಂತರ ಇಲ್ಲಿನ ಪಕ್ಷದ ಕಚೇರಿಗೆ ಭೇಟಿ ನೀಡಿ, ಬೆಳಿಗ್ಗೆ 11.30 ಗಂಟೆಗೆ ಚಿತ್ರದುರ್ಗ ಮಾರ್ಗವಾಗಿ ಬೆಂಗಳೂರಿಗೆ ಹಿಂದಿರುಗುವರು ಎಂದು ಸಚಿವರ ಆಪ್ತ ಕಾರ್ಯದರ್ಶಿ ತಿಳಿಸಿದ್ದಾರೆ.

## ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಅಪರಾಧಿಗೆ ಜೀವಾವಧಿ ಶಿಕ್ಷೆ

• ಉದಯವಾಹಿನಿ ಕಲಬುರಗಿ

ತಾಯಿಯನ್ನು ಕೊಲೆಗೈದು ಅವಳ ಅಪ್ರಾಪ್ತ ವಯಸ್ಸಿನ ಮಗಳನ್ನು ಅಪಹರಿಸಿ ಲೈಂಗಿಂಕ ದೌರ್ಜನ್ಯ ಎಸಗಿದ ಆರೋಪಿಗೆ ಜೀವಾವಧಿ ಶಿಕ್ಷೆ ವಿಧಿಸಿ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತೀರ್ಪು ನೀಡಿದೆ.

ಮಿಲ್ಲತ್ ನಗರದ ಅಜಾದಪುರ ರಸ್ತೆಯ ಶಫಿಶೇಖ್ ಡಿ.ಕೆ. (22) ಶಿಕ್ಷೆಗೆ ಒಳಗಾದವ. 2024 ಮಾ.15 ರಂದು ನಗರದ ಸಬ್ ಅರ್ಬನ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಕೊಲೆ, ಪೋಕ್ಸೊ ಪ್ರಕರಣದ ಕುರಿತು ಪಿಐ ಮಹ್ಮದ್ ಫಸಿಯೋದ್ದೀನ್ ಅವರು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣೆ ಪತ್ರ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಮಹ್ಮದ್ ಮುಜೀರ್ ಉಲ್ಲಾ ಅಪರಾಧಿಗೆ ಜೀವಾವಧಿ ಶಿಕ್ಷೆ, 20 ವರ್ಷ ಜೈಲು ಮತ್ತು 3.50 ಲಕ್ಷ ದಂಡ ವಿಧಿಸಿ ಆದೇಶ ನೀಡಿದ್ದಾರೆ. ಅಲ್ಲದೆ ನೊಂದ ಬಾಲಕಿಗೆ 5 ಲಕ್ಷ ರೂ.ಪರಿಹಾರ ನೀಡುವಂತೆ ಆದೇಶದಲ್ಲಿ ತಿಳಿಸಿದ್ದಾರೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಶಾಂತವೀರ ಬಿ.ತುಪ್ಪದ ವಾದ ಮಂಡಿಸಿದ್ದರು.

## ಮಠಾಧಿಪತಿಗಳನ್ನು ನಿಂದಿಸಿದ ಕನೇರಿ ಶ್ರೀಗಳ ಅವಾಚ್ಯ ಶಬ್ಧಗಳ ವಿರುದ್ಧ ಸರ್ಕಾರಕ್ಕೆ ಮನವಿ

• ಉದಯವಾಹಿನಿ ಬಸವನಬಾಗೇವಾಡಿ

ಕನೇರಿ ಮಠದ ಸ್ವಾಮೀಜಿ ಮಠಾಧಿಪತಿಗಳು ಹಾಗೂ ಬಸವ ಸಂಸ್ಕೃತಿ ಅಭಿಯಾನದ ಕುರಿತು ಅವಹೇಳನಕಾರಿಯಾಗಿ ನಿಂದಿಸಿದ್ದನ್ನು ಖಂಡಿಸಿ ಪಟ್ಟಣದಲ್ಲಿ ಬೆಳಿಗ್ಗೆ ಬಸವಾಭಿಮಾನಿಗಳು ಸೇರಿ ಬಸವ ಜನ್ಮಸ್ಮಾರಕದಿಂದ ಪ್ರತಿಕೃತಿಯನ್ನು ಹಲಗಿ ಮೆರವಣಿಗೆ ಮೂಲಕ ಬಸವ ವೃತ್ತದಲ್ಲಿ ಪ್ರತಿಕೃತಿ ದಹಿಸಿ ಚಪ್ಪಲಿ ಏಟು ನೀಡುವುದರ ಮೂಲಕ ಸಿಎಂ ಅವರಿಗೆ ಮನವಿ ಸಲ್ಲಿಸಿದರು.

ಬಹಿರಂಗ ಬೃಹತ್ ಪ್ರತಿಭಟನೆಯಲ್ಲಿ ಸ್ಥಳೀಯ ಸಿದ್ದಲಿಂಗ ಶ್ರೀಗಳು, ಮಸಬಿನಾಳದ ಸಿದ್ದರಾಮ ಸ್ವಾಮೀಜಿ ಹಾಗೂ ಯಲ್ಲಾಲಿಂಗ ಪೂಜ್ಯರು ಸೇರಿದಂತೆ ಸಂಗನಗೌಡ ಚಿಕ್ಕೊಂಡ, ವೀರಣ್ಣ.ಬ ಮರ್ತುರ, ವಿವೇಕಾನಂದ ಕೆ ಕಲ್ಯಾಣಶೆಟ್ಟಿ, ಶಂಕರಗೌಡ ಬಿರಾದಾರ,


ಉದಯವಾಹಿನಿ ಚಿತ್ರ

ಲ.ರು ಗೊಳಸಂಗಿ , ಶ್ರೀಕಾಂತ ಕೊಟ್ರಶೆಟ್ಟಿ , ಸಂಗಮೇಶ ಓಲೇಕಾರ ಸೇರಿದಂತೆ ಅನೇಕರು ಕನೇರಿ ಶ್ರೀಗಳು ಅಸಂವಿಧಾನಿಕ ಶಬ್ದಗಳನ್ನು ಬಳಸಿ ಅತ್ಯಂತ ಹೇಯವಾಗಿ ನಿಂದಿಸಿದ್ದು ಇಡೀ ಬಸವಾಭಿಮಾನಿಗಳಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಶ್ರೀಗಳನ್ನು ಪಟ್ಟಣಕ್ಕೆ ಪ್ರವೇಶ ಮಾಡದಂತೆ ಸರ್ಕಾರ ಸೂಕ್ತ ಎಚ್ಚರ ವಹಿಸುವಂತೆ, ಪಟ್ಟಣಕ್ಕೆ ಬಂದು ಕ್ಷಮೆ ಕೋರುವುದು ಹಾಗೂ ಅವರ ಮೇಲೆ ಸರ್ಕಾರ ಸೂಕ್ತ ಕ್ರಮ ಜರುಗಿಸಬೇಕು ಎಂದು ಖಂಡಿಸಿದರು.

## ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಜವಳಗೇರಾ ಗ್ರಾಮಕ್ಕೆ ಭೇಟಿ

### ಕೃಷಿ ಸಂಸ್ಕರಣೆಗಾಗಿ ರೈತರ ತರಬೇತಿ, ಸಾಮಾನ್ಯ ಸೌಲಭ್ಯ ಕೇಂದ್ರ ಲೋಕಾರ್ಪಣೆ

• ಉದಯವಾಹಿನಿ ಸಿಂಧನೂರು

ತಾಲ್ಲೂಕಿನ ಜವಳಗೇರಾ ಗ್ರಾಮದಲ್ಲಿ ಕೃಷಿ ಸಂಸ್ಕರಣೆಗಾಗಿ ರೈತರ ತರಬೇತಿ ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರ ಲೋಕಾರ್ಪಣೆ ಸಮಾರಂಭ ಗುರುವಾರ ರಂದು ನಡೆಯಿತು. ಪೂರ್ವನಿಗದಿಯಂತೆ ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಬೆಳಗ್ಗೆ 11.35ರ ವೇಳೆಗೆ ಸಿಂಧನೂರ ಮಾರ್ಗವಾಗಿ ಜವಳಗೇರಾ ಗ್ರಾಮಕ್ಕೆ ಆಗಮಿಸುತ್ತಿದ್ದಂತೆ ದೇಶಿ ಶೈಲಿಯ ಮಹಿಳಾ ಡೊಳ್ಳಿನ ತಂಡದವರಿಂದ ಹಾಗೂ ಪುಷ್ಪಾರ್ಪಣೆಯ ಮೂಲಕ ಆತ್ಮೀಯವಾಗಿ ಸ್ವಾಗತಿಸಲಾಯಿತು.

ಮೊದಲಿಗೆ ಸಚಿವರು, ಅಂದಾಜು 2.54 ಕೋಟಿ ರೂ ವೆಚ್ಚದಲ್ಲಿ, ಸಂಸದರ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆಯಡಿ ನಬಾರ್ಡ ಸಂಯುಕ್ತವಾಗಿ ರೂಪಿಸಿರುವ ಕೃಷಿ ಸಂಸ್ಕರಣೆಗಾಗಿ ರೈತರ ತರಬೇತಿ ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರವಾದ ಕಲ್ಯಾಣ ಸಂಪದ ಕೇಂದ್ರವನ್ನು ರಿಬ್ಬನ್ ಕತ್ತರಿಸಿ ಲೋಕಾರ್ಪಣೆ ಮಾಡಿದರು.



ಉದಯವಾಹಿನಿ ಚಿತ್ರ

**ಪುಷ್ಪಾರ್ಪಣೆಯ ಮೂಲಕ ಸ್ವಾಗತ**

ಇದೆ ವೇಳೆ ಸಚಿವರು, ಕಲ್ಯಾಣ ಸಂಪದ ಕಟ್ಟಡದಲ್ಲಿನ ಕಂಪನ ಜರಡಿ ಯಂತ್ರ, ಜಿಲ್ಲಾ ಮಿಶ್ರಣ ಸಂಗ್ರಹಗಾರ, ಜಿಲ್ಲಾ ಮಿಶ್ರಣ ಯಂತ್ರ, ಶುದ್ಧೀಕರಣ ಮತ್ತು ಗ್ರೈಂಡಿಂಗ್ ಯಂತ್ರ, ಬಣ್ಣ ಆಧಾರಿತ ಬೇರ್ಪಡಿಸುವ ಯಂತ್ರ, ಬೇಳೆ ಪ್ಯಾಂಕಿಂಗ್ ಯಂತ್ರ, ತಯಾರಾದ ವಸ್ತುಗಳ ಸಂಗ್ರಹಗಾರದ ವೀಕ್ಷಣೆ ನಡೆಸಿದರು. ಬಳಿಕ ವೇದಿಕೆಯ ಕಾರ್ಯಕ್ರಮ ನಡೆಯಿತು. ಈ ವೇಳೆ ಭಾರತ ಸರ್ಕಾರದ ಹಣಕಾಸು ಸಚಿವಾಲಯದ ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ ಎಂ ನಾಗರಾಜ್, ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ನಬಾರ್ಡ ಅಧ್ಯಕ್ಷರಾದ ಶಾಜಿ ಕೆ.ವಿ., ಜಿಲ್ಲಾಧಿಕಾರಿ ನಿತೀಶ್ ಕೆ., ಜಿಪಂ ಸಿಇಓ ಈಶ್ವರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ ಎಂ., ಮಾಜಿ ಶಾಸಕ ವೆಂಕಟರಾವ್ ನಾಡಗೌಡ, ಮಾಜಿ ಸಂಸದ ಕೆ.ವಿರುಪಾಕ್ಷಪ್ಪ, ಜವಳಗೇರಾ ಗ್ರಾಪಂ ಅಧ್ಯಕ್ಷರಾದ ನಾಗಲಿಂಗ ಯಮನೂರಪ್ಪ ಇದ್ದರು.

## ಕಲರ್ ಜೆರಾಕ್ಸ್ ನೋಟು ಚಲಾವಣೆ, ಮೂವರ ಬಂಧನ

• ಉದಯವಾಹಿನಿ, ಚಿಂಚೋಳಿ

ಪಟ್ಟಣದ ಚಂದಾಪೂರದ ಸೌದಾಗಾರ ಡೈಗ್ನೋಸ್ಟಿಕ್‌ನಲ್ಲಿ 100ರೂ.200ರೂ. ನೋಟುಗಳು ಝರಾಕ್ಸ್ ಮಾಡಿ ಕತ್ತಲಿನಲ್ಲಿ ಚಲಾವಣೆ ಮಾಡಿ ಮೋಸ ಮಾಡುತ್ತಿರುವ ಮೂವರನ್ನು ಬಂಧಿಸಿ ವಿಚಾರಣೆ ನಡೆಸಿ ನ್ಯಾಯಾಲಯ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಸಿಪಿಐ ಕಪಿಲದೇವ ತಿಳಿಸಿದ್ದಾರೆ. ಚಂದಾಪೂರ ಸೌದಾಗಾರ ಡೈಗ್ನೋಸ್ಟಿಕ್ ದಲ್ಲಿ ಕಲರ್ ಝರಾಕ್ಸ್ ಮಾಡಿ ನೋಟುಗಳು ಚಲಾವಣೆ ಮಾಡುವ ಪಟ್ಟಣದ ಮೂವರನ್ನು ವಿಚಾರಿಸಿ ಕಲರ್ ಝರಾಕ್ಸ್ ಮಷೀನ್, ಕಾಗದಗಳು ವಶಕ್ಕೆ ಪಡೆಯಲಾಗಿದೆ. ತಾಲ್ಲೂಕಿನ ಚಿಮ್ಮಾಯಿದ್ಲಾಯಿ ಗ್ರಾಮದ ಹೋಟಲ್ ಒಂದರಲ್ಲಿ ನೋಟು ನೀಡಿದಾಗ ಹೋಟೆಲ್ ಮಾಲಿಕನಿಗೆ ಅನುಮಾನ ಬಂದಕ್ಷಣ ಪೋಲಿಸರಿಗೆ ದೂರು ನೀಡಿದ ಹಿನ್ನಲೆಯಲ್ಲಿ ಅವರನ್ನು ವಿಚಾರಣೆ ನಡೆಸಿ, ಸೌದಾಗಾರ ಲ್ಯಾಬ್ ನಲ್ಲಿ ನೋಟುಗಳನ್ನು ಝರಾಕ್ಸ್ ಮಾಡಿದ ಸ್ಥಳ ಪರಿಶೀಲಿಸಿ ಕಾಗದಗಳು, ಮಷೀನ್ ವಶಕ್ಕೆ ಪಡೆದು ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಈ ಕುರಿತು ಚಿಂಚೋಳಿ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಸಿಪಿಐ ಕಪಿಲದೇವ ತಿಳಿಸಿದ್ದಾರೆ.

## ಅದಿರು ನಾಪತ್ತೆ: ಇಡಿ ದಾಳಿ

• ಉದಯವಾಹಿನಿ, ಬಳ್ಳಾರಿ

ಅದಿರು ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿ ಬಳ್ಳಾರಿ , ಹೊಸಪೇಟೆಯಲ್ಲಿ ಇಡಿ ಅಧಿಕಾರಿಗಳ ತಂಡ ದಾಳಿ ನಡೆಸಿದೆ. ನಗರದ ಉದ್ಯಮಿ ಕೆ.ನಾಗರಾಜ ಅವರ ಮನೆಯ ಮೇಲೆ ಇಂದು ಹತ್ತು ಮಂದಿ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ನಗರದ ತಾಳೂರು ರಸ್ತೆಯಲ್ಲಿನ ರೇವಣ ಸಿದ್ದೇಶ್ವರ. ಅಪಾರ್ಟ್ ಮೆಂಟ್ ನಲ್ಲಿ ವಾಸವಾಗಿರುವ ನಾಗರಾಜ್ ಅವರ ಮನೆಗೆ ಬೆಳ್ಳಂ ಬೆಳಿಗ್ಗೆ ಇಡಿ ಅಧಿಕಾರಿಗಳು ಆಗಮಿಸಿ ದಾಖಲೆಗಳ ಪರಿಶೀಲನೆ ನಡೆಸಿದ್ದಾರೆ. ನಾಗರಾಜ್ ಅವರು ಊರಲ್ಲಿ ಇಲ್ಲ, ನ್ಯಾಯಾಲಯದ ಪ್ರಕರಣದ ವಿಚಾರಣೆಗೆ ಬೆಂಗಳೂರಿಗೆ ತೆರಳಿದ್ದಾರೆ. ಇವರು ಈ ಹಿಂದೆ ಬೇಲಿಕೇರಿ ಬಂದರು ಅದಿರು ನಾಪತ್ತೆ ಪ್ರಕರಣದಲ್ಲಿ ಸಿಬಿಐ ನಿಂದ ಬಂಧಿತರಾಗಿ ಜಾಮೀನಿನ ಮೇಲೆ ಹೊರಗೆ ಇದ್ದಾರೆ. ಇವರು ಮಾಜಿ ಸಚಿವ ಬಿ.ನಾಗೇಂದ್ರ ಅವರ ಆಪ್ತರು. ಅದೇ ರೀತಿ ಹೊಸಪೇಟೆಯ ಗಣಿ ಉದ್ಯಮಿ ಹೊಸಪೇಟೆಯ ಬಸವೇಶ್ವರ ಬಡಾವಣೆಯಲ್ಲಿರೋ ಶ್ರೀನಿವಾಸರೆಡ್ಡಿ ಮನೆಯ ಮೇಲೂ ದಾಳಿ ನಡೆದಿದೆ.

## ಪ್ರತಿಮನೆಯಲ್ಲೂ ದೇಶಿ ಉತ್ಪನ್ನ ಬಳಸಲು ಸತೀಶ್ ಕರೆ

• ಉದಯವಾಹಿನಿ ಬಳ್ಳಾರಿ

ಪ್ರತಿ ಮನೆಯೂ ಸ್ವದೇಶಿ ವಸ್ತುಗಳ ಬಳಕೆ ಆಗಬೇಕು ಈ ನಿಟ್ಟಿನಲ್ಲಿ ಆತ್ಮ ನಿರ್ಭರ ಭಾರತ ಸಂಕಲ್ಪದ ಅಂಗವಾಗಿ ಸ್ವದೇಶಿ ಉತ್ಪನ್ನಗಳನ್ನು ಬಳಸಿ ಎಂಬ ಅಭಿಯಾನವನ್ನು ಸೆ. 25 ರಿಂದ ಡಿ. 25 ರವರೆಗೆ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ವೈ. ಎಂ. ಸತೀಶ್ ಹೇಳಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ. ಈಗಾಗಲೇ ಜಿಲ್ಲಾದ್ಯಂತ ಬಿಜೆಪಿ ಕಾರ್ಯಕರ್ತರು ಕಳೆದ ಒಂದು ತಿಂಗಳಿಂದ ಮನೆ ಮನೆಗೆ ಹೋಗಿ ಆತ್ಮ ನಿರ್ಭರ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ.

ಈ ಅಭಿಯಾನವು ಸೆ. 25 ರಂದು ( ಪಂಡಿತ ದೀನದಯಾಳ್ ಉಪಾಧ್ಯಾಯರ ಜನ್ಮದಿನ ) ಉದ್ಘಾಟನೆಯಾಗಿದ್ದು, ಡಿ.25 ರಂದು ( ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನ ) ಸಮಾರೋಪಗೊಳ್ಳಲಿದೆ ಎಂದು ಹೇಳಿದರು.

ಈ ಅಭಿಯಾನವು ಸಾಮಾನ್ಯ ನಾಗರಿಕರ ಪಾಲ್ಗೊಳ್ಳುವಿಕೆ ಬಗ್ಗೆ ಜನಜಾಗೃತಿ ಮೂಡಿಸಿ, ಪ್ರತಿಯೊಬ್ಬ ಭಾರತೀಯನಿಗೂ ಆತ್ಮನಿರ್ಭರ ಭಾರತ ಸಂದೇಶ ತಲುಪಿಸಲಿದೆ. ಆದ್ದರಿಂದ, ಬಳ್ಳಾರಿಯಲ್ಲಿ ಅ.25 ರಿಂದ ಮನೆ ಮನೆಗೆ ಸ್ಟಿಕರ್ ಅಂಟಿಸಲಾಗುವುದು. ಗೋಡೆ ಬರಹ ಹಾಗೂ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ಪ್ರಬಂಧ, ಕ್ವಿಜ್ ಹಾಗೂ ಪ್ರಮುಖರ ಮೂಲಕ ಭಾಷಣ, ಸಹಿ ಸಂಗ್ರಹ ಅಭಿಯಾನ, ಬೀದಿ ನಾಟಕ, ಬ್ಯಾನರ್ ಹಾಗೂ ಹೋರ್ಡಿಂಗ್ಸ್ ಮುಖಾಂತರ ಪ್ರಚಾರ ಆಯೋಜಿಸಲಾಗುವುದು.



ಉದಯವಾಹಿನಿ ಚಿತ್ರ

ಅಲ್ಲದೆ ವಿಶೇಷವಾಗಿ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಸ್ವದೇಶಿ ವಸ್ತುಗಳನ್ನು ಕೊಳ್ಳುವಂತಹ ಜಾಗೃತಿ ಅಭಿಯಾನ ನಡೆಸಲಿದ್ದೇವೆ. ತಾಲ್ಲೂಕು ಹಾಗೂ ನಗರಗಳಲ್ಲಿ ನಡೆಸಲಾಗುವುದು ಎಂದರು. ಜಿಲ್ಲಾಧ್ಯಕ್ಷ ಅನಿಲ ಕುಮಾರ್ ಮೋಕಾ, ಮುಖಂಡರಾದ ಎಸ್. ಗುರುಲಿಂಗನಗೌಡ, ಡಾ.ಬಿ.ಕೆ.ಸುಂದರ್, ಹೆಚ್. ಹನುಮಂತಪ್ಪ, ಕೆ.ಎಸ್.ದಿವಾಕರ್ , ತಿಮ್ಮಾರೆಡ್ಡಿ ಮೊದಲಾದವರು ಇದ್ದರು.

# ಮಾಗಿದ ಪೈರು: ಮಳೆ ಆತಂಕದಲ್ಲಿ ರೈತರು

### • ಜಿಲ್ಲೆಯಲ್ಲಿ ಭತ್ತದ ಕಟಾವಿಗೆ ಸಿದ್ಧತೆ: ಬಂದಿವೆ ಹೊರ ಜಿಲ್ಲೆಗಳ ಕಟಾವು ಯಂತ್ರಗಳು

• ಉದಯವಾಹಿನಿ ಉಡುಪಿ

ಜಿಲ್ಲೆಯಾದ್ಯಂತ ರೈತರು ಭತ್ತದ ಕೊಯ್ಲಿಗೆ ಸಿದ್ಧತೆ ನಡೆಸಿದ್ದು, ಸಣ್ಣ ಪ್ರಮಾಣದಲ್ಲಿ ಮಳೆ ಬರುತ್ತಿರುವುದು ರೈತರಲ್ಲಿ ಆತಂಕ ಉಂಟು ಮಾಡಿದೆ. ತಮಿಳುನಾಡು, ಶಿವಮೊಗ್ಗ, ದಾವಣಗೆರೆ, ಗಂಗಾವತಿ ಮೊದಲಾದೆಡೆಗಳಿಂದ ಭತ್ತದ ಕಟಾವು ಮಾಡುವ ಯಂತ್ರಗಳು ಜಿಲ್ಲೆಗೆ ತಲುಪಿದ್ದು, ಕೆಲವೆಡೆ ಕೊಯ್ದು ಕಾರ್ಯ ಈಗಾಗಲೇ ಆರಂಭವಾಗಿದೆ.

ಕೃಷಿ ಕಾರ್ಮಿಕರ ಕೊರತೆಯಿಂದಾಗಿ ಜಿಲ್ಲೆಯಲ್ಲಿ ಹಲವು ವರ್ಷಗಳಿಂದ ಭತ್ತದ ಕೊಯ್ಲಿಗೆ ರೈತರು ಯಂತ್ರಗಳ ಮೊರೆ ಹೋಗುತ್ತಿದ್ದಾರೆ. ಸಾಂಪ್ರದಾಯಿಕ ರೀತಿಯಲ್ಲಿ ಭತ್ತ ನಾಟಿ ಮಾಡಿರುವ ರೈತರು ಈ ಬಾರಿ ಒಡಿಶಾ ಮೊದಲಾದ ಹೊರ ರಾಜ್ಯಗಳ ಕಾರ್ಮಿಕರನ್ನು ಕಟಾವು ಕೆಲಸಕ್ಕೆ ಬಳಸಿಕೊಳ್ಳುತ್ತಿದ್ದಾರೆ.

ಮಲ್ಪೆ ಮೊದಲಾದೆಡೆ ಫಿಶ್‌ಮಿಲ್‌ಗಳಲ್ಲಿ ಕೆಲಸಕ್ಕೆ ಬರುವ ಒಡಿಶಾ ಸೇರಿದಂತೆ ಉತ್ತರ ಭಾರತದ ಕಾರ್ಮಿಕರಿಗೆ ಕೆಲಸದೊತ್ತಡವಿಲ್ಲದ ಸಮಯದಲ್ಲಿ ಭತ್ತ ಕಟಾವು ಕೆಲಸಕ್ಕೆ ಬಳಸಿಕೊಳ್ಳುತ್ತಿದ್ದೇವೆ. ಕಟಾವು ಕಾರ್ಯದಲ್ಲಿ ಅವರು ನಿಪುಣರಲ್ಲದಿದ್ದರೂ ತೆನೆಗಳನ್ನು ಹೊತ್ತು ಮನೆಗೆ ಸಾಗಿಸುವ ಕೆಲಸವನ್ನು ಅವರು ಅಚ್ಚುಕಟ್ಟಾಗಿ ಮಾಡುತ್ತಿದ್ದಾರೆ ಎಂದು ರೈತರು ತಿಳಿಸಿದ್ದಾರೆ.

'ಕೊಯ್ಲಿನ ಸಂದರ್ಭದಲ್ಲಿ ಸಣ್ಣ ಮಳೆ ಬಂದರೂ ಭತ್ತದ ಗುಣಮಟ್ಟದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಜೋರಾಗಿ ಮಳೆ ಬಂದು ಗದ್ದೆಗಳಲ್ಲಿ ನೀರು ತುಂಬಿದರೆ ಪೈರುಗಳು ಮೊಳಕೆ ಬರುವ ಸಾಧ್ಯತೆ ಇರುತ್ತದೆ. ಕೊಯ್ಲಿನ ಸಂದರ್ಭದಲ್ಲಿ ಭತ್ತದ ಗದ್ದೆಯೂ ಒಣಗಿದ್ದರೆ ಉತ್ತಮವಾಗಿರುತ್ತದೆ' ಎಂದು ಪರ್ಕಳದ ಭತ್ತದ ಬೆಳೆಗಾರ ಸುರೇಶ್ ನಾಯಕ್ ತಿಳಿಸಿದರು.


ಉದಯವಾಹಿನಿ ಚಿತ್ರ

**ಭತ್ತದ ಗುಣಮಟ್ಟದ ಮೇಲೆ ಪರಿಣಾಮ**

ಇನ್ನು ಹದಿನೈದು ದಿನಗಳೊಳಗೆ ಎಲ್ಲಾ ಕಡೆ ಕೊಯ್ದು ಆರಂಭವಾಗಬಹುದು ಈ ಅವಧಿ ನಿರ್ಣಾಯಕವಾಗಿದ್ದು, ಜೋರು ಮಳೆಯಾದರೆ ರೈತರಿಗೆ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಬಹುದು. ಈ ವರ್ಷ ಭತ್ತದ ಕಟಾವು ಯಂತ್ರದ ಬಾಡಿಗೆ ಇದುವರೆಗೆ ಏರಿಕೆಯಾಗಿಲ್ಲ. ಗಂಟೆಗೆ 2,400 ರಿಂದ 2,500 ಪಡೆಯುತ್ತಿದ್ದಾರೆ' ಎಂದು ಅವರು ಹೇಳಿದರು. ಕಳೆದ ವರ್ಷ ಪದೇ ಪದೇ ನೆರೆ ಹಾವಳಿ ಕಾಣಿಸಿಕೊಂಡಿದ್ದ ಪರಿಣಾಮವಾಗಿ ಜಿಲ್ಲೆಯಲ್ಲಿ ಭತ್ತದ ಬೆಳೆ ಸಾಕಷ್ಟು ನಾಶವಾಗಿತ್ತು. ಈ ಭಾರಿ ನಿರಂತರ ಮಳೆ ಬಂದಿದ್ದರೂ ನೆರೆ ಹಾವಳಿ ಕಡಿಮೆ ಇದ್ದುದರಿಂದ ಭತ್ತದ ಕೃಷಿಗೆ ಹೆಚ್ಚು ಹಾನಿ ಸಂಭವಿಸಿಲ್ಲ ಎಂದು ಬೆಳೆಗಾರರು ತಿಳಿಸಿದ್ದಾರೆ.

**ಭತ್ತ ಖರೀದಿ ಕೇಂದ್ರ ಶೀಘ್ರ ಆರಂಭಿಸಿ**

**ಜಿಲ್ಲೆಯಲ್ಲಿ ಭತ್ತದ ಕೊಯ್ದು ಆರಂಭವಾಗಿದ್ದು ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿ ಭತ್ತ ಖರೀದಿ ಕೇಂದ್ರಗಳನ್ನು ಆರಂಭಿಸುವ ಪ್ರಕ್ರಿಯೆಯನ್ನು ಸಂಬಂಧಪಟ್ಟವರು ಶೀಘ್ರ ಆರಂಭಿಸಬೇಕು ಎಂದು ಜಿಲ್ಲಾ ಕೃಷಿಕ ಸಂಘದ ಅಧ್ಯಕ್ಷ ರಾಮಕೃಷ್ಣ ಶರ್ಮ ಬಂಟಕಲ್ಲು ಆಗ್ರಹಿಸಿದ್ದಾರೆ.**

**ಪ್ರತಿ ವರ್ಷವೂ ಭತ್ತ ಖರೀದಿ ಕೇಂದ್ರವನ್ನು ತಡವಾಗಿ ಆರಂಭಿಸುವುದರಿಂದ ಈ ಯೋಜನೆಯ ಪ್ರಯೋಜನ ರೈತರಿಗೆ ಸಿಗುತ್ತಿಲ್ಲ. ಖರೀದಿ ಕೇಂದ್ರ ಆರಂಭವಾಗುವಷ್ಟರಲ್ಲಿ ರೈತರು ಮಿಲ್‌ನವರಿಗೆ ಭತ್ತ ಮಾರಾಟ ಮಾಡಿರುತ್ತಾರೆ ಎಂದೂ ಅವರು ತಿಳಿಸಿದರು.**

> **ಆಗಾಗ ಮಳೆ ಬರುತ್ತಿದ್ದರೆ ಭತ್ತದ ಕೊಯ್ಲಿಗೆ ಎಲ್ಲಾ ರೈತರು ಧಾವಂತ ತೋರಿಸುತ್ತಾರೆ. ಆಗ ಬೇಡಿಕೆ ಜಾಸ್ತಿಯಾಗಿ ಕಟಾವು ಮಾಡುವ ಯಂತ್ರಗಳ ಬಾಡಿಗೆಯೂ ಏರುವ ಸಾಧ್ಯತೆ ಇರುತ್ತದೆ.**
> **-ರವೀಂದ್ರ ಪೂಜಾರಿ ರೈತ**


'ಯಂತ್ರಗಳನ್ನು ಬಳಸಿ ಭತ್ತ ಕಟಾವು ಮಾಡುವಾಗ ಶೇ 10 ರಿಂದ ಶೇ 20 ರಷ್ಟು ಭತ್ತದ ಪೈರು ಗದ್ದೆಗೆ ಬಿದ್ದು, ರೈತರಿಗೆ ನಷ್ಟ ಉಂಟಾಗುತ್ತದೆ. ಯಂತ್ರಗಳಲ್ಲಿ ಕಟಾವು ಮಾಡಿಸುವ ವೇಳೆ ರೈತರು ಈ ಬಗ್ಗೆ ಗಮನ ಹರಿಸಿ ಕಟಾವು ಯಂತ್ರವನ್ನು ಸಮರ್ಪಕವಾಗಿ ಬಳಸುವಂತೆ ಎಚ್ಚರ ವಹಿಸಬೇಕು' ಎಂದು ಜಿಲ್ಲಾ ಕೃಷಿಕ ಸಂಘದ ಅಧ್ಯಕ್ಷ ರಾಮಕೃಷ್ಣ ಶರ್ಮ ಬಂಟಕಲ್ಲು ಹೇಳಿದ್ದಾರೆ.

'ಭತ್ತ ಕಟಾವು ಯಂತ್ರದ ಬಾಡಿಗೆಯನ್ನು ಏರಿಕೆ ಮಾಡದಂತೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಗಮನ ಹರಿಸಬೇಕು' ಎಂದಿದ್ದಾರೆ.

# ಭಾರತದ ವಿಷಯದಲ್ಲಿ ಟ್ರಂಪ್ ನಡೆ ಕುರಿತು ರಹಮ್ ಇಮ್ಯಾನುಯೆಲ್ ಬೇಸರ

## ಟ್ರಂಪ್ ಅಹಂಕಾರ, ಪಾಕಿಸ್ತಾನದ ಹಣದಿಂದ ಹೀಗೆ ವರ್ತಿಸುತ್ತಿದ್ದಾರೆ, ಭಾರತವನ್ನು ಚೀನಾದ ವಿರುದ್ಧ ಪ್ರತಿದಾಳಿಯಾಗಿ ಬಳಸಬಹುದಿತ್ತು

**ವಾಷಿಂಗ್ಟನ್:** ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಗಳು ಮತ್ತು ಭಾರತದ ವಸ್ತುಗಳ ಮೇಲೆ ಸುಂಕ ಹಚ್ಚಿಸುವುದು ಸೇರಿದಂತೆ ಟ್ರಂಪ್ ತೆಗೆದುಕೊಳ್ಳುತ್ತಿರುವ ನಿಲುವುಗಳು ಸ್ವತಃ ಅಮೆರಿಕಾದವರನ್ನೇ ಕೆರಳಿಸಿದೆ. ಭಾರತದ ಮೇಲೆ ಟ್ರಂಪ್ ಕಠಿಣವಾಗಿ ವರ್ತಿಸುತ್ತಿರುವುದನ್ನು ಈಗಾಗಲೇ ಹಲವು ಅಮೆರಿಕಾದ ನಾಯಕರು ಹಾಗೂ ಉದ್ಯಮಿಗಳು ವಿರೋಧಿಸಿದ್ದರು. ಈಗ ಟ್ರಂಪ್ ಅವರ ಈ ನಡೆಗಳ ಕುರಿತು ಜಪಾನ್‌ಗೆ ಅಮೆರಿಕಾದ ಮಾಜಿ ರಾಯಭಾರಿಯಾಗಿದ್ದ ರಹಮ್ ಇಮ್ಯಾನುಯೆಲ್ ಟೀಕಿಸಿದ್ದಾರೆ. ಈ ಕುರಿತು ಮಾತನಾಡಿದ ಇಮ್ಯಾನುಯೆಲ್ ಭಾರತದೊಂದಿಗೆ ಅಮೆರಿಕಾದ ಸಂಬಂಧವನ್ನು ಬಲಪಡಿಸುವ ಅಮೆರಿಕಾದ 40 ವರ್ಷಗಳ ಪ್ರಯತ್ನವನ್ನು ಟ್ರಂಪ್ ತನ್ನ ಅಹಂಕಾರ ಮತ್ತು ಪಾಕಿಸ್ತಾನದಿಂದ ಬಂದ ಸ್ವಲ್ಪ ಹಣಕ್ಕಾಗಿ ಕೈಬಿಟ್ಟಿದ್ದಾರೆ ಎಂದು ಕಿಡಿಕಾರಿದ್ದಾರೆ.



40 ವರ್ಷಗಳಿಂದ ಭಾರತದ ಜೊತೆ ಬೆಳೆಸಿಕೊಂಡು ಬಂದಿದ್ದ ಸಂಬಂಧವನ್ನು ಟ್ರಂಪ್ ತನ್ನ ಅಹಂಕಾರ ಹಾಗೂ ಪಾಕಿಸ್ತಾನದಿಂದ ತಮಗೆ ಬರುತ್ತಿರುವ ಹಣಕ್ಕಾಗಿ ಕೈಚೆಲ್ಲಿದ್ದಾರೆ. ಭಾರತವನ್ನು ನಾವು ಚೀನಾದ ವಿರುದ್ಧ ಪ್ರತಿದಾಳಿಯಾಗಿ ಬಳಸಿಕೊಳ್ಳಬಹುದಿತ್ತು ಆದರೆ ಟ್ರಂಪ್ ಈ ಸಂಬಂಧವನ್ನು ತಪ್ಪಾಗಿ ನಿರ್ವಹಿಸಿದ್ದಾರೆ

-ರಹಮ್ ಇಮ್ಯಾನುಯೆಲ್
ಅಮೆರಿಕಾದ ಮಾಜಿ ರಾಯಭಾರಿ

**40ವರ್ಷಗಳ ಅಮೆರಿಕಾದ ಶ್ರಮ ನೀರುಪಾಲು:** ಈ ಕುರಿತು ಮಿಡಸ್ ಟಚ್ ಎಂಬ ಅಮೆರಿಕಾದ ಸುದ್ದಿ ವಾಹಿನಿಯೊಂದಿಗೆ ಮಾತನಾಡಿ ಟ್ರಂಪ್‌ನ ಈ ನಡೆಗಳು ಬಹುದೊಡ್ಡ ಕಾರ್ಯತಾಂತ್ರಿಕ ದೋಷವಾಗಿದೆ ಎಂದ ಇಮ್ಯಾನುಯೆಲ್ ಚೀನಾ ವಿರುದ್ಧ ಅಮೆರಿಕಾಕ್ಕೆ ಭಾರತವು ಪ್ರಮುಖ ಪ್ರತಿದಾಳಿಯಾಗಿ ಕಾರ್ಯನಿರ್ವಹಿಸಬಹುದಿತ್ತು, ಆದರೆ ಅಧ್ಯಕ್ಷ ಟ್ರಂಪ್ ಅದನ್ನೆಲ್ಲಾ ಎಸೆದರು. ಭಾರತ ಕೇವಲ ಉತ್ಪಾದನೆ ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿ ಮಾತ್ರವಲ್ಲದೆ ಮಿಲಿಟರಿ ಕ್ಷೇತ್ರದಲ್ಲೂ ಚೀನಾ ವಿರುದ್ಧ ಪ್ರಮುಖ ಪ್ರತಿದಾಳಿಯಾಗಿರುತ್ತಿತ್ತು.ಆದರೆ ಅಮೆರಿಕಾ ಪ್ರಜಾಪ್ರಭುತ್ವ ಆಡಳಿತದ ಅಮೆರಿಕಾ ಹಾಗೂ ಭಾರತ ನಡುವೆ ಸಂಬಂಧಗಳನ್ನು ಬೆಳೆಸುವ ಹಾಗೂ ಅದನ್ನು ಬಲಪಡಿಸುವ ಅಮೆರಿಕಾದ 40 ವರ್ಷಗಳ ನಿಖರ ಕಾರ್ಯತಂತ್ರ ಹಾಗೂ ಯೋಜನೆಯನ್ನು ಅಕ್ಷರಶಃ ಕೈ ಬಿಟ್ಟಿದ್ದಾರೆ ಎಂದರು.

**ಟ್ರಂಪ್ ಅಹಂಕಾರವೇ ಇದಕ್ಕೆ ಕಾರಣ:** ಭಾರತ, ಪಾಕಿಸ್ತಾನ ನಡುವೆ ಶಾಂತಿ ಸ್ಥಾಪನೆಗೆ ಮಧ್ಯವರ್ತಿಯಾಗಿ ಕೆಲಸ ಮಾಡುತ್ತಿದ್ದೇವೆ ಎಂದು ಟ್ರಂಪ್ ಪದೇ ಪದೇ ಹೇಳುತ್ತಿರುವುದನ್ನು, ಅವರ ಪಾಕಿಸ್ತಾನದೊಂದಿಗೆ ಟ್ರಂಪ್ ಕುಟುಂಬಕ್ಕಿರುವ ಕ್ರಿಪ್ಟೋ ಒಪ್ಪಂದವನ್ನು ಉಲ್ಲೇಖಿಸಿ ಮಾತನಾಡಿದ ಅವರು ಟ್ರಂಪ್‌ನ ಈ ಹೇಳಿಕೆಯನ್ನು ಭಾರತ ಒಪ್ಪಲಿಲ್ಲ ಹಾಗೂ ಅವರನ್ನು ನೊಬೆಲ್ ಪ್ರಶಸ್ತಿಗೆ ನಾಮಿನೇಟ್ ಮಾಡಲಿಲ್ಲ. ಹೀಗಾಗಿ ತಮ್ಮ ಅಹಂಕಾರ ಮತ್ತು ಪಾಕಿಸ್ತಾನದಿಂದ ತಮಗೆ ಬರುತ್ತಿದ್ದ ಹಣದಿಂದ ಭಾರತದೊಂದಿಗಿನ ಸಂಬಂಧವನ್ನು ತಪ್ಪಾಗಿ ನಿರ್ವಹಿಸಿದ್ದಾರೆ ಎಂದು ಹೇಳಿದರು.

### ಟ್ರಂಪ್ ಪಾಕಿಸ್ತಾನ ನಡುವಿನ ಕ್ರಿಪ್ಟೋ ಒಪ್ಪಂದ?

ಟ್ರಂಪ್ ಕುಟುಂಬ ಪಾಲುದಾರರಾಗಿರುವ ಅಮೆರಿಕಾದ ಕ್ರಿಪ್ಟೋಕರೆನ್ಸಿ ಸಂಸ್ಥೆ ಮತ್ತು ಪಾಕಿಸ್ತಾನದ ಕ್ರಿಪ್ಟೋ ಕೌನ್ಸಿಲ್ ನಡುವೆ ಇದೇ ವರ್ಷ ಏಪ್ರಿಲ್‌ನಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಫಿನ್ ಟೆಕ್ ಉದ್ಯಮ ಸ್ಟೀವ್ ವಿಟ್ಕಾಫ್ ಪುತ್ರ ಜಕಾರಿ ವಿಟ್ಕಾಫ್ ಒಡೆತನದಲ್ಲಿದೆ. ಇದರ ಬಹುಪಾಲು ಷೇರುಗಳನ್ನು ಟ್ರಂಪ್ ಕುಟುಂಬದವರೇ ಹೊಂದಿದ್ದಾರೆ. ಟ್ರಂಪ್ ಮಕ್ಕಳಾದ ಎರೀಕ್ ಹಾಗೂ ಡೊನಾಲ್ಡ್ ಜೂ. ಹಾಗೂ ಅವರ ಅಳಿಯ ಜರೇದ್ ಕುಶ್ನೇರ್ ಸೇರಿ ಕಂಪನಿಯ ಸುಮಾರು ಶೇ.60% ಷೇರುಗಳನ್ನು ಹೊಂದಿದ್ದಾರೆ.

ಭಾರತದ ಮೇಲೆ ಟ್ರಂಪ್ ಸರ್ಕಾರ ಶೇ50% ಸುಂಕವನ್ನು ವಿಧಿಸಿದ್ದು, ಅನಂತರ ಮತ್ತೆ ರಷ್ಯಾದಿಂದ ತೈಲ ಖರೀದಿಸಿದ ಕಾರಣ ನೀಡಿ 25% ಹೆಚ್ಚುವರಿ ಸುಂಕ ವಿಧಿಸಿದ ನಂತರ ಭಾರತ, ಅಮೆರಿಕಾ ನಡುವೆ ಬಿರುಕು ಕಾಣಿಸಿಕೊಂಡಿದ್ದು, ಈ ಸುಂಕಗಳನ್ನು ಭಾರತ ಅನ್ಯಾಯ, ನ್ಯಾಯಸಮ್ಮತವಲ್ಲದ, ಅಸಮಂಜಸ ಎಂದು ಖಂಡಿಸಿತ್ತು.ಇನ್ನೂ ಭಾರತ, ಅಮೆರಿಕಾ ನಡುವೆ ದ್ವಿಪಕ್ಷೀಯ ಮಾತುಕತೆ ನಡೆಯುತ್ತಿದ್ದು ಇದು ಯಾವ ಅಂತ್ಯವನ್ನು ಕಾಣುತ್ತದೆ ಹಾಗೂ ಟ್ರಂಪ್ ಈಗಲಾದರೂ ಭಾರತದ ವಿಷಯದಲ್ಲಿ ತಮ್ಮ ನಡೆಯನ್ನು ಬದಲಿಸಿ ಎರಡು ದೇಶಗಳ ನಡುವಿನ ಸಂಬಂಧ ಮತ್ತೆ ಮೊದಲಿನಂತೆ ಮಾಡುತ್ತಾರೋ ಇಲ್ಲವೋ ಎಂದು ನೋಡಬೇಕಿದೆ.

ಉದಯ ವಾಹಿನಿ

ಪ್ರಾದೇಶಿಕ

ಶುಕ್ರವಾರ
17 ಅಕ್ಟೋಬರ್ 2025



# ಮಿನಿ ನ್ಯೂಸ್

## ರಷ್ಯಾ ತೈಲ ಖರೀದಿ ನಿಲ್ಲಿಸುವುದಾಗಿ ಮೋದಿ ಭರವಸೆ ನೀಡಿದ್ದಾರೆ; ಟ್ರಂಪ್

**ವಾಷಿಂಗ್ಟನ್:** ಭಾರತದ ಪ್ರಧಾನಿ ನರೇಂದ್ರ ಮೋದಿ ತಮ್ಮ ದೇಶವು ರಷ್ಯಾದ ತೈಲ ಖರೀದಿಯನ್ನು ನಿಲ್ಲಿಸುವುದಾಗಿ ವೈಯಕ್ತಿಕವಾಗಿ ಭರವಸೆ ನೀಡಿದ್ದಾರೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಭಾರತ ಸರ್ಕಾರವು ದೃಢೀಕರಿಸದ ಈ ಬದಲಾವಣೆಯು, ಉಕ್ರೇನ್‌ನಲ್ಲಿ ಯುದ್ಧವನ್ನು ಕೊನೆಗೊಳಿಸಲು ಮಾತುಕತೆ ನಡೆಸಲು ಮಾಸ್ಕೋ ಮೇಲೆ ಒತ್ತಡ ಹೇರುವ ಟ್ರಂಪ್ ಅವರ ಪ್ರಯತ್ನಗಳನ್ನು ಹೆಚ್ಚಿಸುತ್ತದೆ. ತೈಲ ಇರುವುದಿಲ್ಲ. ಅವರು ತೈಲ ಖರೀದಿಸುತ್ತಿಲ್ಲ ಎಂದು ಟ್ರಂಪ್ ಹೇಳಿದರು. ಬದಲಾವಣೆ ತಕ್ಷಣವೇ ಆಗುವುದಿಲ್ಲ ಎಂದು ಅವರು ಹೇಳಿದರು, ಆದರೆ ಕಡಿಮೆ ಅವಧಿಯಲ್ಲಿ ಅದು ಸಾಧ್ಯವಾಗಲಿದೆ ಎಂದಿದ್ದಾರೆ.

ವಾಷಿಂಗ್ಟನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಕಾಮೆಂಟ್‌ಗಾಗಿ ತಕ್ಷಣ ಪ್ರತಿಕ್ರಿಯಿಸಲಿಲ್ಲ. ಸುಮಾರು ನಾಲ್ಕು ವರ್ಷಗಳ ಹಿಂದೆ ರಷ್ಯಾದ ಆಕ್ರಮಣದೊಂದಿಗೆ ಪ್ರಾರಂಭವಾದ ಉಕ್ರೇನ್‌ನಲ್ಲಿ ಯುದ್ಧವನ್ನು ಕೊನೆಗೊಳಿಸಲು ಒತ್ತಾಯಿಸಲು ಟ್ರಂಪ್ ಅಸಮರ್ಥತೆಯಿಂದ ನಿರಾಶೆಗೊಂಡಿದ್ದಾರೆ. ನಿರ್ಣಯಕ್ಕೆ ಪ್ರಾಥಮಿಕ ಅಡಚಣೆ ಎಂದು ಅವರು ಹೆಚ್ಚಾಗಿ ವಿವರಿಸುವ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಬಗ್ಗೆ ಅವರು ಅತೃಪ್ತಿ ವ್ಯಕ್ತಪಡಿಸಿದ್ದಾರೆ ಮತ್ತು ಅವರು ನಾಳೆ ಉಕ್ರೇನಿಯನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಅವರನ್ನು ಭೇಟಿಯಾಗಲಿದ್ದಾರೆ. ಚೀನಾ ನಂತರ ಭಾರತವು ರಷ್ಯಾದ ತೈಲವನ್ನು ಖರೀದಿಸುವ ಎರಡನೇ ಅತಿದೊಡ್ಡ ದೇಶವಾಗಿದೆ ಮತ್ತು ಆಗಸ್ಟ್‌ನಲ್ಲಿ ಟ್ರಂಪ್ ಭಾರತವನ್ನು ಹೆಚ್ಚಿನ ಸುಂಕಗಳೊಂದಿಗೆ ಶಿಕ್ಷಿಸಿದ್ದರು.

## ಕಾರಿನ ಏರ್‌ಬ್ಯಾಗ್ ಸ್ಫೋಟಗೊಂಡು ಬಾಲಕ ಸಾವು

**ಚೆನ್ನೈ:** ಕುಟುಂಬ ಸಮೇತ ಬಾಡಿಗೆ ಕಾರಿನಲ್ಲಿ ಹೋಗುತ್ತಿದ್ದಾಗ ಮತ್ತೊಂದು ವಾಹನಕ್ಕೆ ಹೊಡೆದು ಸಂಭವಿಸಿದ ಅಪಘಾತದಲ್ಲಿ ಕಾರಿನ ಏರ್‌ಬ್ಯಾಗ್ ಮುಖಕ್ಕೆ ಬಡಿದಿದ್ದರಿಂದ ಬಾಲಕನೊಬ್ಬ ಮೃತಪಟ್ಟಿರುವ ಘಟನೆ ತಿರುಪೋರೂರು ಬಳಿಯ ಹಳೆಯ ಮಹಾ ಬಲಿಪುರಂ ರಸ್ತೆಯಲ್ಲಿ ನಡೆದಿದೆ. ಕವಿನ್(7) ಎಂದು ಮೃತಪಟ್ಟ ದುರ್ದೈವಿ. ಪೊಲೀಸ್ ವರದಿಗಳ ಪ್ರಕಾರ, ಚೆಂಗಲ್ಪಟ್ಟು ಜಿಲ್ಲೆಯ ಪುದುಪಟ್ಟಣಂ ಗ್ರಾಮದ ನಿವಾಸಿ ವೀರಮುತ್ತು ತನ್ನ ಪತ್ನಿ, ಅವರ ಏಳು ವರ್ಷದ ಮಗ ಕವಿನ್, ಇತರ ಇಬ್ಬರೊಂದಿಗೆ ಬಾಡಿಗೆ ಕಾರಿನಲ್ಲಿ ಚೆನ್ನೈಗೆ ಪ್ರಯಾಣಿಸುತ್ತಿದ್ದರು. ವಾಹನವನ್ನು ವಿಘ್ನೇಶ್ ಎಂಬ ವ್ಯಕ್ತಿ ಚಲಾಯಿಸುತ್ತಿದ್ದರು. ಅವರ ಮುಂದೆ ಪ್ರಯಾಣಿಸುತ್ತಿದ್ದ ಸುರೇಶ್ ಚಲಾಯಿಸುತ್ತಿದ್ದ ಕಾರು ಇದ್ದಕ್ಕಿದ್ದಂತೆ ಎಡಕ್ಕೆ ತಿರುಗಿದಾಗ ಬಾಡಿಗೆ ಕಾರಿನಲ್ಲಿದ್ದ ಏರ್‌ಬ್ಯಾಗ್ ಸ್ಫೋಟಗೊಂಡು ಅಪಘಾತ ಸಂಭವಿಸಿದೆ. ಈ ವೇಳೆ ಅಲ್ಲಿದ್ದವರು, ದಾರಿಹೋಕರು ಸಹಾಯಕ್ಕೆ ಧಾವಿಸಿದ್ದು, ಗಾಯಗೊಂಡ ಬಾಲಕನನ್ನು ರಕ್ಷಿಸಿ 108 ಆಂಬ್ಯುಲೆನ್ಸ್‌ನಲ್ಲಿ ತಿರುಪೋರೂರು ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದರಾದರೂ ಅದಾಗಲೇ ಬಾಲಕ ಮೃತಪಟ್ಟಿದ್ದ. ದುರಂತವೆಂದರೆ ಮಕ್ಕಳ ನಿಯಂತ್ರಣ ವ್ಯವಸ್ಥೆಯಲ್ಲಿ ಕುಳಿತುಕೊಳ್ಳದೆ, ಮುಂಭಾಗದ ಸೀಟಿನಲ್ಲಿ ತನ್ನ ತಂದೆಯ ಮಡಿಲಲ್ಲಿ ಕುಳಿತಿದ್ದ ಬಾಲಕ ಕವಿನ್, ನಿಯೋಜಿಸಲಾದ ಏರ್‌ಬ್ಯಾಗ್‌ನ ಸಂಪೂರ್ಣ ಬಲವನ್ನು ನೇರವಾಗಿ ತನ್ನ ಮುಖಕ್ಕೆ ತೆಗೆದುಕೊಂಡನು.

ಅವನು ತಕ್ಷಣ ಪ್ರಜ್ಞೆ ತಪ್ಪಿದನು.ಆಸ್ಪತ್ರೆಗೆ ತಲುಪಿದ ಕೂಡಲೇ ಮಗು ಮೃತಪಟ್ಟಿದೆ ಎಂದು ಘೋಷಿಸಲಾಯಿತು. ಬಾಲಕ ಕಾರಿನ ಮುಂಭಾಗದ ಪ್ರಯಾಣಿಕರ ಸೀಟಿನಲ್ಲಿ ತನ್ನ ತಂದೆಯ ಮಡಿಲಲ್ಲಿ ಕುಳಿತಿದ್ದ. ಈ ಸಂರ್ದದಲ್ಲಿ ಕಾರು ಮತ್ತೊಂದು ವಾಹನಕ್ಕೆ ಡಿಕ್ಕಿ ಹೊಡೆದಿದ್ದು, ಏರ್‌ಬ್ಯಾಗ್ ನಿಯೋಜನೆಯ ಬಲವು ಬಾಲಕನಿಗೆ ಮಾರಕ ಗಾಯಗಳನ್ನು ಉಂಟು ಮಾಡಿವೆ. ಇದು ಕಾರಿನ ಸುರಕ್ಷತಾ ಮಾನದಂಡಗಳ ಉಲ್ಲಂಘನೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಎಟಿಎಂನಿಂದ 6.18 ಲಕ್ಷ ರೂ. ಹಣ ಮಾಯ

**ಥಾಣೆ:** ಎಟಿಎಂ ಹಣ ಸಂಗ್ರಹವನ್ನು ನಿರ್ವಹಿಸುವಾಗ 6.18 ಲಕ್ಷ ರೂ.ಗಳನ್ನು ದುರುಪಯೋಗಪಡಿಸಿಕೊಂಡ ಆರೋಪದ ಮೇಲೆ ನಗದು ನಿರ್ವಹಣಾ ಕಂಪನಿಯ ನಾಲ್ವರು ಉದ್ಯೋಗಿಗಳ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಒಬ್ಬ ಕ್ಯಾಷಿಯರ್ ಇಬ್ಬರು ಭದ್ರತಾ ಸಿಬ್ಬಂದಿ ಮತ್ತು ಒಬ್ಬ ಚಾಲಕನಾಗಿರುವ ಆರೋಪಿಗಳಿಗೆ ವಿವಿಧ ಬ್ಯಾಂಕ್‌ನ ಎಟಿಎಂಗಳಿಂದ ಉಳಿದ ಹಣವನ್ನು ಸಂಗ್ರಹಿಸಿ ಕಂಪನಿಯ ಕಪಾಟಿನಲ್ಲಿ ಠೇವಣಿ ಇಡುವ ಕೆಲಸವನ್ನು ವಹಿಸಲಾಗಿತ್ತು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕಳದ ಅ.13 ರಂದು, ಅವರು ವಿವಿಧ ಎಟಿಎಂಗಳಿಂದ 70,54,100 ರೂ.ಗಳನ್ನು ಸಂಗ್ರಹಿಸಿದರು ಆದರೆ ಕೇವಲ 64,35,200 ರೂ.ಗಳನ್ನು ಠೇವಣಿ ಇಟ್ಟರು. ಕಂಪನಿಯ ಲೆಕ್ಕಪರಿಶೋಧನೆಯಲ್ಲಿ 6,18,900 ರೂ.ಗಳ ಕೊರತೆ ಕಂಡುಬಂದಿದೆ, ನಂತರ ನಗದು ನಿರ್ವಹಣಾ ಸಂಸ್ಥೆಯ ಹಿರಿಯ ಪ್ರತಿನಿಧಿ ಅವರ ವಿರುದ್ಧ ದೂರು ದಾಖಲಿಸಿದ್ದಾರೆ ಎಂದು ಕೊಲ್ಸೆವಾಡಿ ಪೊಲೀಸ್ ಠಾಣೆಯ ಅಧಿಕಾರಿ ತಿಳಿಸಿದ್ದಾರೆ.

ಆರೋಪಿಗಳು ಲೆಕ್ಕವಿಲ್ಲದ ಹಣವನ್ನು ವೈಯಕ್ತಿಕ ಬಳಕೆಗಾಗಿ ತಿರುಗಿಸಿದ್ದಾರೆ ಎಂದು ಆರೋಪಿಸಲಾಗಿದೆ. ತನಿಖೆಯ ಭಾಗವಾಗಿ, ಪೊಲೀಸರು ಎಟಿಎಂ ಸಂಗ್ರಹ ದಾಖಲೆಗಳನ್ನು ಪರಿಶೀಲಿಸುತ್ತಿದ್ದಾರೆ, ಸಿಸಿಟಿವಿ ದೃಶ್ಯಾವಳಿಗಳನ್ನು ವಿಶ್ಲೇಷಿಸುತ್ತಿದ್ದಾರೆ ಮತ್ತು ವಾಹನ ಚಲನೆಯ ದಾಖಲೆಗಳನ್ನು ಪರಿಶೀಲಿಸುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ನಂಬಿಕೆ ದ್ರೋಹದ ಆರೋಪದ ಬಗ್ಗೆ ನಾವು ತನಿಖೆ ಆರಂಭಿಸಿದ್ದೇವೆ ಮತ್ತು ಕಾಣೆಯಾದ ಮೊತ್ತವನ್ನು ಪತ್ತೆಹಚ್ಚಲು ಮತ್ತು ಆರೋಪಿಗಳ ವೈಯಕ್ತಿಕ ಪಾತ್ರಗಳನ್ನು ಪರಿಶೀಲಿಸಲು ಪ್ರಯತ್ನಗಳು ನಡೆಯುತ್ತಿವೆ ಎಂದು ಅಧಿಕಾರಿ ಹೇಳಿದರು.

## ಉರುಗ್ವೆ ದೇಶದಲ್ಲಿ ದಯಾಮರಣಕ್ಕೆ ಅವಕಾಶ ನೀಡುವ ಕಾನೂನು ಅಂಗೀಕಾರ

**ಮಾಂಟೆವಿಡಿಯೊ:** ಅನಾರೋಗ್ಯದಿಂದ ಬಳಲಿ ಬದುಕಲು ಸಾಧ್ಯವಲ್ಲ ಎಂಬ ಸಂದರ್ಭದಲ್ಲಿ ಜೀವ ಬಿಡಲು ಅವಕಾಶ ನೀಡುವ ಕಾನೂನನ್ನು ಉರುಗ್ವೆಯ ಸೆನೆಟ್ ಅಂಗೀಕರಿಸಿದೆ. ಉರುಗ್ವೆಯ ಸೆನೆಟ್ ದಯಾಮರಣವನ್ನು ಅಪರಾಧ ಮುಕ್ತಗೊಳಿಸುವ ಕಾನೂನನ್ನು ಅಂಗೀಕರಿಸಿದೆ. ಈ ಕ್ರಮವು ಉರುಗ್ವೆಯನ್ನು ಕ್ಯಾಥೋಲಿಕ್ ಪ್ರಧಾನವಾಗಿ ಲ್ಯಾಟಿನ್ ಅಮೆರಿಕಾದಲ್ಲಿ ಶಾಸನದ ಮೂಲಕ ದಯಾಮರಣವನ್ನು ಅನುಮತಿಸುವ ಮೊದಲ ದೇಶವನ್ನಾಗಿ ಎನಿಸಿಕೊಂಡಿದೆ. ಈಗಾಗಲೆ ಕೊಲಂಬಿಯಾ, ಈಕ್ವೆಡಾರ್ ಸುಪ್ರೀಂ ಕೋರ್ಟ್ ತೀರ್ಪುಗಳ ಮೂಲಕ ಈ ಪದ್ಧತಿಯನ್ನು ಅಪರಾಧ ಮುಕ್ತಗೊಳಿಸಿವೆ. ಚಿಲಿಯಲ್ಲಿ, ಎಡಪಂಥೀಯ ಅಧ್ಯಕ್ಷ ಗೇಬ್ರಿಯಲ್ ಬೋರಿಕ್ ಇತ್ತೀಚೆಗೆ ಸೆನೆಟ್‌ನಲ್ಲಿ ದೀರ್ಘಕಾಲದಿಂದ ಸ್ಥಗಿತಗೊಂಡಿದ್ದ ದಯಾಮರಣ ಮಸೂದೆಯ ಅನುಮೋದನೆಗಾಗಿ ಒತ್ತಾಯಿಸುವಿಕೆಯನ್ನು ಪುನರುಜ್ಜೀವನಗೊಳಿಸಿದರು.



ಇತ್ತೀಚಿನ ವರ್ಷಗಳಲ್ಲಿ ಈ ಪದ್ಧತಿಯ ಸುತ್ತ ತೀವ್ರ ಚರ್ಚೆಗಳು ಮತ್ತು ಉತ್ಸಾಹಭರಿತ ಕ್ರಿಯಾಶೀಲತೆ ಈ ಪ್ರದೇಶವನ್ನು ಆವರಿಸಿದೆ. ಸಾರ್ವಜನಿಕ ಅಭಿಪ್ರಾಯವು ಇದನ್ನು ಕೈಗೆತ್ತಿಕೊಳ್ಳಲು ನಮನ್ನು ಕೇಳುತ್ತಿದೆ ಎಂದು ಉರುಗ್ವೆಯ ಆಡಳಿತ ಎಡಪಂಥೀಯ ಒಕ್ಕೂಟದ ಸೆನ್ ಪೆಟ್ರೀಷಿಯಾ ಕ್ರೇಮರ್ ದೇಶದ ರಾಜಧಾನಿ ಮಾಂಟೆ ವಿಡಿಯೋದಲ್ಲಿ ತಮ್ಮ ಸಂಸದರಿಗೆ ತಿಳಿಸಿದ್ದರು ಅದರಂತೆ 31 ಸೆನೆಟರ್‌ಗಳಲ್ಲಿ 20 ಜನರು ಪರವಾಗಿ ಮತ ಚಲಾಯಿಸಿ ಕಾನೂನು ಜಾರಿಗೆ ಅವಕಾಶ ನೀಡಿದರು. ಕೆಳಮನೆಯಲ್ಲಿ ಈಗಾಗಲೆ ಮಸೂದೆಯನ್ನು ಹೆಚ್ಚಿನ ಬಹುಮತದೊಂದಿಗೆ ಅಂಗೀಕರಿಸಿತು ಈಗ ಸರ್ಕಾರವು ನಿಯಮಗಳನ್ನು ಜಾರಿಗೆ ತರುವುದು ಮಾತ್ರ ಉಳಿದಿದೆ. ಉರುಗ್ವೆಯಲ್ಲಿ ದಯಾಮರಣಕ್ಕೆ ಹೆಚ್ಚಿನ ವಿರೋಧವು ಕ್ಯಾಥೋಲಿಕ್ ಚರ್ಚ್‌ನಿಂದ ಬಂದಿತು. ಆದರೆ 3.5 ಮಿಲಿಯನ್ ಜನರಿರುವ ಈ ದೇಶದಲ್ಲಿ ಜಾತ್ಯತೀತೀಕರಣವು ಈ ಪದ್ಧತಿಗೆ ಪ್ರತಿರೋಧವನ್ನು ಕಡಿಮೆ ಮಾಡಿದೆ. ದಯಾಮರಣವನ್ನು ಬಯಸುವವರು ಮಾನಸಿಕವಾಗಿ ಸಮರ್ಥರಾಗಿರಬೇಕು ಎಂದು ಉರುಗ್ವೆ ಬಯಸುತ್ತದೆ. ಖಿನ್ನತೆಯಂತಹ ಮಾನಸಿಕ ಸ್ಥಿತಿಗಳನ್ನು ಹೊಂದಿರುವವರಿಗೆ ದಯಾಮರಣವನ್ನು ಕಾನೂನು ಸಂಪೂರ್ಣವಾಗಿ ನಿಷೇಧಿಸದಿದ್ದರೂ, ರೋಗಿಗಳು ನಿರ್ಧಾರ ತೆಗೆದುಕೊಳ್ಳಲು ಅವರು ಮಾನಸಿಕವಾಗಿ ಸಾಕಷ್ಟು ಸದೃಢರಾಗಿದ್ದಾರೆ ಎಂದು ತೀರ್ಪು ನೀಡಲು ಇಬ್ಬರು ವೈದ್ಯರ ಅನುಮತಿ ಪಡೆಯುವುದು ಕಡ್ಡಾಯವಾಗಿದೆ.

## ಅಫ್ಘಾನಿಸ್ತಾನ–ಪಾಕಿಸ್ತಾನ ನಡುವೆ 48 ಗಂಟೆಗಳ ಕದನ ವಿರಾಮ ಒಪ್ಪಂದ

# ಪಾಕಿಸ್ತಾನವನ್ನು ಇನ್ನಿಲ್ಲದಂತೆ ಅವಮಾನಿಸುತ್ತಿರುವ ತಾಲಿಬಾನ್ ಸರ್ಕಾರ

**ಕಾಬೂಲ್:** ಪ್ರತಿದಿನದ ಸೂರ್ಯೋದಯವಾಗುತ್ತಿದ್ದಂತೇ ಜಾಗತಿಕ ಮಟ್ಟದಲ್ಲಿ ಅವಮಾನಕ್ಕೆ ಗುರಿಯಾಗುವುದು ಪಾಕಿಸ್ತಾನದ ಜಾಯಮಾನ. ದಿನಕ್ಕೊಂದು ಹೊಸ ಅಪಮಾನಕ್ಕೆ ಗುರಿಯಾಗದಿದ್ದರೆ ಪಾಕಿಸ್ತಾನದ ಗಂಟಲಲ್ಲಿ ನೀರು ಕೂಡ ಇಳಿಯುವುದಿಲ್ಲ. ಅಫ್ಘಾನಿಸ್ತಾನದೊಂದಿಗೆ ಮಿಲಿಟರಿ ಸಂಘರ್ಷದ ದುಸ್ಸಾಹಸಕ್ಕೆ ಕೈಹಾಕಿ ಮುಖಭಂಗ ಅನುಭವಿಸಿರುವ ಪಾಕಿಸ್ತಾನ, ಇದೀಗ ತನ್ನದೇ ಯುದ್ಧ ಟ್ಯಾಂಕ್‌ಗಳೊಂದಿಗೆ ತಾಲಿಬಾನ್ ಬೀದಿಗಳಲ್ಲಿ ರೇಸ್ ಆಯೋಜಿಸಿರುವುದನ್ನು ಕಂಡು ಅಳುತ್ತಿದೆ. ಹೌದು, ಅಫ್ಘಾನಿಸ್ತಾನ–ಪಾಕಿಸ್ತಾನ ನಡುವೆ 48 ಗಂಟೆಗಳ ಕದನ ವಿರಾಮ ಒಪ್ಪಂದ ಜಾರಿಯಾಗಿದೆ. ಈ ಮಧ್ಯೆ, ಸಂಘರ್ಷದ ಸಮಯದಲ್ಲಿ ಪಾಕಿಸ್ತಾನ ಸೇನೆಯಿಂದ ವಶಪಡಿಸಿಕೊಂಡ ಯುದ್ಧ ಟ್ಯಾಂಕ್‌ಗಳೊಂದಿಗೆ ತಾಲಿಬಾನ್ ಬೀದಿಗಳಲ್ಲಿ ರೇಸ್ ಆಯೋಜನೆ ಮಾಡಿದೆ. ಈ ಟ್ಯಾಂಕ್ ರೇಸ್‌ನ ವಿಡಿಯೋಗಳು ಸಾಮಾಜಿಕ ಜಾಲತಾಣದಲ್ಲಿ ಭಾರೀ ಸದ್ದು ಮಾಡುತ್ತಿದ್ದು, ಪಾಕಿಸ್ತಾನ ತೀವ್ರ ಮುಜುಗರದ ಸನ್ನಿವೇಶವನ್ನು ಎದುರಿಸಿದೆ.

ಅಫ್ಘಾನಿಸ್ತಾನದ ಆಗ್ನೇಯ ಸ್ಪಿನ್ ಬೋಲ್ಡಕ್ ಪ್ರಾಂತ್ಯದ ಬೀದಿಗಳಲ್ಲಿ, ಪಾಕಿಸ್ತಾನದಿಂದ ವಶಪಡಿಸಿಕೊಂಡ ಯುದ್ಧ ಟ್ಯಾಂಕ್‌ಗಳನ್ನು ತಾಲಿಬಾನ್ ಪ್ರದರ್ಶಿಸಿದೆ. ಪಾಕಿಸ್ತಾನವೇ ಮೊದಲಾಗಿ ಕದನ ವಿರಾಮ ಒಪ್ಪಂದಕ್ಕೆ ಮನವಿ ಮಾಡಿದೆ ಎಂದು ತಾಲಿಬಾನ್ ಆಡಳಿತ ಸ್ಪಷ್ಟಪಡಿಸಿದ್ದು, ತನ್ನ ವಿಜಯದ ಸಂಕೇತವಾಗಿ ಯುದ್ಧ ಟ್ಯಾಂಕ್‌ಗಳ ರೇಸ್‌ನ್ನು ಆಯೋಜನೆ ಮಾಡಿದೆ. ಈ ಕುರಿತು ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ವಿಡಿಯೋ ಹಂಚಿಕೊಂಡಿರುವ ತಾಲಿಬಾನ್ ವಕ್ತಾರ ಜಬಿಹುಲ್ಲಾ ಮುಜಾಹಿದ್, ಅಫ್ಘಾನ್ ಪಡೆಗಳು ಗಡಿ ಪ್ರದೇಶಗಳಲ್ಲಿ ಪಾಕಿಸ್ತಾನ ಸೇನೆಯ ಗುಂಡಿನ ದಾಳಿಗೆ ಪ್ರತಿದಾಳಿ ನಡೆಸಿದ್ದು, ಈ ವೇಳೆ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳು ಮತ್ತು ಯುದ್ಧ ಟ್ಯಾಂಕ್‌ಗಳನ್ನು ವಶಪಡಿಸಿಕೊಂಡಿವೆ. ನಮಗೆ ಅಲ್ಲಾಹ್‌ನ ಶ್ರೀ ರಕ್ಷೆ ಇದೆ ಎಂದು ಸ್ಪಷ್ಟಪಡಿಸಿದ್ದಾರೆ. ಆದರೆ ಪಾಕಿಸ್ತಾನವು ಈ ಹೇಳಿಕೆಗಳನ್ನು ತಿರಸ್ಕರಿಸಿದ್ದು, ವಿಡಿಯೋಗಳಲ್ಲಿ ಕಂಡುಬಂದಿರುವ ಟ್ಯಾಂಕ್‌ಗಳ ಮಾದರಿಯನ್ನು ಪಾಕಿಸ್ತಾನ ಸೇನೆ ಈಗ ಬಳಸುತ್ತಿಲ್ಲ ಎಂದು ಪ್ರತಿಪಾದಿಸಿದೆ. ಈ ಕುರಿತು ಮಾತನಾಡಿರುವ ಪಾಕಿಸ್ತಾನದ ರಕ್ಷಣಾ ಸಚಿವ ಖವಾಜಾ ಆಸಿಫ್, ಅಫ್ಘಾನಿಸ್ತಾನ ತೋರಿಸುತ್ತಿರುವ ವಿಡಿಯೋಗಳಲ್ಲಿ ಕಂಡುಬರುವ ಯುದ್ಧ ಟ್ಯಾಂಕ್‌ಗಳು, ಪಾಕಿಸ್ತಾನ ಸೇನೆಯ ದಾಸ್ತಾನಿನಲ್ಲಿ ಇಲ್ಲ. ಈ ಟ್ಯಾಂಕ್‌ಗಳನ್ನು ತಾಲಿಬಾನ್ ಬಹುಶಃ ಯಾವುದೋ ಜಂಕ್ ಡೀಲರ್‌ನಿಂದ ಖರೀದಿಸಿರಬಹುದು ಎಂದು ಹೇಳಿದ್ದಾರೆ. ಅದೇ ರೀತಿ ವಿಡಿಯೋದಲ್ಲಿ ಕಂಡುಬರುವ ಯುದ್ಧ ಟ್ಯಾಂಕ್ ಸೋವಿಯತ್ ಯುಗದ ಟಿ–55 ಟ್ಯಾಂಕ್ ಆಗಿದ್ದು, ಇದು 1980 ರ ದಶಕದಿಂದಲೂ ಅಫ್ಘಾನಿಸ್ತಾನದ ವಶದಲ್ಲಿವೆ ಎಂದು ಕೆಲವರು ವಾದಿಸಿದ್ದಾರೆ. ಈ ವಿಡಿಯೋ ದೃಢೀಕರಣ ಇನ್ನಷ್ಟೇ ಆಗಬೇಕಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಮಾತ್ರ ಪಾಕಿಸ್ತಾನ ಸೇನೆ ತೀವ್ರ ಟ್ರೋಲ್‌ಗೆ ಗುರಿಯಾಗಿದೆ. ಅಫ್ಘಾನಿಸ್ತಾನ–ಪಾಕಿಸ್ತಾನ ಘರ್ಷಣೆಯಲ್ಲಿ ಸೌದಿ ಅರೇಬಿಯಾ ಅನುಪಸ್ಥಿತಿ ಕೂಡ ಭಾರೀ ಚರ್ಚೆಗೆ ಗ್ರಾಸವಾಗಿದೆ.




**ಅಫ್ಘಾನಿಸ್ತಾನ ಪಾಕಿಸ್ತಾನ ಗಡಿ ಘರ್ಷಣೆ**

ತಾಲಿಬಾನ್ ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತಕಿ ಭಾರತ ಭೇಟಿ ಸಂದರ್ಭದಲ್ಲಿ, ಪಾಕಿಸ್ತಾನವು ಕಾಬೂಲ್ ನಗರದ ಮೇಲೆ ದಾಳಿ ಮಾಡಿತ್ತು. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನ ಸೇನಾ ನೆಲೆಗಳ ಮೇಲೆ ಅಫ್ಘಾನಿಸ್ತಾನ ಪ್ರತಿದಾಳಿ ನಡೆಸಿತ್ತು. ಅಫ್ಘಾನಿಸ್ತಾನದ ತೀವ್ರ ದಾಳಿಯಿಂದ ಕಂಗಾಲಾದ ಪಾಕಿಸ್ತಾನವು, ಕದನ ವಿರಾಮ ಒಪ್ಪಂದಕ್ಕೆ ಮೊರೆ ಇಟ್ಟಿತ್ತು. ಡ್ಯುರಾಂಡ್ ಲೈನ್‌ನಲ್ಲಿ ಎರಡು ದಿನಗಳ ಕಾಲ ನಡೆದ ತೀವ್ರ ಘರ್ಷಣೆಯಲ್ಲಿ, ಪಾಕಿಸ್ತಾನ ಸೇನೆಯ ಡಜನ್‌ಗಟ್ಟಲೇ ಯೋಧರು ಸಾವನ್ನಪ್ಪಿದಾರೆ ಎಂದು ಮೂಲಗಳು ಖಚಿತಪಡಿಸಿವೆ.

# ಬೆಂಗಳೂರು ರಸ್ತೆಗುಂಡಿ, ಉದ್ಯಮಗಳ ಸ್ಥಳಾಂತರದ ಬಗ್ಗೆ ಆಂಧ್ರ ಸಚಿವ ನಾರಾ ಲೋಕೇಶ್ ಹೊಸ ಬಾಂಬ್

**ಹೈದರಾಬಾದ್:** ಕರ್ನಾಟಕ ರಾಜಧಾನಿ ಬೆಂಗಳೂರಿನಲ್ಲಿ ಹಾಳುಬಿದ್ದ ರಸ್ತೆಗಳು, ಸಂಚಾರ ದಟ್ಟಣೆ, ಮೂಲಭೂತ ಸೌಕರ್ಯಗಳ ಕೊರತೆ ಇತ್ಯಾದಿ ಕಾರಣಗಳಿಂದ ಕೆಲವು ಐಟಿಬಿಟಿ ಕಂಪನಿಗಳು ರಾಜ್ಯದಿಂದ ಬೇರೆ ಕಡೆ ಮುಖ ಮಾಡುತ್ತಿವೆ. ಸಿಲಿಕಾನ್ ಸಿಟಿ ಎಂದೇ ಖ್ಯಾತಿಯಾಗಿರುವ ಬೆಂಗಳೂರಿನಲ್ಲಿ ನೆಲೆಗೊಂಡಿರುವ ಪ್ರತಿಷ್ಠಿತ ಐಟಿ ಕಂಪನಿಗಳು ಮೂಲಭೂತ ಸೌಕರ್ಯಗಳ ಕೊರತೆ, ಸಂಚಾರ ದಟ್ಟಣೆ ಹಾಗೂ ನಗರದಲ್ಲಿ ರಸ್ತೆಗಳ ಹಾಳುಬಿದ್ದ ಕಾರಣ ಐಟಿಬಿಟಿ ಕಂಪನಿಗಳು ಕರ್ನಾಟಕದಿಂದ ಕಾಲು ಕೀಳಲು ಮುಂದಾಗಿವೆ. ಇದರ ನಡುವೆ ಕರ್ನಾಟಕದಲ್ಲಿನ ವೈಫಲ್ಯಗಳನ್ನೇ ಬಂಡವಾಳ ಮಾಡಿಕೊಂಡಿರುವ ನೆರೆಯ ಆಂಧ್ರಪ್ರದೇಶ ರಾಜ್ಯದಲ್ಲಿರುವ ಐಟಿ ಕಂಪನಿಗಳನ್ನು ತನ್ನತ್ತ ಸೆಳೆಯಲು ಮುಂದಾಗಿದೆ.

ಬೆಂಗಳೂರು ಮೂಲದ ನವೋದ್ಯಮಗಳನ್ನು ಆಂಧ್ರಪ್ರದೇಶಕ್ಕೆ ವಿಸ್ತರಿಸುವ ಅಥವಾ ಸ್ಥಳಾಂತರಿಸುವ ಕುರಿತು ಮಾತುಕತೆಗಳು ನಡೆಯುತ್ತಿವೆ ಎಂದು ಆಂಧ್ರಪ್ರದೇಶದ ಐಟಿ ಸಚಿವ ನಾರಾ ಲೋಕೇಶ್ ಬಾಂಬ್ ಸಿಡಿಸಿದ್ದಾರೆ. ನಾವು ಪ್ರತಿ ರೂಪಾಯಿ ಹೂಡಿಕೆಗೂ ಸ್ಪರ್ಧಿಸುತ್ತೇವೆ. ನಾವು ಉದ್ಯೋಗ ಸೃಷ್ಟಿ, ಉತ್ತಮ ವ್ಯಾಪಾರ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವತ್ತ ಗಮನಹರಿಸಿದ್ದೇವೆ. ಬಲವಾದ ಮೂಲಭೂತ ಸೌಕರ್ಯ, 24X7 ವಿದ್ಯುತ್ ಸರಬರಾಜು ಅನಂತಪುರದಲ್ಲಿರುವ ಕಿಯಾ ಕೇಂದ್ರದಂತಹ ಅಭಿವೃದ್ಧಿ ಹೊಂದುತ್ತಿರುವ ಕ್ಲಸ್ಟರ್‌ಗಳಿಂದ ಬೆಂಬಲಿತವಾಗಿದೆ. ಆಂಧ್ರಪ್ರದೇಶಕ್ಕೆ ವಿಸ್ತರಣೆ ಅಥವಾ ಸ್ಥಳಾಂತರವನ್ನು ಅನ್ವೇಷಿಸುವ ಬೆಂಗಳೂರು ಮೂಲದ ಸ್ಟಾರ್ಟ್ ಅಪ್‌ಗಳೊಂದಿಗೆ ಮಾತುಕತೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.



ಈಗಾಗಲೇ ಇಂಟರ್ನೆಟ್ ದೈತ್ಯ ಗೂಗಲ್ ಮೆಗಾ ಡೇಟಾ ಮತ್ತು ಐಟಿ ಹಬ್‌ಗಾಗಿ 15 ಬಿಲಿಯನ್ ಡಾಲರ್ ಹೂಡಿಕೆ ಮಾಡಲು ಆಂಧ್ರಪ್ರದೇಶದ ವಿಶಾಖಪಟ್ಟಣವನ್ನು ಆಯ್ಕೆ ಮಾಡಿದ ನಂತರ ಮತ್ತಷ್ಟು ಉದ್ಯಮಗಳ ಆಕರ್ಷಿಸುವ ಕೆಲಸ ಕೂಡ ಭರದಿಂದ ಸಾಗಿದೆ. ಈ ಬಗ್ಗೆಯೂ ಮಾತನಾಡಿರುವ ನಾರಾ ಲೋಕೇಶ್, ಅವರು ಅಸಮರ್ಥರಾಗಿದ್ದರೆ, ನಾನು ಏನು ಮಾಡಲು ಸಾಧ್ಯ, ಅವರ ಸ್ವಂತ ಕೈಗಾರಿಕೋದ್ಯಮಿಗಳು ಮೂಲಸೌಕರ್ಯ ಕೆಟ್ಟದಾಗಿದೆ ಎಂದು ಹೇಳುತ್ತಿದ್ದಾರೆ. ವಿದ್ಯುತ್ ಕಡಿತ, ಮೂಲಭೂತ ಸೌಕರ್ಯ ಕೊರತೆಗಳಂತಹ ಸಮಸ್ಯೆಗಳನ್ನು ಸರಿಪಡಿಸಬೇಕು ಎಂದು ಹೇಳಿದ್ದಾರೆ.

ಅಲ್ಲದೆ ತಮ ರಾಜ್ಯವು ಈಗಾಗಲೇ 120 ಬಿಲಿಯನ್ ಹೂಡಿಕೆಯನ್ನು ಆಕರ್ಷಿಸಿದ್ದು, ಆಂಧ್ರಪ್ರದೇಶದಲ್ಲಿನ ಸುಧಾರಣೆಗಳ ತ್ವರಿತ ವೇಗವು ಕರ್ನಾಟಕದೊಂದಿಗೆ ಸ್ಪರ್ಧಿಸುವಂತೆ ಮಾಡಿದೆ. ಆದಾಗ್ಯೂ ಈ ವೇಗದಿಂದ ಚಿಂತಿತರಾಗಿರುವ ರಾಜ್ಯಗಳು ಪ್ರತಿಕ್ರಿಯಿಸಬೇಕಾಯಿತು. ಅದು ಅವರ ಸವಾಲು ಎಂದು ಕರ್ನಾಟಕ ಸಚಿವ ಪ್ರಿಯಾಂಕ್ ಖರ್ಗೆ ಅವರ ಹೆಸರು ಉಲ್ಲೇಖಿಸದೇ ನಾರಾ ಹೇಳಿದ್ದಾರೆ. ರಾಜ್ಯವು ಹೂಡಿಕೆದಾರರಿಗೆ ಹೆಚ್ಚು ಆಕರ್ಷಕವಾಗಿದೆ. ನಮ ಡಬಲ್–ಎಂಜಿನ್ ಸರ್ಕಾರ, ತ್ವರಿತ ಕಾರ್ಮಿಕ ಸುಧಾರಣೆಗಳು, ಬುಲೆಟ್ ಟ್ರೈನ್ ವೇಗದಲ್ಲಿ ಅಭಿವೃದ್ಧಿಯನ್ನು ಚಾಲನೆ ಮಾಡುವ ಬಲವಾದ ಕೇಂದ್ರ–ರಾಜ್ಯ ಸಮನ್ವಯಕ್ಕೆ ಮನ್ನಣೆ ನೀಡುತ್ತಿದೆ. ವಿಶಾಖಪಟ್ಟಣಂನಲ್ಲಿರುವ ಗೂಗಲ್‌ನ 15 ಬಿಲಿಯನ್ ಡಾಲರ್ ಡೇಟಾ ಸೆಂಟರ್ ಅಮೆರಿಕದ ಹೊರಗೆ ಭಾರತದ ಅತಿದೊಡ್ಡ ಯೋಜನೆಯಾಗಿದೆ, 1.8 ಲಕ್ಷಕ್ಕೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುತ್ತದೆ ಎಂದು ಹೇಳಿದ್ದಾರೆ.

## 13,430 ಕೋಟಿ ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ಮೋದಿ ಚಾಲನೆ

**ಕರ್ನೂಲ್:** ಆಂಧ್ರ ಪ್ರದೇಶಕ್ಕೆ ಭೇಟಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅವರು 13,430 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದ್ದಾರೆ. ನಗರದ ನಡೆದ ಸಮಾರಂಭದಲ್ಲಿ ಮೋದಿ ಅವರು ಕೈಗಾರಿಕೆ, ವಿದ್ಯುತ್ ಪ್ರಸರಣ, ರಸ್ತೆ, ರೈಲ್ವೆ, ರಕ್ಷಣಾ ಉತ್ಪಾದನೆ, ಪೆಟ್ರೋಲಿಯಂ, ನೈಸರ್ಗಿಕ ಅನಿಲದಂತಹ ಪ್ರಮುಖ ಯೋಜನೆಗಳ ಲೋಕಾರ್ಪಣೆ ಮತ್ತು ಶಂಕುಸ್ಥಾಪನೆ ನೆರವೇರಿಸಿದ್ದಾರೆ.

ಕರ್ನೂಲ್–IIIಪೂಲಿಂಗ್ ಸ್ಟೇಷನ್‌ನಲ್ಲಿ 2,880 ಕೋಟಿಗೂ ಹೆಚ್ಚು ವೆಚ್ಚದಲ್ಲಿ ಪ್ರಸರಣ ವ್ಯವಸ್ಥೆಯನ್ನು ಬಲಪಡಿಸುವ ಕಾಮಗಾರಿ ಮತ್ತು ಕರ್ನೂಲ್‌ನ ಓರ್ವಕಲ್ ಕೈಗಾರಿಕಾ ಪ್ರದೇಶ ಮತ್ತು ಕಡಪಾದಲ್ಲಿನ ಕೊಪ್ಪರ್ತಿ ಕೈಗಾರಿಕಾ ಪ್ರದೇಶದಲ್ಲಿ 4,920 ಕೋಟಿಗೂ ಅಧಿಕ ಮೊತ್ತದ ಯೋಜನೆಗಳಿಗೆ ಮೋದಿ ಅಡಿಪಾಯ ಹಾಕಿದ್ದಾರೆ. ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಮತ್ತು ಅನುಷ್ಠಾನ ಟ್ರಸ್ಟ್ ಹಾಗೂ ಆಂಧ್ರಪ್ರದೇಶ ಕೈಗಾರಿಕಾ ಮೂಲಸೌಕರ್ಯ ನಿಗಮ ಲಿಮಿಟೆಡ್ ಜಂಟಿಯಾಗಿ ಅಭಿವೃದ್ಧಿಪಡಿಸಿದ ಈ ಯೋಜನೆಗಳು ಪ್ಲಗ್ ಅಂಡ್ ಪ್ಲೇ ಮೂಲಸೌಕರ್ಯ, ವಾಕ್ ಟು ವರ್ಕ್ ಪರಿಕಲ್ಪನೆಯನ್ನು ಹೊಂದಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದೇ ವೇಳೆ 960 ಕೋಟಿಗೂ ಹೆಚ್ಚು ವೆಚ್ಚದಲ್ಲಿ ಸಬ್ಬಾವರಂನಿಂದ ಶೀಲಾನಗರದವರೆಗಿನ ಆರು ಪಥಗಳ ಹೆದ್ದಾರಿಗೆ ಮೋದಿ ಶಂಕುಸ್ಥಾಪನೆ ನೆರವೇರಿಸಿದ್ದಾರೆ.



ಈ ಯೋಜನೆಗಳು 21,000 ಕೋಟಿ ಹೂಡಿಕೆ ಆಕರ್ಷಿಸುವುದರ ಜತೆಗೆ ಒಂದು ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ. ಇದು ರಾಜ್ಯದ ರಾಯಲಸೀಮಾ ಪ್ರದೇಶದಲ್ಲಿ ಕೈಗಾರಿಕಾ ಅಭಿವೃದ್ಧಿ ಹೆಚ್ಚಿಸುತ್ತದೆ ಎಂದರು.

ಈ ಯೋಜನೆಯು ಬಂದರು ನಗರಿ ವಿಶಾಖಪಟ್ಟಣದಲ್ಲಿ ದಟ್ಟಣೆಯನ್ನು ಕಡಿಮೆ ಮಾಡುವುದರ ಜತೆಗೆ ವ್ಯಾಪಾರ ಮತ್ತು ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಉದ್ದೇಶ ಹೊಂದಿದೆ. ಪಿಲೇರು–ಕಲೂರು ನಡುವೆ ಚತುಷ್ಪಥ ರಸ್ತೆ, ಕಡಪ–ನೆಲ್ಲೂರು ಗಡಿಯಿಂದ ಸಿ.ಎಸ್. ಪುರಂವರೆಗೆ ರಸ್ತೆ ಅಗಲೀಕರಣ, ರಾಷ್ಟ್ರೀಯ ಹೆದ್ದಾರಿ 165ರಲ್ಲಿ ಗುಡಿವಾಡ, ನುಜೆಲ್ಲಾ ರೈಲು ನಿಲ್ದಾಣಗಳ ನಡುವಿನ ಚತುಷ್ಪಥ ರೈಲು ಸೇತುವೆಯನ್ನು ಪ್ರಧಾನಿ ಉದ್ಘಾಟಿಸಿದ್ದಾರೆ. ಇದೇ ವೇಳೆ ಮೋದಿ ಅವರು 1,200 ಕೋಟಿ ಮೊತ್ತದ ರೈಲ್ವೆ ಯೋಜನೆಗಳಿಗೂ ಅಡಿಪಾಯ ಹಾಕಿದ್ದಾರೆ.

ಇಂಧನ ವಲಯದಲ್ಲಿ ಗೈಲ್ ಇಂಡಿಯಾ ಲಿಮಿಟೆಡ್‌ನ ಶ್ರೀಕಾಕುಳಂ–ಅಂಗುಲ್ ನೈಸರ್ಗಿಕ ಅನಿಲ ಪೈಪ್‌ಲೈನ್ ಅನ್ನು ಉದ್ಘಾಟಿಸಿದ್ದಾರೆ. ಇದನ್ನು 1,730 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದ್ದು, ಆಂಧ್ರಪ್ರದೇಶದಲ್ಲಿ ಸುಮಾರು 124 ಕಿ.ಮೀ ಮತ್ತು ಒಡಿಶಾದಲ್ಲಿ 298 ಕಿ.ಮೀ. ವಿಸ್ತರಿಸಿದೆ.

ಚಿತ್ತೂರಿನಲ್ಲಿ 200 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾದ ಇಂಡಿಯನ್ ಆಯಿಲ್‌ನ 60 ಟಿಎಂಟಿಪಿಎ ಎಲ್‌ಪಿಜಿ ಬಾಟ್ಲಿಂಗ್ ಸ್ಥಾವರವನ್ನು ಮೋದಿ ಉದ್ಘಾಟಿಸಿದ್ದಾರೆ. ಕೃಷ್ಣ ಜಿಲ್ಲೆಯ ನಿಮ್ಮಲೂರಿನಲ್ಲಿ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ವತಿಯಿಂದ ಅಭಿವೃದ್ಧಿಪಡಿಸಲಾದ 360 ಕೋಟಿ ವೆಚ್ಚದ ಅಡ್ವಾನ್ಸ್ ನೈಟ್ ವಿಷನ್ ಪ್ರಾಡಕ್ಟ್ ಕೈಗಾರಿಕೆಯನ್ನು ಅವರು ಲೋಕಾರ್ಪಣೆ ಮಾಡಿದ್ದಾರೆ.

## 56 ಇಂಚಿನ ಮೋದಿ ಎದೆ ಕುಗ್ಗಿದೆ ; ಕಾಂಗ್ರೆಸ್ ಲೇವಡಿ

**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಯಿಂದ ಭಯಗೊಂಡಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ಭಾರತ ರಷ್ಯಾದ ತೈಲವನ್ನು ಖರೀದಿಸುವುದಿಲ್ಲ ಎಂದು ಅವರು ನಿರ್ಧರಿಸಲು ಮತ್ತು ಘೋಷಿಸಲು ಅವಕಾಶ ನೀಡಿದ್ದಾರೆ ಮತ್ತು ಪದೇ ಪದೇ ನಿಂದನೆಗಳ ಹೊರತಾಗಿಯೂ ಅಭಿನಂದನಾ ಸಂದೇಶಗಳನ್ನು ಕಳುಹಿಸುತ್ತಲೇ ಇದ್ದಾರೆ ಎಂದು ಹೇಳಿದ್ದಾರೆ.

ತಮ್ಮ ಸ್ನೇಹಿತ ಪ್ರಧಾನಿ ಮೋದಿ ರಷ್ಯಾದಿಂದ ತೈಲ ಖರೀದಿಸುವುದನ್ನು ಭಾರತ ನಿಲ್ಲಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ಟ್ರಂಪ್ ಹೇಳಿಕೊಂಡ ನಂತರ ಅವರ ಹೇಳಿಕೆ ಬಂದಿದ್ದು, ಉಕ್ರೇನ್ ಮೇಲಿನ ಆಕ್ರಮಣದ ಬಗ್ಗೆ ಮಾಸ್ಕೋ ಮೇಲೆ ಒತ್ತಡ ಹೆಚ್ಚಿಸುವತ್ತ ಒಂದು ದೊಡ್ಡ ಹೆಜ್ಜೆ ಎಂದು ಅವರು ಬಣ್ಣಿಸಿದ್ದಾರೆ. ಪ್ರಧಾನಿ ಮೋದಿ ಟ್ರಂಪ್‌ಗೆ ಹೆದರಿದ್ದಾರೆ. ಭಾರತ ರಷ್ಯಾದ ತೈಲವನ್ನು ಖರೀದಿಸುವುದಿಲ್ಲ ಎಂದು ಟ್ರಂಪ್ ನಿರ್ಧರಿಸಲು ಮತ್ತು ಘೋಷಿಸಲು ಅನುವು ಮಾಡಿ ಕೊಡುತ್ತದೆ. ಪದೇ ಪದೇ ನಿಂದನೆಗಳ ಹೊರತಾಗಿಯೂ ಅಭಿನಂದನಾ ಸಂದೇಶಗಳನ್ನು ಕಳುಹಿಸುತ್ತಲೇ ಇದೆ.

ಹಣಕಾಸು ಸಚಿವರ ಅಮೆರಿಕ ಭೇಟಿಯನ್ನು ರದ್ದುಗೊಳಿಸಲಾಗಿದೆ. ಅದೇ ರೀತಿ ಕಾಂಗ್ರೆಸ್‌ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಕೂಡ ಈ ವಿಷಯದ ಬಗ್ಗೆ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಭಾರತೀಯ ಕಾಲಮಾನ ಮೇ 10, 2025 ರಂದು ಸಂಜೆ 5:37 ಕ್ಕೆ, ಭಾರತ ಆಪರೇಷನ್ ಸಿಂದೂರ್ ಅನ್ನು ಸ್ಥಗಿತಗೊಳಿಸಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಮೊದಲು ಘೋಷಿಸಿದರು. ತರುವಾಯ, ಅಧ್ಯಕ್ಷ ಟ್ರಂಪ್ 5 ವಿಭಿನ್ನ ದೇಶಗಳಲ್ಲಿ 51 ಬಾರಿ ಸುಂಕ, ವ್ಯಾಪಾರವನ್ನು ಒತ್ತಡದ ಅಸ್ತ್ರವಾಗಿ ಬಳಸಿಕೊಂಡು ಆಪರೇಷನ್ ಸಿಂದೂರ್ ಅನ್ನು ನಿಲ್ಲಿಸಲು ಮಧ್ಯಪ್ರವೇಶಿಸಿರುವುದಾಗಿ ಹೇಳಿ ಕೊಂಡಿದ್ದಾರೆ. ಆದರೂ ನಮ್ಮ ಪ್ರಧಾನಿ ಮೌನವಾಗಿದ್ದರು ಎಂದು ರಮೇಶ್ ಎಕ್ಸ್ ಮಾಡಿದ್ದಾರೆ.

ಈಗ ಟ್ರಂಪ್ ನಿನ್ನೆ ಮೋದಿ ಭಾರತ ರಷ್ಯಾದಿಂದ ತೈಲವನ್ನು ಆಮದು ಮಾಡಿಕೊಳ್ಳುವುದಿಲ್ಲ ಎಂದು ಭರವಸೆ ನೀಡಿದ್ದಾರೆ ಎಂದು ಘೋಷಿಸಿದ್ದಾರೆ. ಮೋದಿ ಪ್ರಮುಖ ನಿರ್ಧಾರಗಳನ್ನು ಅಮೆರಿಕಕ್ಕೆ ಹೊರಗುತ್ತಿಗೆ ನೀಡಿದ್ದಾರೆ ಎಂದು ತೋರುತ್ತದೆ. 56 ಇಂಚಿನ ಎದೆ ಕುಗ್ಗಿದೆ ಎಂದು ಅವರು ತಿಳಿಸಿದ್ದಾರೆ.

# ಗುಜರಾತ್ ಸಚಿವ ಸಂಪುಟ ಪುನರ್‌ರಚನೆ ನಿರ್ಧಾರ


## ಗುಜರಾತ್ ಸಿಎಂ ಭೂಪೇಂದ್ರ, ಪಟೇಲ್ ಹೊರತುಪಡಿಸಿ ಎಲ್ಲಾ ಸಚಿವರ ರಾಜೀನಾಮೆ; ಏನು ಕಾರಣ? ಹೈಕಮಾಂಡ್ ಫುಲ್ ಸ್ಟ್ರಾಂಗ್

**ಅಹಮದಾಬಾದ್:** ಮಹತ್ವದ ಬೆಳವಣಿಗೆಯೊಂದರಲ್ಲಿ ಗುಜರಾತ್ ಸರ್ಕಾರದ ಎಲ್ಲಾ ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಶುಕ್ರವಾರ ನಡೆಯಲಿರುವ ಪ್ರಮುಖ ಸಚಿವ ಸಂಪುಟ ಪುನರ್‌ರಚನೆಗೆ ದಾರಿ ಮಾಡಿಕೊಟ್ಟಿದ್ದಾರೆ. ಮುಖ್ಯಮಂತ್ರಿ, ಭೂಪೇಂದ್ರ, ಪಟೇಲ್ ಅವರು ಪ್ರಸ್ತುತ ಸಚಿವ ಸಂಪುಟದ 7–10 ಸಚಿವರನ್ನು ಮತ್ತೆ ಸೇರಿಸಿಕೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ. ಈಗಾಗಲೇ ಅನೇಕ ಸಚಿವರು ರಾಜ್ಯಪಾಲರಿಗೆ ತಮ್ಮ ರಾಜೀನಾಮೆ ಪತ್ರ ರವಾನಿಸಿದ್ದು, ಸಚಿವ ಸಂಪುಟದಲ್ಲಿ ಮುಂದುವರೆಯಬಹುದಾದ ಸಚಿವರು ಮಾತ್ರ ರಾಜೀನಾಮೆಯನ್ನು ಸಲ್ಲಿಸಿಲ್ಲ. ಆದಾಗ್ಯೂ, ಸದ್ಯ ಗುಜರಾತ್ ಸರ್ಕಾರದಲ್ಲಿ ಭೂಪೇಂದ್ರ, ಪಟೇಲ್ ಹೊರತುಪಡಿಸಿ ಬೇರಾವ ಸಚಿವರೂ ಕಾರ್ಯನಿರ್ವಹಿಸುತ್ತಿಲ್ಲ. ಗುಜರಾತ್ ಸಚಿವ ಸಂಪುಟ ಪುನರ್ ರಚನೆ ಈಗ ದೇಶಾದ್ಯಂತ ಸುದ್ದಿಯಾಗಿದೆ.

**ಹೈಕಮಾಂಡ್ ವಿನೂತನ ಪ್ರಯತ್ನ**

16 ಸದಸ್ಯರನ್ನು ಹೊಂದಿರುವ ಪ್ರಸ್ತುತ ಗುಜರಾತ್ ಸಚಿವ ಸಂಪುಟವನ್ನು 26 ಕ್ಕೆ ವಿಸ್ತರಿಸಲಾಗುವುದು ಎಂದು ಮೂಲಗಳು ಖಚಿತಪಡಿಸಿವೆ. ಪ್ರಸ್ತುತ ಸಚಿವ ಸಂಪುಟದಲ್ಲಿ ಅಧಿಕಾರದಲ್ಲಿ ಮುಂದುವರಿದ ಏಕೈಕ ಸದಸ್ಯ ಎಂದರೆ ಅದು ಮುಖ್ಯಮಂತ್ರಿ ಭೂಪೇಂದ್ರ, ಪಟೇಲ್ ಮಾತ್ರ. ಅವರೂ ಕೂಡ ಗುರುವಾರ ರಾತ್ರಿ, ರಾಜ್ಯಪಾಲ ಆಚಾರ್ಯ ದೇವವ್ರತ್ ಅವರನ್ನು ಭೇಟಿ ಮಾಡಿ, ಔಪಚಾರಿಕವಾಗಿ ರಾಜೀನಾಮೆ ಸಲ್ಲಿಸುವ ಸಾಧ್ಯತೆ ಇದೆ.

ಇಂದು ಮುಖ್ಯಮಂತ್ರಿ, ಭೂಪೇಂದ್ರ, ಪಟೇಲ್ ನಿವಾಸದಲ್ಲಿ ನಡೆದ ಸಭೆಯಲ್ಲಿ, ಸಚಿವ ಸಂಪುಟದ ರಾಜೀನಾಮೆಯ ನಿರ್ಧಾರ ತೆಗೆದುಕೊಳ್ಳಲಾಗಿದ್ದು, ಈ ಸಭೆಯಲ್ಲಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸುನಿಲ್ ಬನ್ಸಾಲ್, ಮುಖ್ಯಮಂತ್ರಿ ಪಟೇಲ್ ಭಾಗವಹಿಸಿದ್ದರು. ಗುಜರಾತ್ ಬಿಜೆಪಿ ಅಧ್ಯಕ್ಷ ಜಗದೀಶ್ ವಿಶ್ವಕರ್ಮ ಅವರು ಈ ಪ್ರಕ್ರಿಯೆಯನ್ನು ಸಂಘಟಿಸಿ, ನಾಯಕತ್ವದ ನಿರ್ಧಾರವನ್ನು ಸಚಿವರಿಗೆ ತಿಳಿಸಿದ್ದಾರೆ ಎನ್ನಲಾಗಿದೆ.




### ರಾಜೀನಾಮೆ ನೀಡಿರುವುದು ಕುತೂಹಲ

ಶುಕ್ರವಾರ ಬೆಳಿಗ್ಗೆ 11.30ಕ್ಕೆ ಗಾಂಧಿನಗರದ ಮಹಾತ್ಮ ಮಂದಿರದಲ್ಲಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಸಮ್ಮುಖದಲ್ಲಿ ಗುಜರಾತ್‌ನ ಹೊಸ ಸಚಿವ ಸಂಪುಟ ಪ್ರಮಾಣ ವಚನ ಸ್ವೀಕರಿಸಲಿದೆ. ಈ ಬಾರಿ ಹೊಸ ಮುಖಗಳಿಗೆ ಅವಕಾಶ ಕಲ್ಪಿಸುವ ನಿರ್ಧಾರ ಮಾಡಲಾಗಿದೆ. ಗುಜರಾತ್‌ನ ಎಲ್ಲಾ ಸಚಿವರು ರಾಜೀನಾಮೆ ನೀಡಿರುವುದು ಕುತೂಹಲ ಕೆರಳಿಸಿದೆ.

ಮುಂಬರುವ ಚುನಾವಣೆಗಳಿಗೆ ಮುಂಚಿತವಾಗಿ ಜಾತಿ ಮತ್ತು ಪ್ರಾದೇಶಿಕ ಪ್ರಾತಿನಿಧ್ಯವನ್ನು ಸಮತೋಲನಗೊಳಿಸುವ ಮತ್ತು ಸರ್ಕಾರಕ್ಕೆ ಹೊಸ ಶಕ್ತಿಯನ್ನು ತುಂಬುವ ಬಿಜೆಪಿಯ ವಿಶಾಲ ಕಾರ್ಯತಂತ್ರದ ಭಾಗವಾಗಿ ಈ ಪುನರ್‌ರಚನೆ ನಡೆಯುತ್ತಿದೆ. ಇಂದು ಗುಜರಾತ್ ಹೊಸ ಸಚಿವರನ್ನು ಸ್ವಾಗತಿಸಲಿದೆ.

ಮೂಲಗಳ ಪ್ರಕಾರ, ಬನ್ಸಾಲ್, ಪಟೇಲ್ ಅವರು ಪ್ರತಿಯೊಬ್ಬ ಸಚಿವರನ್ನು ಪ್ರತ್ಯೇಕವಾಗಿ ಭೇಟಿಯಾಗಿ, ಕೇಂದ್ರ ನಾಯಕತ್ವದ ನಿರ್ಧಾರವನ್ನು ಮನವರಿಕೆ ಮಾಡಿ ಕೊಟ್ಟಿದ್ದಾರೆ. ಮುಂದಿನ ಸುತ್ತಿನ ರಾಜಕೀಯ, ಸಾಂಸ್ಥಿಕ ಚುನಾವಣೆಗಳ ಸವಾಲುಗಳಿಗೆ ಮುಂಚಿತವಾಗಿ, ರಾಜ್ಯ ಸಚಿವ ಸಂಪುಟವನ್ನು ಪುನರ್‌ರಚಿಸುವ ಬಿಜೆಪಿಯ ಯೋಜನೆಯ ಭಾಗವಾಗಿ ಎಲ್ಲಾ ಸಚಿವರಿಂದ ರಾಜೀನಾಮೆ ಪಡೆಯಲಾಗಿದ ಎಂದು ಪಕ್ಷದ ಮೂಲಗಳು ಖಚಿತಪಡಿಸಿವೆ.

2021ರಂದು ಗುಜರಾತ್ ಮುಖ್ಯಮಂತ್ರಿಯಾಗಿ ಭೂಪೇಂದ್ರ, ಪಟೇಲ್ ಪ್ರಮಾಣವಚನ ಸ್ವೀಕರಿಸಿದ್ದರು.



# 2ನೇ ಮದ್ವೆಗೆ ಸಜ್ಜಾದ ರಘು ದೀಕ್ಷಿತ್

ಅಕ್ಟೋಬರ್ ಅಂತ್ಯದಲ್ಲೇ ಮದುವೆ!

ಸಂಗೀತ ನಿರ್ದೇಶಕ ರಘು ದೀಕ್ಷಿತ್ ಅವರು ಗಾಯಕಿ ಹಾಗೂ ಕೊಳಲು ವಾದಕಿ ವಾರಿಜಾಶ್ರೀ ಅವರ ಜೊತೆ ಸಪ್ತಪದಿ ತುಳಿಯಲಿದ್ದಾರೆ. ಸ್ವತಃ ರಘು ದೀಕ್ಷಿತ್ ಅವರೇ ಈ ಬಗ್ಗೆ ಹೇಳಿಕೊಂಡಿದ್ದಾರೆ. ಇಬ್ಬರು ಪರಸ್ಪರ ಪ್ರೀತಿಸುತ್ತಿದ್ದು, ಎರಡೂ ಮನೆಯವರ ಒಪ್ಪಿಗೆ ಮೇರೆಗೆ ವಿವಾಹ ಬಂಧನಕ್ಕೆ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ. ಈ ತಿಂಗಳ ಕೊನೆಯಲ್ಲಿ ಇಬ್ಬರು ಮದುವೆ ಆಗಲಿದ್ದಾರೆ. ನನ್ನ ಜೀವನದಲ್ಲಿ ಹೊಸ ಅಧ್ಯಾಯ ಆರಂಭವಾಗುತ್ತದೆ ಎಂದು ನಾನು ನಿರೀಕ್ಷೆ ಮಾಡಿರಲಿಲ್ಲ. ನನ್ನ ಜೀವನದಲ್ಲಿ ನಾನು ನಿರೀಕ್ಷೆ ಮಾಡಿರದ ಆಕಸ್ಮಿಕ ತಿರುವು ಇದು. ನನ್ನ ಮತ್ತು ವಾರಿಜಾಶ್ರೀ ಅವರ ಪ್ರೀತಿಗೆ ವಾರಿಜಾಶ್ರೀ ಅವರ ಪೋಷಕರು ಒಪ್ಪಿಗೆ ಸೂಚಿಸಿದ್ದಾರೆ. ಸದ್ಯ ನಮ್ಮ ಜೀವನದ ಹೊಸ ಅಧ್ಯಾಯವನ್ನು ಪ್ರಾರಂಭಿಸಲು ಹೊರಟಿದ್ದೇವೆ ಎಂದಿದ್ದಾರೆ ರಘು ದೀಕ್ಷಿತ್.ವಾರಿಜಾಶ್ರೀ ಹಾಗೂ ರಘು ದೀಕ್ಷಿತ್ ಇಬ್ಬರು 'ಸಾಕು ಇನ್ನೂ ಸಾಕು' ಎನ್ನುವ ಆಲ್ಬಂಗೆ ಕೆಲಸ ಮಾಡುವ ಮೂಲಕ ಪರಸ್ಪರ ಪರಿಚಯವಾದರು. ಅಲ್ಲಿಂದ ಮುಂದೆ ಇಬ್ಬರು ಸ್ನೇಹಿತರಾಗಿ ಸಾಕಷ್ಟು ವಿಡಿಯೋ ಸಾಂಗ್ ಆಲ್ಬಂಗಳಿಗೆ ಕೆಲಸ ಮಾಡಿದ್ದಾರೆ. ಈ ಮೊದಲು ರಘು ದೀಕ್ಷಿತ್ ಅವರು ನೃತ್ಯ ಕಲಾವಿದೆ ಮಯೂರಿ ಅವರನ್ನು ಮದುವೆಯಾಗಿದ್ದರು. ಕೆಲವು ವರ್ಷಗಳ ಹಿಂದೆ ಮಯೂರಿ ಅವರೊಂದಿಗೆ ವಿಚ್ಛೇದನ ಪಡೆದುಕೊಂಡಿದ್ದ ರಘು ದೀಕ್ಷಿತ್ ಇದೀಗ ವಾರಿಜಾ ಶ್ರೀ ಅವರೊಂದಿಗೆ ವೈವಾಹಿಕ ಜೀವನಕ್ಕೆ ಕಾಲಿಡಲಿದ್ದಾರೆ.



# ಮುತ್ತಿನಿಂದಲೇ ರವಿಕೆ ಮಾಡಿಸಿಕೊಂಡ ಪ್ರಣೀತಾ

ಸಿನಿಮಾದಿಂದ ಕೊಂಚ ಬ್ರೇಕ್ ಪಡೆದುಕೊಂಡಿರುವ ನಟಿ ಪ್ರಣೀತಾ ಸುಭಾಷ್ ಇದೀಗ ಎರಡು ಮಕ್ಕಳ ತಾಯಿ. ಮಕ್ಕಳ ಲಾಲನೆ ಪಾಲನೆ ಜೊತೆಗೆ ಸೋಶಿಯಲ್ ಮೀಡಿಯಾದಲ್ಲಿ ಆಕ್ಟೀವ್ ಇರುವ ನಟಿ. ಇಬ್ಬರು ಮಕ್ಕಳ ತಾಯಿಯಾದ ಬಳಿಕವೂ ಗ್ಲ್ಯಾಮರ್ ಕಾಪಾಡಿಕೊಂಡಿರುವ ನಟಿ ಪ್ರಣೀತಾ ಈಗ ಇನ್‌ಸ್ಟಾಗ್ರಾಮ್‌ನಲ್ಲಿ ಹಲ್‌ಚಲ್ ಸೃಷ್ಟಿಸುವ ಫೋಟೋ ಪೋಸ್ಟ್ ಮಾಡಿದ್ದಾರೆ.

ವಿನೂತನ ಡಿಸೈನ್ ಫೋಟೋ ಪೋಸ್ಟ್ ಮಾಡಿರುವ ಪ್ರಣೀತಾ ಮುತ್ತಿನಿಂದಲೇ ಪೋಣಿಸಿರುವ ರವಿಕೆ ಧರಿಸಿದ್ದಾರೆ. ಮುತ್ತಿನ ರವಿಕೆ ಡಿಸೈನ್ ಆಕರ್ಷಕವಾಗಿ ಕಾಣುತ್ತಿದ್ದು ಅತ್ಯಂತ ಮೋಹಕವಾಗಿದೆ. ಇದೇ ಉಡುಗೆಯಲ್ಲಿ ಪ್ರಣೀತಾ ವಿಧವಿಧದ ಪೋಸ್ ಕೊಟ್ಟಿದ್ದಾರೆ.

ಫ್ಯಾಶನ್ ಮಾಡೆಲ್ ಆಗಿರುವ ಪ್ರಣೀತಾ ಇತ್ತೀಚೆಗೆ ಸಿನಿಮಾಗಳಿಂದ ದೂರ ಉಳಿದಿದ್ದರೂ ಸೋಶಿಯಲ್ ಮೀಡಿಯಾ ಮೂಲಕ ಫುಲ್ ಆಯಕ್ಟೀವ್. ಇತ್ತೀಚೆಗೆ ಕೇನ್ ಫಿಲ್ಮ್ ಫೆಸ್ಟಿವಲ್‌ನಲ್ಲೂ ಭಾಗವಹಿಸಿದ್ದರು. ಅಂದಹಾಗೆ ಇನ್‌ಸ್ಟಾದಲ್ಲಿ ಸುಮಾರು 60 ಲಕ್ಷದಷ್ಟು ಫಾಲೋವರ್ಸ್ ಹೊಂದಿದ್ದಾರೆ. ಹೀಗೆ ಚೆಂದದ ಫೋಟೋಗಳನ್ನ ಪೋಸ್ಟ್ ಮಾಡುವ ಮೂಲಕ ತೆಲುಗು ಹಾಗೂ ಕನ್ನಡ ಅಭಿಮಾನಿಗಳ ಜೊತೆ ಎಂಗೇಜ್ ಆಗಿರುತ್ತಾರೆ.



ಹಲ್‌ಚಲ್ ಸೃಷ್ಟಿಸುವ ಫೋಟೋ

ಸಿನಿ ವಾಹಿನಿ

# ಸುಹಾನ ನಿತಿನ್ ಮದುವೆ..

ಸರಿಗಮಪ ರಿಯಾಲಿಟಿ ಶೋ ಮೂಲಕ ಮನೆಮಾತಾಗಿದ್ದ ಗಾಯಕಿ ಸುಹಾನ ಸೈಯದ್ ದಾಂಪತ್ಯ ಜೀವನಕ್ಕೆ ಕಾಲಿಡುತ್ತಿದ್ದಾರೆ. ನಾಳೆ ಮದುವೆ ಆಗುತ್ತಿದ್ದು, ಮದುವೆ ಆಹ್ವಾನ ಪತ್ರದಲ್ಲಿ ಏನು ಬರೆದಿದ್ದಾರೆ ಅನ್ನೋ ವಿವರ ಇಲ್ಲಿದೆ. ನಿತಿನ್ ಎಂಬ ರಂಗಭೂಮಿ ಕಲಾವಿದನ ಸುಹಾನ ಪ್ರೀತಿಸುತ್ತಿದ್ದು, ಈಗ ಅಂತರ್ ಧರ್ಮೀಯ ವಿವಾಹವಾಗುತ್ತಿದ್ದಾರೆ. ವಿಶೇಷವೆಂದರೆ ಕುವೆಂಪು ಮಂತ್ರ ಮಾಂಗಲ್ಯದ ಆಶಯದಂತೆ ಇಬ್ಬರೂ ದಾಂಪತ್ಯ ಜೀವನಕ್ಕೆ ಕಾಲಿಡುತ್ತಿದ್ದು, ನಾಳೆ ಕನಕಪುರದ ಖಾಸಗೀ ರೆಸಾರ್ಟ್‌ನಲ್ಲಿ ಮದುವೆ ಆಗುತ್ತಿದ್ದಾರೆ..

ಮದುವೆಗೆ ಸಂಬಂಧಿಸಿದ ಆಮಂತ್ರಣ ಕರೆಯೋಲೆಯಲ್ಲಿ ಹೀಗೆ ಬರೆಯಲಾಗಿದೆ..

*ಪ್ರೀತಿ ವಿಶ್ವದ ಭಾಷೆ*
*ಹೃದಯದಿಂದ ಹೊರಹೊಮ್ಮಿದ ಈ ಪ್ರೇಮ ಕಾವ್ಯ*
*ದೇವರ ವಿರಚಿತ*
*ಶ್ರೀ ಕುವೆಂಪುರವರ ಮಂತ್ರ ಮಾಂಗಲ್ಯದ*
*ಆಶಯದಂತೆ ಜೊತೆಯಾಗಲಿರುವ*
*ಸುಹಾನ ಮತ್ತು ನಿತಿನ್*
*ನಮ್ಮ ನಡೆ ವಿಶ್ವಮಾನವತ್ವದೆಡೆ*
*ಸಹೃದಯಿಗಳೇ,*
*ಬನ್ನಿ, ಹರಸಿ, ಆಶೀರ್ವದಿಸಿ..*

ಸರಿಗಮಪ ಸೀಸನ್ 13ರ ಸ್ಪರ್ಧಿಯಾಗಿದ್ದ ಸುಹಾನಾ ಗಾಯಕಿಯಾಗಿ ವೃತ್ತಿಜೀವನ ಆರಂಭಿಸಿದ್ರು. ಶೋ ನಲ್ಲಿ ಹಾಡಿದ ಹಲವು ಗೀತೆಗಳ ಮೂಲಕ ಸಾಕಷ್ಟು ಚರ್ಚೆಗೆ ಗ್ರಾಸರಾಗಿದ್ರು.

ತಮ್ಮ ಬೋಲ್ಡ್ ಲುಕ್ಸ್ ಹಾಗೂ ಡೋಂಟ್ ಕೇರ್ ಸ್ವಭಾವದ ಮೂಲಕ ಸಾಕಷ್ಟು ಅಭಿಮಾನಿಗಳನ್ನ ಸಂಪಾದಿಸಿದ್ದಾರೆ ಸುಹಾನ. ಸದ್ಯ ಮದುವೆಗೆ ಸಜ್ಜಾಗಿರೋ ಸುಹಾನಾ ತಮ್ಮ ಪ್ರೀತಿಯ ಗುಟ್ಟು ಬಿಚ್ಚಿಟ್ಟಿದ್ದಾರೆ. ಬಹುಕಾಲದ ಗೆಳೆಯ ನಿತಿನ್ ಎಂಬುವವರನ್ನ ವರಿಸಲಿದ್ದಾರೆ ಸುಹಾನಾ. ಸುಹಾನಾ ಮದುವೆ ಆಗ್ತಿರೋ ಹುಡುಗ ನಿತಿನ್ ಶಿವಾಂಶ್. ರಂಗಭೂಮಿ ಕಲಾವಿದರು. ಪ್ರಸಿದ್ಧ ರಂಗ ತರಬೇತಿ ಕೇಂದ್ರ ನೀನಾಸಂನಲ್ಲಿ ತರಬೇತಿ ಪಡೆದಿದ್ದಾರೆ.



# ಶ್ರೀಮುರುಳಿ ಸಮ್ಮುಖದಲ್ಲಿ 'ಬಿಳಿಚುಕ್ಕಿ ಹಳ್ಳಿಹಕ್ಕಿ' ಟ್ರೈಲರ್



ಮಹಿರಾ ಖ್ಯಾತಿಯ ಮಹೇಶ್ ಗೌಡ ನಿರ್ಮಾಣ, ನಿರ್ದೇಶನ ಮಾಡಿ ನಟಿಸಿರುವ, ರೋರಿಂಗ್ ಸ್ಟಾರ್ ಶ್ರೀಮುರುಳಿ ಅರ್ಪಿಸುವ 'ಬಿಳಿಚುಕ್ಕಿ ಹಳ್ಳಿಹಕ್ಕಿ' ಚಿತ್ರ ಅಕ್ಟೋಬರ್ 24ರಂದು ರಾಜ್ಯಾದ್ಯಂತ ಬಿಡುಗಡೆಗೊಳ್ಳಲಿದೆ. ಈಗಾಗಲೇ ಹಾಡುಗಳ ಮೂಲಕ ಗಮನ ಸೆಳೆದಿರುವ ಈ ಸಿನಿಮಾದ ಟ್ರೈಲರ್ ಅನ್ನು ರೋರಿಂಗ್ ಸ್ಟಾರ್ ಶ್ರೀಮುರುಳಿ ಬಿಡುಗಡೆಗೊಳಿಸಿದ್ದಾರೆ. ಒಂದಿಡೀ ಸಿನಿಮಾದ ಅಂತಃ ಸತ್ವವನ್ನು ಆಳವಾಗಿ ಗ್ರಹಿಸಿಕೊಂಡು ಚಿತ್ರತಂಡದ ಶ್ರಮವನ್ನು ಮೆಚ್ಚಿಕೊಂಡಿದ್ದಾರೆ. ಭಾರತೀಯ ಸಿನಿಮಾ ರಂಗದಲ್ಲೇ ಮೊದಲೆಂಬಂಥಾ ಕಥಾ ಹಂದರ ಹೊಂದಿರುವ ಬಿಳಿಚುಕ್ಕಿ ಹಳ್ಳಿಹಕ್ಕಿ ಚಿತ್ರಕ್ಕೆ ಶುಭ ಕೋರಿದ್ದಾರೆ.

ಅತ್ಯಂತ ಹುರುಪಿನಿಂದ ಟ್ರೈಲರ್ ಬಿಡುಗಡೆ ಮಾಡಿ ಮಾತಾಡಿದ ರೋರಿಂಗ್ ಸ್ಟಾರ್ ಶ್ರೀಮುರುಳಿ , ಭಾರತೀಯ ಚಿತ್ರರಂಗದಲ್ಲಿಯೇ ಮೊದಲ ಸಲ ತೊನ್ನು ಎಂಬ ಸಮಸ್ಯೆಯ ಸುತ್ತ ರೂಪುಗೊಂಡಿರೋ ಚಿತ್ರವಿದು. ಸ್ವತಃ ಆ ಸಮಸ್ಯೆ ಹೊಂದಿರುವ ವ್ಯಕ್ತಿಯೇ ನಿರ್ದೇಶನ ಮಾಡಿ, ನಿರ್ಮಾಣದ ಜವಾಬ್ದಾರಿ ಹೊತ್ತುಕೊಂಡು ನಟಿಸಿರುವ ಮೆಚ್ಚುಗೆ ವ್ಯಕ್ತಪಡಿಸಿದರು. ವಿಟಲಿಗೋ ಕೇಂದ್ರಿತವಾದ ಈ ಸಿನಿಮಾವನ್ನು ಮನಸಾರೆ ಮೆಚ್ಚಿಕೊಂಡು ಹೆಮ್ಮೆಯಿಂದ ಅರ್ಪಿಸಲು ಮುಂದಾಗಿರೋದಾಗಿಯೂ ಶ್ರೀಮುರುಳಿ ಹೇಳಿದ್ದಾರೆ. ಕಥೆಯ ನೆಪದಲ್ಲಿ ನೆನಪೊಂದನ್ನ ಹಂಚಿಕೊಂಡ ರೋರಿಂಗ್ ಸ್ಟಾರ್ ಶಾಲಾ ದಿನಗಳಲ್ಲಿ ವಿಟಲಿಗೋ ಸಮಸ್ಯೆಯಿಂದ ಬಾಧಿತನಾಗಿದ್ದ ಗೆಳೆಯನ ಬಗ್ಗೆ ಹೇಳುತ್ತಲೇ, ವಿಟಲಿಗೋವನ್ನು ಸಮಸ್ಯೆ ಅಂದುಕೊಳ್ಳಬಾರದೆಂಬ ಸಂದೇಶವನ್ನೂ ರವಾನಿಸಿದರು.

# 2ನೇ ಮದುವೆ ಬಗ್ಗೆ ಫಸ್ಟ್ ರಿಯಾಕ್ಷನ್



ಒಳ್ಳೆಯ ಹುಡುಗ ಆಗಿರಬೇಕು, ನನಗೆ ಅವರು ಗೌರವ ಕೊಟ್ಟರೆ, ನಾನು ಅವರಿಗೆ ಗೌರವ ಕೊಡಬೇಕು. ಅಂದರೆ ಪರಸ್ಪರ ಗೌರವ ಕೊಡುವಂತಹ ಹುಡುಗ ಬೇಕು. ಜೀವನ ಖುಷಿಯಾಗಿ ಇರಬೇಕು. ಅಂತಹ ಟೈಂ ಬಂದಾಗ ಮದುವೆ ಆಗುತ್ತೇನೆ. ಆದರೆ ಈಗ ಸಿನಿಮಾ ಕಡೆಗೆ ಮಾತ್ರ ನನ್ನ ಗಮನ ಹರಿಸುತ್ತೇನೆ.

ಕನ್ನಡ ರ್ಯಾಪರ್ ಚಂದನ್ ಶೆಟ್ಟಿ ಅವರ ಮಾಜಿ ಹೆಂಡತಿ ನಟಿ ನಿವೇದಿತಾ ಗೌಡ ಅವರು ಇದೇ ಮೊದಲ ಬಾರಿಗೆ ತಮ್ಮ ಎರಡನೇ ಮದುವೆ ಕುರಿತು ಮಾತನಾಡಿದ್ದಾರೆ. ಮದುವೆ ಎಂದರೆ ಭಯ ಆಗುತ್ತಿದೆ ಎಂದು ಹೇಳಿದ್ದಾರೆ. ನ್ಯೂಸ್ ಫಸ್ಟ್ ಜೊತೆ ಮಾತನಾಡಿರುವ ನಟಿ ನಿವೇದಿತಾ ಗೌಡ ಅವರು, ಈಗ ಮದುವೆ ಎಂದರೆ ಭಯ ಆಗುತ್ತಿದೆ.

ಮನೆಯಲ್ಲಿ ನನ್ನ ಮೇಲೆ ಏನು ಒತ್ತಡ ಹಾಕುತ್ತಿಲ್ಲ. ಎರಡನೇ ಮದುವೆ ಆಗಬೇಕು ಅನಿಸಿದಾಗ ಆಗುತ್ತೇನೆ. ಆದರೂ ಮದುವೆ ಎಂದರೆ ಭಯ ಇದೆ. ನನಗೆ ಸರಿ ಅನಿಸಿದ ಹುಡುಗ ಸಿಗುವ ತನಕ ಮದುವೆ ಆಗಲ್ಲ. ಒಳ್ಳೆಯ ಹುಡುಗ ಸಿಕ್ಕರೇ ಖಂಡಿತ ಮದುವೆ ಆಗುತ್ತೇನೆ ಎಂದು ಹೇಳಿದ್ದಾರೆ. ಒಳ್ಳೆಯ ಹುಡುಗ ಆಗಿರಬೇಕು, ನನಗೆ ಅವರು ಗೌರವ ಕೊಟ್ಟರೆ, ನಾನು ಅವರಿಗೆ ಗೌರವ ಕೊಡಬೇಕು. ಅಂದರೆ ಪರಸ್ಪರ ಗೌರವ ಕೊಡುವಂತಹ ಹುಡುಗ ಬೇಕು. ಜೀವನ ಖುಷಿಯಾಗಿ ಇರಬೇಕು. ಅಂತಹ ಟೈಂ ಬಂದಾಗ ಮದುವೆ ಆಗುತ್ತೇನೆ. ಆದರೆ ಈಗ ಸಿನಿಮಾ ಕಡೆಗೆ ಮಾತ್ರ ನನ್ನ ಗಮನ ಹರಿಸುತ್ತೇನೆ. ಚಂದನ್ ಶೆಟ್ಟಿ ಜೊತೆ ಸಂಪರ್ಕ ಇಲ್ಲ. ಯಾವುದು ಮಾತುಕತೆಗಳು ಕೂಡ ಇಲ್ಲ ಎಂದು ನಿವೇದಿತಾ ಹೇಳಿದ್ದಾರೆ. ಇನ್ನು ಇಷ್ಟು ದಿನ ಕಿರುತೆರೆಯಲ್ಲಿ ಎಲ್ಲರನ್ನು ನಗಿಸಿದ್ದ ನಿವೇದಿತಾ ಗೌಡ ಅವರು ಸ್ಯಾಂಡಲ್‌ವುಡ್‌ನ ಬೆಳ್ಳಿತೆರೆಗೆ ಎಂಟ್ರಿಯಾಗಿದ್ದಾರೆ.

# ಎಲ್‌ಎಸ್‌ಜಿ ತಂಡಕ್ಕೆ ಕೇನ್ ವಿಲಿಯಮ್ಸನ್ ಎಂಟ್ರಿ!

ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-19ರ ಆರಂಭಕ್ಕೂ ಮುನ್ನ ಲಕ್ನೋ ಸೂಪರ್ ಜೈಂಟ್ಸ್ ಫ್ರಾಂಚೈಸಿ ನ್ಯೂಝಿಲೆಂಡ್‌ನ ಕೇನ್ ವಿಲಿಯಮ್ಸನ್ ಅವರನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿದ್ದಾರೆ. ಆದರೆ ಆಟಗಾರನಾಗಿ ಅಲ್ಲ ಎಂಬುದು ವಿಶೇಷ. ಅಂದರೆ ಮುಂಬರುವ ಐಪಿಎಲ್‌ನಲ್ಲಿ ವಿಲಿಯಮ್ಸನ್ ಎಲ್‌ಎಸ್‌ಜಿ ತಂಡ ಕಾರ್ಯತಂತ್ರದ ಸಲಹೆಗಾರರಾಗಿ ಕಾರ್ಯ ನಿರ್ವಹಿಸಲಿದ್ದಾರೆ ಎಂದು ವರದಿಯಾಗಿದೆ. ಕೇನ್ ವಿಲಿಯಮ್ಸನ್ ಈ ಹಿಂದೆ ಸನ್ ರೈಸರ್ಸ್ ಹೈದರಾಬಾದ್ ಹಾಗೂ ಗುಜರಾತ್ ಟೈಟಾನ್ಸ್ ತಂಡದಲ್ಲಿ ಕಾಣಿಸಿಕೊಂಡಿದ್ದರು. ಇದಾಗ್ಯೂ 2025 ರಲ್ಲಿ ನಡೆದ ಮೆಗಾ ಹರಾಜಿನಲ್ಲಿ ವಿಲಿಯಮ್ಸನ್ ಅವರನ್ನು ಯಾವುದೇ ಫ್ರಾಂಚೈಸಿ ಖರೀದಿಸಿರಲಿಲ್ಲ. ಹೀಗಾಗಿ ನ್ಯೂಝಿಲೆಂಡ್ ತಂಡದ ಸ್ಟಾರ್ ಆಟಗಾರ ಐಪಿಎಲ್‌ನಲ್ಲಿ ಕಾಮೆಂಟೇಟರ್ ಆಗಿ ಕಾಣಿಸಿಕೊಂಡಿದ್ದರು. ಇದೀಗ ಐಪಿಎಲ್ 2026ರ ಆರಂಭಕ್ಕೂ ಮುನ್ನ ಹೊಸ ಜವಾಬ್ದಾರಿವಹಿಸಿಕೊಳ್ಳಲು ಮುಂದಾಗಿರುವುದು ಅಚ್ಚರಿಗೆ ಕಾರಣವಾಗಿದೆ. ಅಂದರೆ ಈ ಬಾರಿ ನಡೆಯಲಿರುವ ಮಿನಿ ಹರಾಜಿನಲ್ಲಿ ಕೇನ್ ವಿಲಿಯಮ್ಸನ್ ಕಾಣಿಸಿಕೊಳ್ಳುವುದಿಲ್ಲ ಎಂಬುದು ಬಹುತೇಕ ಖಚಿತ. ಇನ್ನು ಕಾಣಿಸಿಕೊಂಡರೂ ಲಕ್ನೋ ಸೂಪರ್ ಜೈಂಟ್ಸ್ ಫ್ರಾಂಚೈಸಿಯೇ ಅವರನ್ನು ಖರೀದಿಸುವ ಸಾಧ್ಯತೆಯಿದೆ.

**ಕೇನ್ ವಿಲಿಯಮ್ಸನ್ ಐಪಿಎಲ್ ವೃತ್ತಿಜೀವನ:** ಕೇನ್ ವಿಲಿಯಮ್ಸನ್ ಐಪಿಎಲ್‌ನ ಯಶಸ್ವಿ ಆಟಗಾರರಲ್ಲಿ ಒಬ್ಬರು. ಸನ್‌ರೈಸರ್ಸ್ ಹೈದರಾಬಾದ್ ಹಾಗೂ ಗುಜರಾತ್ ಟೈಟಾನ್ಸ್ ಪರ ಒಟ್ಟು 79 ಐಪಿಎಲ್ ಪಂದ್ಯಗಳಲ್ಲಿ ಕಣಕ್ಕಿಳಿದಿರುವ ವಿಲಿಯಮ್ಸನ್ 18 ಅರ್ಧಶತಕಗಳೊಂದಿಗೆ 2128 ರನ್ ಗಳಿಸಿದ್ದಾರೆ. ಅಲ್ಲದೆ 2016 ರಲ್ಲಿ ಸನ್ ರೈಸರ್ಸ್ ಹೈದರಾಬಾದ್ ತಂಡದ ನಾಯಕನಾಗಿ ಎಸ್‌ಆರ್‌ಹೆಚ್ ಪಡೆಯನ್ನು ಫೈನಲ್‌ಗೆ ಕೊಂಡೊಯ್ದಿದ್ದರು.



ಎಲ್‌ಎಸ್‌ಜಿ ತಂಡ ಕಾರ್ಯತಂತ್ರದ ಸಲಹೆಗಾರ

ಆದರೆ ಕಳೆದ ಬಾರಿ ಐಪಿಎಲ್ ಮೆಗಾ ಹರಾಜಿನಲ್ಲಿ 2 ಕೋಟಿ ರೂ. ಮೂಲ ಬೆಲೆಯೊಂದಿಗೆ ಕಾಣಿಸಿಕೊಂಡಿದ್ದ ಕೇನ್ ವಿಲಿಯಮ್ಸನ್ ಅವರ ಖರೀದಿಗೆ ಯಾವುದೇ ಫ್ರಾಂಚೈಸಿಗಳು ಆಸಕ್ತಿ ತೋರಿರಲಿಲ್ಲ. ಇದಕ್ಕೆ ಮುಖ್ಯ ಕಾರಣ ಅವರ ವಯಸ್ಸು.

ಅಂದರೆ 35 ವರ್ಷದ ವಿಲಿಯಮ್ಸನ್‌ಗಾಗಿ ಕೋಟಿ ಮೊತ್ತ ನೀಡಲು ಎಲ್ಲಾ ಫ್ರಾಂಚೈಸಿಗಳು ಹಿಂದೇಟು ಹಾಕಿದ್ದರು. ಇದೀಗ ಲಕ್ನೋ ಸೂಪರ್ ಜೈಂಟ್ಸ್ ಫ್ರಾಂಚೈಸಿ ಮಾಲೀಕರಾದ ಸಂಜೀವ್ ಗೊಯೆಂಕಾ ಅವರ ಮನವಿ ಮೇರೆಗೆ ಕೇನ್ ವಿಲಿಯಮ್ಸನ್ ಅವರು ಎಲ್‌ಎಸ್‌ಜಿ ತಂಡ ಕಾರ್ಯತಂತ್ರದ ಸಲಹೆಗಾರರಾಗಿ ಕಾರ್ಯನಿರ್ವಹಿಸಲು ಒಪ್ಪಿಕೊಂಡಿದ್ದಾರೆ ಎಂದು ವರದಿಯಾಗಿದೆ.

ಐಪಿಎಲ್ ಸೀಸನ್-19 ಆರಂಭಕ್ಕೂ ಮುನ್ನ ಲಕ್ನೋ ಸೂಪರ್ ಜೈಂಟ್ಸ್ ಫ್ರಾಂಚೈಸಿ ತನ್ನ ಸಿಬ್ಬಂದಿ ವರ್ಗದಲ್ಲೂ ಮಹತ್ವದ ಬದಲಾವಣೆ ಮಾಡಿಕೊಂಡಿದೆ. ಅದರಂತೆ ಎಲ್‌ಎಸ್‌ಜಿಯ ಮುಖ್ಯ ಕೋಚ್ ಆಗಿ ಜಸ್ಟಿನ್ ಲ್ಯಾಂಗರ್ ಮುಂದುವರೆಯಲಿದ್ದು, ಸ್ಪಿನ್ ಬೌಲಿಂಗ್ ಕೋಚ್ ಕಾರ್ಲ್ ಕ್ರೋವ್ ನೇಮಕವಾಗಿದ್ದಾರೆ.

# ಆಸ್ಟ್ರೇಲಿಯಾ ಸರಣಿಗೂ ಮುನ್ನ ಕೊಹ್ಲಿ ಟ್ವೀಟ್

ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಏಕದಿನ ಸರಣಿಯು ಅಕ್ಟೋಬರ್ 19 ರಿಂದ ಶುರುವಾಗಲಿದೆ. ಈ ಸರಣಿಯ ಮೂಲಕ ವಿರಾಟ್ ಕೊಹ್ಲಿ ಮತ್ತೆ ಬ್ಲೂ ಜೆರ್ಸಿಯಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಅಂದರೆ ಕಿಂಗ್ ಕೊಹ್ಲಿ ಚಾಂಪಿಯನ್ಸ್ ಟ್ರೋಫಿ ಫೈನಲ್ ಬಳಿಕ ಟೀಮ್ ಇಂಡಿಯಾ ಪರ ಒಂದೇ ಮ್ಯಾಚ್ ಆಡಿಲ್ಲ. ಇದೀಗ ಆಸೀಸ್ ಪಿಚ್‌ನಲ್ಲಿ ಕಣಕ್ಕಿಳಿಯಲು ಸಜ್ಜಾಗಿರುವ ಕೊಹ್ಲಿ ಸರಣಿ ಆರಂಭಕ್ಕೂ ಮುನ್ನ ಹೊಸ ಚರ್ಚೆಯನ್ನು ಹುಟ್ಟು ಹಾಕಿದ್ದಾರೆ. ಅದು ಸಹ ನಿಗೂಢ ಅರ್ಥ ಹೊಂದಿರುವ ಟ್ವೀಟ್‌ನೊಂದಿಗೆ..!

ಸಾಮಾನ್ಯವಾಗಿ ವಿರಾಟ್ ಕೊಹ್ಲಿ ತಮ್ಮ ವೈಯುಕ್ತಿಕ ವಿಚಾರಗಳನ್ನು ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಳ್ಳುವುದಿಲ್ಲ. ಅದರಲ್ಲೂ ಅಭಿಮಾನಿಗಳ ತಲೆಗೆ ಹುಳ ಬಿಡುವಂತಹ ಟ್ವೀಟ್‌ಗಳಿಂದ ಕೊಹ್ಲಿ ದೂರ. ಆದರೆ ಈ ಬಾರಿ ಕೊಹ್ಲಿ ಹಂಚಿಕೊಂಡಿರುವ ಟ್ವೀಟ್‌ವೊಂದು ಚರ್ಚೆಗೆ ಕಾರಣವಾಗಿದೆ.





ಆಸೀಸ್ ಪಿಚ್‌ನಲ್ಲಿ ಕಣಕ್ಕಿಳಿಯಲು ಸಜ್ಜು

ನೀವು ನಿಜವಾಗಲೂ ಸೋಲುವುದು ಯಾವಾಗ ಅಂದರೆ, ನೀವು ಬಿಟ್ಟು ಕೊಡಲು ನಿರ್ಧರಿಸಿದಾಗ ಎಂಬಾರ್ಥದ ವಾಕ್ಯವನ್ನು ವಿರಾಟ್ ಕೊಹ್ಲಿ ತನ್ನ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ. ಇತ್ತ ಆಸ್ಟ್ರೇಲಿಯಾ ಸರಣಿಗೂ ಮುನ್ನ ಕೊಹ್ಲಿ ಹೀಗಂದಿರುವುದು ಯಾಕೆ ಎಂಬ ಪ್ರಶ್ನೆಯೊಂದು ಅಭಿಮಾನಿಗಳಲ್ಲಿ ಮೂಡಿತ್ತು.

ಅದರಲ್ಲೂ ಕೆಲವರು ಇದು ಟೀಮ್ ಇಂಡಿಯಾ ಕೋಚ್ ಗೌತಮ್ ಗಂಭೀರ್‌ಗೆ ನೀಡಿದ ತಿರುಗೇಟು ಎಂದು ಪ್ರತಿಕ್ರಿಯಿಸಿದ್ದರು. ಆದರೆ ಟ್ವೀಟ್ ವೈರಲ್ ಆಗುತ್ತಿದ್ದಂತೆ ವಿರಾಟ್ ಕೊಹ್ಲಿಯಿಂದಲೇ ಸ್ಪಷ್ಟನೆ ಹೊರಬಿದ್ದಿದೆ.

ತನ್ನ ಟ್ವೀಟ್‌ಗೆ ಜಾಹೀರಾತುವೊಂದರ ವಿಡಿಯೋ ಮೂಲಕ ಪ್ರತಿಕ್ರಿಯಿಸಿರುವ ವಿರಾಟ್ ಕೊಹ್ಲಿ, ತಾನು ಹೇಳಿರುವುದು ಜಾಹೀರಾತಿಗೆ ಸಂಬಂಧಿಸಿದ ವಿಷಯ ಎಂದು ಸಾರಿದ್ದಾರೆ. ಈ ಮೂಲಕ ಸೋಷಿಯಲ್ ಮೀಡಿಯಾದಲ್ಲಿ ಶುರುವಾಗಿದ್ದ ಚರ್ಚೆಗೆ ಬ್ರೇಕ್ ಹಾಕಿದ್ದಾರೆ.



# ಪಾಕ್ ಟಿ20 ತಂಡದ ನಾಯಕತ್ವ ಬದಲಾವಣೆ

ಭಾರತದ ವಿರುದ್ಧ ಹ್ಯಾಟ್ರಿಕ್ ಸೋಲು

ಏಷ್ಯಾಕಪ್‌ನಲ್ಲಿ ಪಾಕಿಸ್ತಾನ ತಂಡ ಫೈನಲ್ ತಲುಪಿತ್ತಾದರೂ, ಟೀಂ ಇಂಡಿಯಾ ವಿರುದ್ಧ ಮಾತ್ರ ಅದರ ಪ್ರದರ್ಶನ ತೀರ ಕಳಪೆಯಾಗಿತ್ತು. ಲೀಗ್ ಹಂತದಿಂದ ಹಿಡಿದು ಫೈನಲ್‌ವರೆಗೆ ಭಾರತದ ವಿರುದ್ಧ ಆಡಿದ್ದ ಮೂರಕ್ಕೆ ಮೂರು ಪಂದ್ಯಗಳಲ್ಲಿ ಪಾಕಿಸ್ತಾನ ತಂಡ ಏಕಪಕ್ಷೀಯ ಸೋಲನುಭವಿಸಿತ್ತು. ಈ ಸೋಲು ಪಾಕ್ ತಂಡವನ್ನು ಭಾರಿ ಮುಜುಗರಕ್ಕೀಡುಮಾಡಿತ್ತು.

ಇದೀಗ ಈ ಸೋಲಿನ ನಂತರ, ಪಾಕಿಸ್ತಾನದ ಟಿ20 ತಂಡದಲ್ಲಿರುವ ಪ್ರಮುಖ ಬದಲಾವಣೆಯಾಗಲಿದೆ ಎಂದು ವರದಿಯಾಗಿದೆ. ಪ್ರಸ್ತುತ ಪಾಕಿಸ್ತಾನ ಟಿ20 ತಂಡವನ್ನು ಮುನ್ನಡೆಸುತ್ತಿರುವ ನಾಯಕ ಸಲ್ಮಾನ್ ಆಘಾ ಅವರನ್ನು ಈ ಸ್ಥಾನದಿಂದ ಕೆಳಗಿಳಿಸಿ, ಆಲ್‌ರೌಂಡರ್ ಶದಾಬ್ ಖಾನ್ ಅವರನ್ನು ಟಿ20 ತಂಡವನ್ನು ಮುನ್ನಡೆಸಲು ನೇಮಿಸಬಹುದು ಎಂದು ವರದಿಯಾಗಿದೆ. ವಾಸ್ತವವಾಗಿ ಈ ವರ್ಷದ ಆರಂಭದಲ್ಲಿ ಭುಜದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಶದಾಬ್ ಖಾನ್ ಪ್ರಸ್ತುತ ಪಾಕಿಸ್ತಾನ ತಂಡದಿಂದ ಹೊರಗಿದ್ದಾರೆ. ಆದಾಗ್ಯೂ ಈ ಅನುಭವಿ ಆಲ್ ರೌಂಡರ್ ಮುಂದಿನ ತಿಂಗಳ ವೇಳೆಗೆ ಫಿಟ್ ಆಗಲಿದ್ದು, ಪಾಕಿಸ್ತಾನ ಟಿ20 ತಂಡಕ್ಕೆ ಮರಳಿದ ನಂತರ ತಂಡದ ನಾಯಕತ್ವವನ್ನು ಅವರಿಗೆ ವಹಿಸಲಾಗುವುದು ಎಂದು ಪಾಕಿಸ್ತಾನಿ ಮಾಧ್ಯಮ ವರದಿ ಮಾಡಿದೆ. 70 ಏಕದಿನ ಮತ್ತು 112 ಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಡಿರುವ ಶದಾಬ್, ಜೂನ್ ಆರಂಭದಲ್ಲಿ ಬಾಂಗ್ಲಾದೇಶ ವಿರುದ್ಧದ ತವರು ಸರಣಿಯಲ್ಲಿ ಕೊನೆಯ ಬಾರಿಗೆ ಆಡಿದ್ದರು, ಅಲ್ಲಿ ಅವರು ಭುಜದ ಗಾಯಕ್ಕೆ ತುತ್ತಾಗಿದ್ದರು. ಗಾಯಕ್ಕೆ ಮುನ್ನ, ಅವರು ಟಿ20 ತಂಡದ ಉಪನಾಯಕರಾಗಿದ್ದರು. ಅಲ್ಲದೆ ಶದಾಬ್ ಖಾನ್ ನಾಯಕತ್ವದ ಅನುಭವವನ್ನು ಹೊಂದಿದ್ದು, ಈ ಹಿಂದೆ ಪಾಕಿಸ್ತಾನ ತಂಡದ ನಾಯಕತ್ವ ಮತ್ತು ಪಾಕಿಸ್ತಾನ ಸೂಪರ್ ಲೀಗ್‌ನ ನಾಯಕತ್ವವನ್ನೂ ವಹಿಸಿದ್ದರು. ಪಾಕಿಸ್ತಾನ ಕ್ರಿಕೆಟ್ ಮಂಡಳಿಯು ಸಲ್ಮಾನ್ ಆಘಾ ಅವರ ಮೇಲಿನ ವಿಶ್ವಾಸವನ್ನು ಕಳೆದುಕೊಂಡಿದೆ. ಇದಕ್ಕೆ ಕಾರಣ ಏಷ್ಯಾಕಪ್‌ನಲ್ಲಿ ಅವರ ನಾಯಕತ್ವ ಮತ್ತು ಆಟಗಾರನಾಗಿ ಅವರ ಪ್ರದರ್ಶನ. ಅಲ್ಲದೆ ತಂಡದಲ್ಲಿ ಅವರ ಸ್ಥಾನದ ಬಗ್ಗೆಯೂ ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಪಾಕಿಸ್ತಾನ, ಶ್ರೀಲಂಕಾ ಮತ್ತು ಅಫ್ಘಾನಿಸ್ತಾನ ನಡುವಿನ ಮುಂಬರುವ ಟಿ20 ತ್ರಿಕೋನ ಸರಣಿಯಲ್ಲಿ ಶಾದಾಬ್ ತಂಡವನ್ನು ಮುನ್ನಡೆಸಲಿದ್ದಾರೆ ಎಂದು ವರದಿಗಳು ಹೇಳುತ್ತಿವೆ.



# ಇಬ್ಬರು ಆಟಗಾರರಿಂದ ಸಿಡಿಯಿತು ದ್ವಿಶತಕ



ಸುಮಿತ್ ಆನಂದ್ ದ್ವಿಶತಕ

2025 ರ ರಣಜಿ ಟ್ರೋಫಿಯಲ್ಲಿ ಒಂದೇ ದಿನ, ಒಂದೇ ಹೆಸರಿನ ಇಬ್ಬರು ಆಟಗಾರರು ದ್ವಿಶತಕ ಸಿಡಿಸಿ ಮಿಂಚಿದ್ದಾರೆ. ಬಿಹಾರದ ಆಯುಷ್ ಆನಂದ್ ಲೋಹರುಕ ಅರುಣಾಚಲ ಪ್ರದೇಶ ವಿರುದ್ಧ 226 ರನ್ ಬಾರಿಸಿದರೆ, ದೆಹಲಿಯ ಆಯುಷ್ ಸುಮಿತ್ ದೋಸೆಜಾ ಹೈದರಾಬಾದ್ ವಿರುದ್ಧ 209 ರನ್ ಗಳಿಸಿದರು.

2025 ರ ರಣಜಿ ಟ್ರೋಫಿಯ ಎರಡನೇ ದಿನದಾಟದಂದೂ ಬೇರೆ ಬೇರೆ ತಂಡದ ಪರ ಆಡುತ್ತಿರುವ ಒಂದೇ ಹೆಸರಿನ ಇಬ್ಬರು ಆಟಗಾರರು ದ್ವಿಶತಕ ಸಿಡಿಸಿ ಮಿಂಚಿದ್ದಾರೆ. ಮೊದಲನೇ ದ್ವಿಶತಕವನ್ನು ಬಿಹಾರ ತಂಡದ ಪರ ಆಡುತ್ತಿರುವ ಆಯುಷ್ ಆನಂದ್ ಲೋಹರುಕ ಅರುಣಾಚಲ ಪ್ರದೇಶ ತಂಡದ ವಿರುದ್ಧ ಬಾರಿಸಿದರೆ, ಎರಡನೇ ದ್ವಿಶತಕವನ್ನು ಡೆಲ್ಲಿ ಪರ ಆಡುತ್ತಿರುವ ಆಯುಷ್ ಸುಮಿತ್ ದೋಸೆಜಾ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ದಾಖಲಿಸಿದ್ದಾರೆ. ಇವರಿಬ್ಬರ ದ್ವಿಶತಕದ ಇನ್ನಿಂಗ್ಸ್ ನಿಂದಾಗಿ ಎರಡೂ ತಂಡಗಳು ಪಂದ್ಯದಲ್ಲಿ ಬಿಗಿ ಹಿಡಿತ ಸಾಧಿಸಿವೆ.

ಮೊದಲಿಗೆ ಬಿಹಾರದ ಪಾಟ್ನಾದಲ್ಲಿರುವ ಮೊಯಿನ್-ಉಲ್-ಹಕ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಬಿಹಾರ ಹಾಗೂ ಅರುಣಾಚಲ ಪ್ರದೇಶ ತಂಡಗಳ ನಡುವಿನ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಅರುಣಾಚಲ ಪ್ರದೇಶ ತಂಡವನ್ನು 105 ರನ್‌ಗಳಿಗೆ ಆಲೌಟ್ ಮಾಡಿದ ಬಿಹಾರ ತಂಡ, ತನ್ನ ಮೊದಲ ಇನ್ನಿಂಗ್ಸ್ ಅನ್ನು 542 ರನ್‌ಗಳಿಗೆ ಡಿಕ್ಲೇರ್ ಮಾಡಿಕೊಂಡಿತು.

**ಆಯುಷ್ ಆನಂದ್ ದ್ವಿಶತಕ**

ತಂಡದ ಪರ ಅತ್ಯಧಿಕ ರನ್ ಕಲೆಹಾಕಿದ ಆಯುಷ್ ಆನಂದ್ ಲೋಹರುಕ 247 ಎಸೆತಗಳಲ್ಲಿ 37 ಬೌಂಡರಿ ಹಾಗೂ 1 ಸಿಕ್ಸರ್ ಸಹಿತ 226 ರನ್ ಬಾರಿಸಿದರು. ಅವರನ್ನು ಹೊರತುಪಡಿಸಿ ಅರ್ನವ್ ನವಲ್ ಕಿಶೋರ್ (52), ಸಕಿಬುಲ್ ಗನಿ (59), ಬಿಪಿನ್ ಸೌರಭ್ (52), ಸಚಿನ್ ಕುಮಾರ್ (75) ಅರ್ಧಶತಕದ ಇನ್ನಿಂಗ್ಸ್ ಆಡಿದರು. ಹೀಗಾಗಿ ತಂಡ ಬೃಹತ್ ಮೊತ್ತ ಕಲೆಹಾಕಿತು.

**ಆಯುಷ್ ಸುಮಿತ್ ದ್ವಿಶತಕ**

ಇತ್ತ ದೆಹಲಿ, ಹೈದರಾಬಾದ್ ನಡುವಿನ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡುತ್ತಿರುವ ದೆಹಲಿ ತಂಡ ಎರಡನೇ ದಿನದಾಟದ ಟೀ ವಿರಾಮದ ವೇಳೆಗೆ ಕೇವಲ 4 ವಿಕೆಟ್ ಕಳೆದುಕೊಂಡು 474 ರನ್ ಕಲೆಹಾಕಿದೆ. ತಂಡದ ಪರ ಇದುವರೆಗೆ ಅತ್ಯಧಿಕ ಇನ್ನಿಂಗ್ಸ್ ಆಡಿರುವ ಆಯುಷ್ ಸುಮಿತ್ ದೋಸೆಜಾ 279 ಎಸೆತಗಳಲ್ಲಿ 25 ಬೌಂಡರಿ ಹಾಗೂ 5 ಸಿಕ್ಸರ್ ಸಹಿತ 209 ರನ್ ಕಲೆಹಾಕಿದ್ದಾರೆ. ಹಾಗೆಯೇ ದ್ವಿಶತಕದಂಚಿನಲ್ಲಿರುವ ಮತ್ತೊಬ್ಬ ಆಟಗಾರ ಸನತ್ ಸಾಂಗ್ವಾನ್ ಕೂಡ ಇದುವರೆಗೆ 448 ಎಸೆತಗಳನ್ನು ಎದುರಿಸಿ 18 ಬೌಂಡರಿ ಹಾಗೂ 1 ಸಿಕ್ಸರ್ ಸಹಿತ ಅಜೇಯ 175 ರನ್ ಬಾರಿಸಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966